ಬುಧವಾರ ಜೂನ್ 17 2026 ₹ 7.00

www.prajavani.net

ಪ್ರಜಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಪ್ರತಿಭಟನೆ
ಆದಿವಾಸಿಗಳ ಪೌಷ್ಟಿಕ ಆಹಾರ ಸಾಮಗ್ರಿ ಕಿಟ್ ವಿತರಣೆಯಲ್ಲಿ ವಿಳಂಬ ಖಂಡಿಸಿ ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ ಸದಸ್ಯರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು

ವೈದ್ಯರ ಚೀಟಿ ಇಲ್ಲದೆ ಸಿರಪ್ ಇಲ್ಲ

ಕೆಮ್ಮಿನ ಔಷಧ: ಆರೋಗ್ಯ ಸಚಿವಾಲಯದಿಂದ ನಿಯಮಗಳ ತಿದ್ದುಪಡಿ

ನವದೆಹಲಿ(ಪಿಟಿಐ): ಔಷಧಗಳ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಬಗೆಯ ಸಿರಪ್‌ಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ತಿದ್ದುಪಡಿ ಮಾಡಿದೆ.

ವೈದ್ಯರ ಶಿಫಾರಸು ಇಲ್ಲದೆಯೇ ಈ ಸಿರಪ್‌ಗಳ ಮಾರಾಟವನ್ನು ನಿಷೇಧಿಸುವುದು ಸೇರಿದಂತೆ ಹಲವು ಅಂಶಗಳನ್ನು ತಿದ್ದುಪಡಿ ಒಳಗೊಂಡಿದೆ. ಈ ಮೂಲಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಚಿವಾಲಯವು ಈ ತಿದ್ದುಪಡಿ ಕುರಿತಂತೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಕರಡು ಅಧಿಸೂಚನೆ ಹೊರಡಿಸಿ, ಎಲ್ಲ ಭಾಗೀದಾರರಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿತ್ತು. ಈಗ, ಈ ಕುರಿತು ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟಿಸಲಾಗಿದೆ.

ಈ ಮೊದಲಿನ ನಿಯಮಗಳ ಪ್ರಕಾರ, 'ಒಂದು ಸಾವಿರಕ್ಕೂ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳಲ್ಲಿನ ಚಿಲ್ಲರೆ ವರ್ತಕರು ಕೆಮ್ಮಿನ ಸಿರಪ್‌ಗಳನ್ನು ಮಾರಾಟ ಮಾಡಬಹುದಿತ್ತು. ಷೆಡ್ಯೂಲ್ ಕೆ(ಕೆಮ್ಮಿನ ಸಿರಪ್ ಸೇರಿ ಕೆಲ ನಿರ್ದಿಷ್ಟ ಔಷಧಗಳ ಮಾರಾಟಕ್ಕೆ ಸಂಬಂಧಿಸಿದ್ದು) ವ್ಯಾಪ್ತಿಯ ಔಷಧಗಳ ಮಾರಾಟಕ್ಕೆ ಸಂಬಂಧಿಸಿ ನಿಯಮಗಳು ಈ ವರ್ತಕರಿಗೆ ಅನ್ವಯವಾಗುತ್ತಿರಲಿಲ್ಲ. ತಿದ್ದುಪಡಿಯಿಂದಾಗಿ, ಈಗ ಈ ವರ್ತಕರು ಕೆಮ್ಮಿನ ಸಿರಪ್‌ಗಳನ್ನು ಮಾರಾಟ ಮಾಡುವಂತಿಲ್ಲ' ಎಂದು ಸಚಿವಾಲಯ ತಿಳಿಸಿದೆ.

ಸಿರಪ್‌ಗಳ ಗುಣಮಟ್ಟ, ಮಾರಾಟ ನಿಯಮಗಳ ಪಾಲನೆ ಕುರಿತು ಮೇಲ್ವಿಚಾರಣೆ, ಅವುಗಳ ಉತ್ಪಾದಕರಿಂದ ಹಿಡಿದು ಮಾರಾಟಗಾರರವರೆಗೆ ಎಲ್ಲ ಹಂತದ ಕಣ್ಗಾವಲು ವ್ಯವಸ್ಥೆಯನ್ನು ಈ ತಿದ್ದುಪಡಿಯು ಬಲಪಡಿಸಲಿದೆ ಎಂದು ಮೂಲಗಳು ಹೇಳಿವೆ.

'ಉತ್ಪಾದಕರು, ವಿತರಕರು ಹಾಗೂ ಚಿಲ್ಲರೆ ವ್ಯಾಪಾರಿಗಳು ಕೆಮ್ಮಿನ ಸಿರಪ್ ಕುರಿತಂತೆ ಡ್ರಗ್ಸ್ ಮತ್ತು ಸೌಂದರ್ಯ ವರ್ಧಕಗಳ ಕಾಯ್ದೆ, 1940ರ ಅಡಿ ರೂಪಿಸಲಾಗಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು' ಎಂದು ಸಚಿವಾಲಯ ಹೇಳಿದೆ.

ಮುಖ್ಯಾಂಶಗಳು

- ಔಷಧಗಳ ಗುಣಮಟ್ಟ, ರೋಗಿಗಳ ಸುರಕ್ಷತೆ ದೃಷ್ಟಿಯಿಂದ ಕ್ರಮ
- ಔಷಧಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮ ಇನ್ನಷ್ಟು ಬಿಗಿ
- ಅಧಿಸೂಚನೆ ಪ್ರಕಟ

ತಿದ್ದುಪಡಿ ಏಕೆ?

ಕೆಮ್ಮಿನ ಸಿರಪ್ 'ಕೋಲ್ಡ್ರಿಫ್' ಸೇವನೆ ಬಳಿಕ ಮೂತ್ರಪಿಂಡ ವೈಫಲ್ಯದಿಂದಾಗಿ ಮಧ್ಯಪ್ರದೇಶದ ಛಿಂದ್ವಾಡ ಜಿಲ್ಲೆಯಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ 14 ಮಕ್ಕಳು ಮೃತಪಟ್ಟಿದ್ದರು. ಇದು ದೇಶದಲ್ಲಿನ ಕೆಮ್ಮಿನ ಸಿರಪ್‌ಗಳ ಗುಣಮಟ್ಟದ ಬಗ್ಗೆ ಭಾರಿ ಚರ್ಚೆಗೆ ಕಾರಣವಾಗಿತ್ತು.

ಈ ಘಟನೆ ಬೆನ್ನಲ್ಲೇ, ತನಿಖೆಗಾಗಿ ಮಧ್ಯಪ್ರದೇಶ ಸರ್ಕಾರ ಎಸ್‌ಐಟಿ ರಚನೆ ಮಾಡಿತ್ತು. ಕೆಮ್ಮಿನ ಸಿರಪ್‌ನ ಮಾದರಿಗಳನ್ನು ಪರೀಕ್ಷಿಸಿದಾಗ, ಅದರಲ್ಲಿ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಎನ್ನುವ ಅಪಾಯಕಾರಿ ರಾಸಾಯನಿಕ ಇದ್ದುದು ದೃಢಪಟ್ಟಿತ್ತು.

ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನ ತಯಾರಿಕಾ ಕಂಪನಿ, ತಮಿಳುನಾಡಿನ ಸ್ರೇಸನ್ ಫಾರ್ಮಾಸ್ಯುಟಿಕಲ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

ಕೆಮ್ಮಿನ ಸಿರಪ್‌ಗಳ ಪರೀಕ್ಷೆ ಹಾಗೂ ಅವುಗಳ ತಯಾರಕರ ಕುರಿತು ರಾಷ್ಟ್ರವ್ಯಾಪಿ ತಪಾಸಣೆಗೆ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಕ್ರಮ ಕೈಗೊಂಡಿತ್ತು.

ಕೆಮ್ಮಿನ ಸಿರಪ್ ತಯಾರಕ ಕಂಪನಿಗಳ ಪಟ್ಟಿಯನ್ನು ಒದಗಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿತ್ತು. ಕೆಮ್ಮಿನ ಸಿರಪ್‌ಗಳ ಮಾರಾಟವನ್ನು ನಿಯಂತ್ರಿಸುವ ಜೊತೆಗೆ ಅವುಗಳ ಗುಣಮಟ್ಟ ಕಾಪಾಡಬೇಕು ಎಂಬ ಉದ್ದೇಶದಿಂದ ಕೇಂದ್ರ ಸಚಿವಾಲಯ ಈಗ ನಿಯಮಗಳಿಗೆ ತಿದ್ದುಪಡಿ ತಂದಿದೆ.

ಭಾರತೀಯರ ಸಾವು: ಟ್ರಂಪ್ ಸಮ್ಮುಖದಲ್ಲಿ ಮೋದಿ ಉಲ್ಲೇಖ

ಪ್ರಧಾನಿ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಹಸ್ತಲಾಘವ ಮಾಡಿದರು–ಎಪಿ ಚಿತ್ರ

ಇವಿಯಾನ್ ಲಿ ಬಾನ್ (ಪಿಟಿಐ): 'ಹೊರ್ಮುಜ್ ಜಲಸಂಧಿಯಲ್ಲಿ ಕಡಲ ವ್ಯಾಪಾರಕ್ಕೆ ಆಗಿರುವ ಅಡ್ಡಿಗಳು ಜಾಗತಿಕ ಆರ್ಥಿಕತೆಗೆ ಹಾನಿ ಉಂಟುಮಾಡಿವೆ. ಅಲ್ಲದೆ ಭಾರತೀಯ ನಾವಿಕರೂ ಸೇರಿದಂತೆ ಅನೇಕ ನಾಗರಿಕರೂ ಮೃತಪಟ್ಟಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಮ್ಮುಖದಲ್ಲಿಯೇ ಮಂಗಳವಾರ ಹೇಳಿದರು.

ಫ್ರಾನ್ಸ್‌ನಲ್ಲಿ ಜಿ7 ಶೃಂಗಸಭೆಯ ನಾಯಕರ ಸಭೆಯಲ್ಲಿ ಮಾತನಾಡಿದ ಅವರು, ಜಾಗತಿಕ ಸಮುದ್ರ ಮಾರ್ಗಗಳ ಸುರಕ್ಷತೆ ಅತ್ಯಗತ್ಯ ಎಂದು ಪ್ರತಿಪಾದಿಸಿದರು. ನಾವಿಕರು ತಮ್ಮ ಕರ್ತವ್ಯಗಳನ್ನು ನಿರ್ಭೀತಿಯಿಂದ ಮಾಡಬಹುದು ಎಂಬುದನ್ನು ಎಲ್ಲ ದೇಶಗಳು ಖಚಿತಪಡಿಸಿಕೊಳ್ಳಬೇಕು ಎಂದೂ ಆಗ್ರಹಿಸಿದರು.

ಒಮಾನ್ ಕೊಲ್ಲಿಯಲ್ಲಿ ಸರಕು ಸಾಗಣೆ ಹಡಗಿನ ಮೇಲೆ ಅಮೆರಿಕ ಸೇನೆ ಇತ್ತೀಚೆಗೆ ನಡೆಸಿದ ದಾಳಿಯಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದರು. ಅದನ್ನೂ ಉಲ್ಲೇಖಿಸಿದ ಮೋದಿ ಅವರು 'ನಾವಿಕರ ಸುರಕ್ಷತೆ ಖಚಿತಪಡಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ' ಎಂದು ಒತ್ತಿ ಹೇಳಿದರು. ಪಶ್ಚಿಮ ಏಷ್ಯಾದಲ್ಲಿ ಶಾಂತಿ ಪ್ರಯತ್ನಗಳಲ್ಲಿ ಆಗಿರುವ ಪ್ರಗತಿಯನ್ನು ಭಾರತ ಸ್ವಾಗತಿಸುತ್ತದೆ ಎಂದರು.

ಮೋದಿ–ಟ್ರಂಪ್ ಇಂದು ಮಾತುಕತೆ: ಮೋದಿ ಮತ್ತು ಟ್ರಂಪ್ ಅವರು ಬುಧವಾರ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. 16 ತಿಂಗಳ ಬಳಿಕ ಇಬ್ಬರೂ ಮತ್ತೊಮ್ಮೆ ಮುಖಾಮುಖಿಯಾಗಿ ಚರ್ಚಿಸಲಿದ್ದಾರೆ.

ವಿಶ್ವಕಪ್: ಒಂದೇ ದಿನ ನಾಲ್ಕೂ ಪಂದ್ಯ ಡ್ರಾ!

ಬೆಂಗಳೂರು: ಮೆಕ್ಸಿಕೊ, ಅಮೆರಿಕ ಹಾಗೂ ಕೆನಡಾದಲ್ಲಿ ನಡೆಯುತ್ತಿರುವ ಫಿಫಾ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯ ಸೋಮವಾರದ ಎಲ್ಲ ನಾಲ್ಕೂ ಪಂದ್ಯಗಳು ಡ್ರಾ ಆಗಿದ್ದು ವಿಶೇಷ. ಸ್ಪೇನ್, ಕೇಪ್ ವರ್ದೆ ನಡುವಣ ಪಂದ್ಯ ಗೋಲಿಲ್ಲದೆ ಡ್ರಾ ಆದರೆ, ಬೆಲ್ಜಿಯಂ– ಈಜಿಪ್ಟ್ ಮತ್ತು ಸೌದಿ ಅರೇಬಿಯಾ– ಉರುಗ್ವೆ ತಂಡಗಳು 1–1ರ ಸಮಬಲ ಸಾಧಿಸಿದವು. ಇರಾನ್– ನ್ಯೂಜಿಲೆಂಡ್ ಪಂದ್ಯ 2–2ರಲ್ಲಿ ಸಮಬಲವಾಯಿತು.

ಟೂರ್ನಿಯ ಇತಿಹಾಸದಲ್ಲಿ ಒಂದು ದಿನ ನಡೆದ ಎಲ್ಲ ಪಂದ್ಯಗಳು ಡ್ರಾ ಆಗಿದ್ದು ಇದು ಎರಡನೇ ಬಾರಿ. 1958ರಲ್ಲಿ ಸ್ವೀಡನ್‌ನಲ್ಲಿ ನಡೆದ ವಿಶ್ವಕಪ್‌ನಲ್ಲೂ, ಕಾಕತಾಳೀಯ ಎಂಬಂತೆ ಜೂನ್ 15ರಂದೇ ಎಲ್ಲ ನಾಲ್ಕು ಪಂದ್ಯಗಳೂ ಡ್ರಾ ಆಗಿದ್ದವು. ಪಶ್ಚಿಮ ಜರ್ಮನಿ– ಉತ್ತರ ಐರ್ಲೆಂಡ್ (2–2), ಪರಗ್ವೆ– ಯುಗೊಸ್ಲಾವಿಯಾ (3–3), ಸ್ವೀಡನ್– ವೇಲ್ಸ್ (0–0) ಮತ್ತು ಇಂಗ್ಲೆಂಡ್– ಆಸ್ಟ್ರಿಯಾ (2–2) ಪಂದ್ಯಗಳು ಡ್ರಾದಲ್ಲಿ ಅಂತ್ಯಗೊಂಡಿದ್ದವು.

ಖಾಸಗಿ ವಿಡಿಯೊ ಪ್ರಸಾರ ವಿರುದ್ಧ ತಕ್ಷಣವೇ ಎಫ್‌ಐಆರ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಮತಿಯಿಲ್ಲದೇ ಆಪ್ತ ಚಿತ್ರಗಳು ಹಾಗೂ ವಿಡಿಯೊಗಳನ್ನು ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಸೂಚನೆ ನೀಡಿದ್ದಾರೆ. ಜತೆಗೆ, ಪೊಲೀಸ್ ಅಧಿಕಾರಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನೂ ಪ್ರಕಟಿಸಿದ್ದಾರೆ.

ಇಂತಹ ಪ್ರಕರಣಗಳಲ್ಲಿ ದೂರುಗಳು ಬಂದಾಗ ಪ್ರಕರಣ ದಾಖಲಿಸಲು ಕೆಲವೆಡೆ ನಿರಾಕರಣೆ ಮಾಡುತ್ತಿರುವುದು, ವಿಳಂಬ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಸಂತ್ರಸ್ತರು ಮೊದಲು ವಿಡಿಯೊ ಚಿತ್ರೀಕರಿಸಲು ಒಪ್ಪಿಗೆ ನೀಡಿದ್ದರು ಎನ್ನುವ ಕಾರಣದ ಮೇಲೆ ದೂರು ಸ್ವೀಕರಿಸದೇ ಇರುವುದು ಕಂಡುಬಂದಿದೆ. ಆದರೆ, ನಿಯಮಾನುಸಾರ ಚಿತ್ರೀಕರಣಕ್ಕೆ ನೀಡಿದ್ದ ಒಪ್ಪಿಗೆಗೂ ಮತ್ತು ಇತರರಿಗೆ ಹಂಚಿಕೆ/ಪ್ರಸಾರಕ್ಕೆ ನೀಡುವ ಒಪ್ಪಿಗೆಗೂ ವ್ಯತ್ಯಾಸ ಇದೆ. ಮೊದಲನೆಯದಕ್ಕೆ ಒಪ್ಪಿಗೆ ಇದ್ದರೂ ನಂತರದ ಹಂಚಿಕೆಗೆ ಒಪ್ಪಿಗೆ ಇಲ್ಲದಿದ್ದರೂ ಪ್ರಚಾರಪಡಿಸಿದರೆ ಅದು ಅಪರಾಧವಾಗುತ್ತದೆ ಎಂದು ಆದೇಶದಲ್ಲಿ ಎಚ್ಚರಿಸಲಾಗಿದೆ.

ಸಂತ್ರಸ್ತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ಎಫ್‌ಐಆರ್ ನೋಂದಣಿ ನಿರಾಕರಿಸಕೂಡದು ಅಥವಾ ಮುಂದೂಡಬಾರದು. ಆ ಒಪ್ಪಿಗೆಯು ನಂತರದ ಅನುಮತಿಯಿಲ್ಲದ ಪ್ರಸಾರಕ್ಕೆ ರಕ್ಷಣೆ ಆಗುವುದಿಲ್ಲ. ಆಪ್ತ ವಿಷಯಗಳನ್ನು ಬಳಸಿ ಹಣ, ಲೈಂಗಿಕ ಅನುಕೂಲ ಅಥವಾ ಬೇರೆ ಲಾಭಕ್ಕಾಗಿ ಬೆದರಿಕೆ, ಸುಲಿಗೆ ನಡೆಸಿದರೆ ಬಿಎನ್‌ಎಸ್–2023ರ ಸುಲಿಗೆ ಮತ್ತು ಕ್ರಿಮಿನಲ್ ಬೆದರಿಕೆ ಸಂಬಂಧಿತ ಸೆಕ್ಷನ್‌ಗಳನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆ ಜತೆಗೆ ಅಳವಡಿಸಿ ಪ್ರಕರಣ ದಾಖಲು ಮಾಡಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧವು ಸ್ಥಳೀಯ ಠಾಣಾ ವ್ಯಾಪ್ತಿಯ ಹೊರಗೆ ನಡೆದಿದ್ದರೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಪ್ರಕಾರ 'ಝೀರೊ ಎಫ್‌ಐಆರ್' ದಾಖಲಿಸಿ ತಕ್ಷಣವೇ ಸಂಬಂಧಿಸಿದ ಪೊಲೀಸ್ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಬೇಕು ಎಂದು ಸೂಚಿಸಿದ್ದಾರೆ.

▶5

ಚಿತ್ರ ಸೆರೆ, ಪ್ರಸಾರ: 3 ವರ್ಷ ಶಿಕ್ಷೆ

ಯಾವುದೇ ವ್ಯಕ್ತಿಯ ಖಾಸಗಿ ಅಂಗಗಳ ಚಿತ್ರವನ್ನು ಅವರ ಅನುಮತಿ ಇಲ್ಲದೆ ಸೆರೆ ಹಿಡಿಯುವುದು, ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು ಅಪರಾಧ. ಗರಿಷ್ಠ 3 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಅಥವಾ ₹2 ಲಕ್ಷದ ವರೆಗೆ ದಂಡವಿದೆ ಎಂದು ಆದೇಶ ಹೇಳಿದೆ.

ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ಅಥವಾ ಕಾಮಪ್ರಚೋದಕ ವಿಷಯ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು ಅಪರಾಧ. ಮೊದಲ ಅಪರಾಧಕ್ಕೆ ಗರಿಷ್ಠ 3 ವರ್ಷಗಳ ಶಿಕ್ಷೆ ಹಾಗೂ ₹5 ಲಕ್ಷದವರೆಗೆ ದಂಡ. ಪುನರಾವರ್ತಿತ ಅಪರಾಧಕ್ಕೆ ಗರಿಷ್ಠ 5 ವರ್ಷಗಳ ಶಿಕ್ಷೆ ಹಾಗೂ ₹10 ಲಕ್ಷ ದಂಡವಿದೆ.

RAMAIAH UNIVERSITY OF APPLIED SCIENCES

RAMAIAH UNIVERSITY COLLEGE OF ENGINEERING
(A Constituent College of Ramaiah University of Applied Sciences)

THE NEXT HUB FOR FUTURE ENGINEERS
BUILT ON LEGACY.. DRIVEN BY INNOVATION...

RUAS EXPANDS WITH ITS NEW CONSTITUENT CAMPUS AT ELECTRONIC CITY

APPROVED BY KSHEC

NABH ACCREDITED

nirf NATIONAL INSTITUTIONAL RANKING FRAMEWORK | 22nd Rank of Faculty of Dental Sciences | 50th Rank of Ramaiah Medical College | 56th Rank of Faculty of Pharmacy

RAMAIAH UNIVERSITY COLLEGE OF ENGINEERING
(A Constituent College of Ramaiah University of Applied Sciences)

RUCE RISES AS THE NEXT DESTINATION FOR FUTURE-READY ENGINEERING TALENT.

ADMISSIONS OPEN
Programs Offered - B. Tech. in

CSE — COMPUTER SCIENCE AND ENGINEERING
AI&ML — ARTIFICIAL INTELLIGENCE AND MACHINE LEARNING
ECE — ELECTRONICS AND COMMUNICATION ENGINEERING
EE — ELECTRONICS ENGINEERING (VLSI DESIGN AND TECHNOLOGY)

In collaboration with UNIVERSITY AT ALBANY STATE UNIVERSITY OF NEW YORK

FEATURES
Makerspace for Innovators (Year 1+) Fuel your ideas with cutting-edge tools.
Relevant Industry Internships Direct path to high employability.
Hands-On Industry Training Real- world skills from day one.

ELECTRONIC CITY CAMPUS: No.15, Bommasandra Jigani Link Road, KIADB Industrial Area, Jigani, Bengaluru, Karnataka 560105

OTHER CAMPUSES
GNANAGANGOTHRI CAMPUS (GGC) New BEL Road, MSR Nagar, Bengaluru - 560 054
RAMAIAH TECHNOLOGY CAMPUS (RTC) #470-P, Peenya Industrial Area, Peenya 4th Phase, Bengaluru – 560 058

90350 85968 | admissions@msruas.ac.in | www.msruas.ac.in

SCAN QR TO APPLY

‘ಆರ್‌ಎಸ್‌ಎಸ್‌ನವರೇ ಕಾಗದ ಕೊಡಿ’

ನೋಂದಣಿ, ಆದಾಯ ಮೂಲದ ದಾಖಲೆ ಒದಗಿಸಿ: ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಅನ್ನು ನೋಂದಣಿ ಮಾಡಿಸುವ ಅಗತ್ಯ ಇಲ್ಲ ಎಂಬಂತಹ ಉಡಾಫೆಯ ಮಾತುಗಳನ್ನು ಬಿಡಿ. ನಿಮ್ಮ ನೋಂದಣಿ, ಆದಾಯದ ಮೂಲ ಮತ್ತು ತೆರಿಗೆ ಪಾವತಿಯ ದಾಖಲೆಯ ಕಾಗದಗಳನ್ನು ತೋರಿಸಿ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ‘ರಾಜ್ಯದಲ್ಲಿ ಒಟ್ಟು 20 ಲಕ್ಷ ಜನರನ್ನು ಸೇರಿಸಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎಂಬ ಮಾಹಿತಿ ಅಖಿಲ ಭಾರತೀಯ ಪ್ರತಿನಿಧಿ ಸಭಾದ ವಾರ್ಷಿಕ ವರದಿಯಲ್ಲಿ ಇದೆ. ಅಷ್ಟು ದೊಡ್ಡ ಮಟ್ಟದಲ್ಲಿ ಜನರನ್ನು ಸೇರಿಸುವವರ ವಿವರಗಳನ್ನು ಕೇಳಬಾರದೇ’ ಎಂದು ಪ್ರಶ್ನಿಸಿದರು.

‘ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವೇಳೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ದೇಶದ ಜನರನ್ನು, ‘ಕಾಗದ ತೋರಿಸಿ’ ಎಂದು ಕೇಳುತ್ತಿದ್ದರು. ಈಗ ಆರ್‌ಎಸ್‌ಎಸ್‌ನ ಕಾಗದ ತೋರಿಸಿ ಎಂದು ಕೇಳಿದಾಕ್ಷಣ, ಓಡಿಹೋಗುತ್ತಿದ್ದಾರೆ. ದೇಶದ ಜನರಿಗೆ ನಿಮ್ಮ ಕಾಗದಗಳನ್ನು ತೋರಿಸಿ’ ಎಂದು ಆಗ್ರಹಿಸಿದರು.

‘ನೋಂದಣಿ ಮತ್ತಿತರ ದಾಖಲೆ ಪತ್ರಗಳನ್ನು ಕೇಳಿದಾಕ್ಷಣ ನನ್ನ ಮೇಲೆ ದಾಳಿ ನಡೆಸಲು ಆರ್‌ಎಸ್‌ಎಸ್ ತನ್ನ ಆಳು ಮಕ್ಕಳಾದ ಬಿಜೆಪಿ ನಾಯಕರನ್ನು ನಿಯೋಜಿಸಿದೆ. ನನ್ನ ಬಾಯಿ ಮುಚ್ಚಿಸಬೇಕು ಎಂದರೆ, ಈ ದಾಖಲೆ ಪತ್ರಗಳನ್ನು ತೋರಿಸಿಬಿಡಿ. ನಾನಾಗೇ ಬಾಯಿ ಮುಚ್ಚಿಕೊಳ್ಳುತ್ತೇನಲ್ಲವೇ’ ಎಂದರು.

‘ದೇಶದ ಗೃಹ, ವಿದೇಶಾಂಗ ಮತ್ತು ರಕ್ಷಣಾ ಸಚಿವರಿಗೆ ನೀಡಬಹುದಾದಂತಹ ಭಾರಿ ಭದ್ರತೆಯನ್ನು ಮೋಹನ್ ಭಾಗವತ್ ಅವರಿಗೆ ನೀಡಲಾಗುತ್ತಿದೆ. ಅಂತಹ ಭದ್ರತೆ ನೀಡಲು ಆ ವ್ಯಕ್ತಿ ಯಾರು? ಏತಕ್ಕಾಗಿ ಅವರಿಗೆ ಅಂತಹ ಭದ್ರತೆ ನೀಡಬೇಕು? ಜನರ ತೆರಿಗೆ ಹಣದಿಂದ ಅಂತಹ ಭದ್ರತೆ ಒದಗಿಸಲಾಗುತ್ತಿದೆ ಎಂದ ಮೇಲೆ ಆ ಸಂಘಟನೆಯ ನೋಂದಣಿ, ಆದಾಯದ ಮೂಲ, ಆಸ್ತಿ ವಿವರ ಮತ್ತು ಆದಾಯ ತೆರಿಗೆ ವಿವರಗಳನ್ನು ಜನರು ಕೇಳಬಾರದೇ’ ಎಂದು ಪ್ರಶ್ನಿಸಿದರು.

‘100 ವರ್ಷಗಳಲ್ಲಿ ಆರ್‌ಎಸ್‌ಎಸ್ ನಂತಹ ಅಭೂತಪೂರ್ವ ದೇಶಭಕ್ತರ ಸಂಘಟನೆಯನ್ನು ಈ ದೇಶ ಕಂಡಿಲ್ಲ. ಅವರು ಬೇರೆಲ್ಲಾ ವಿಚಾರಗಳಿಗಿಂತ ದೇಶದ ಕಾನೂನು, ಸಂವಿಧಾನ ಮತ್ತು ರಾಷ್ಟ್ರೀಯತೆಗೆ ಬೆಲೆ ಕೊಡುತ್ತಾರೆ ಎಂದು ಭಾವಿಸಿದ್ದೇನೆ. 100 ವರ್ಷಗಳಿಂದ ಹೀಗೇ ನಡೆದುಕೊಂಡು ಬರಲಾಗಿದೆ ಎಂಬ ಉತ್ತರವನ್ನು ಒಪ್ಪಿಕೊಳ್ಳಲಾಗದು. ಕಾಂಗ್ರೆಸ್‌ಗೂ 140 ವರ್ಷಗಳಾಗಿವೆ. ಹಾಗಿದ್ದರೆ ಕಾಂಗ್ರೆಸ್ ಸಹ ಆದಾಯ ಮತ್ತು ಸ್ವತ್ತಿನ ವಿವರ ನೀಡುವ ಅಗತ್ಯವಿಲ್ಲ ಎಂದು ಹೇಳಿದರೆ ಅವರು ಒಪ್ಪಿಕೊಳ್ಳುತ್ತಾರಾ? ನಾನು ಕೇಳಿರುವ ಏಳು ಪ್ರಶ್ನೆಗಳಿಗೆ ಅವರು ಉತ್ತರ ನೀಡಲಿ. ಆನಂತರ ಅವರು ಕರೆದಲ್ಲಿಗೆ ಹೋಗಿ ಚರ್ಚೆ ನಡೆಸೋಣ’ ಎಂದರು.

‘ಹಿಂದೂ ಧರ್ಮವನ್ನು ನೋಂದಣಿ ಮಾಡಿಸಿ ಎಂದು ನಾನು ಕೇಳಿದ್ದೇನಾ? ಆ ಬಗ್ಗೆ ಪತ್ರದಲ್ಲಿ ಉಲ್ಲೇಖವಿದ್ದರೆ ತೋರಿಸಿ. ಆರ್‌ಎಸ್‌ಎಸ್ ಹಿಂದೂ ಧರ್ಮವಲ್ಲ, ಅದೊಂದು ಸಂಘಟನೆ. ಶಾಖೆ, ಪಥಸಂಚಲನ, ಕಾರ್ಯಕ್ರಮ ಎಲ್ಲ ನಡೆಸಲು ಅವರಿಗೆ ಹಕ್ಕು ಇದೆ. ಆದರೆ, ದೇಶದ ಕಾನೂನಿನ ಅನ್ವಯ ನೋಂದಣಿ ಮಾಡಿಕೊಂಡು ಅವನ್ನೆಲ್ಲಾ ನಡೆಸಲಿ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಭಾಗವತ್ ಪ್ರತಿಕ್ರಿಯೆಯ ಫ್ಯಾಕ್ಟ್‌ಚೆಕ್: ‘ಆರ್‌ಎಸ್‌ಎಸ್‌ನ ನೋಂದಣಿ ವಿವರಗಳನ್ನು ನೀಡಿ ಎಂದು ನಾನು ಬರೆದ ಪತ್ರವನ್ನು ಬಹಿರಂಗಪಡಿಸಿದ್ದೇ ಜೂನ್ 15ರಂದು. ಆರ್‌ಎಸ್‌ಎಸ್‌ಗೆ ನೋಂದಣಿ ಅಗತ್ಯವಿಲ್ಲ ಎಂದು ಮೋಹನ್ ಭಾಗವತ್ ಅವರು ಹೇಳಿರುವುದು ಜೂನ್ 13ರಂದು, ತ್ರಿಶ್ಶೂರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ. ನನ್ನ ಪತ್ರಕ್ಕೆ ಇನ್ನೂ ಅವರು ಪ್ರತಿಕ್ರಿಯೆ ನೀಡಿಲ್ಲ’ ಎಂದು ಪ್ರಿಯಾಂಕ್ ಖರ್ಗೆ ಅವರು ‘ಎಕ್ಸ್’ ಪೋಸ್ಟ್‌ನಲ್ಲಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದ್ದಾರೆ.

ಆರ್‌ಎಸ್‌ಎಸ್‌ಗೆ ನೋಂದಣಿ ಅಗತ್ಯವಿಲ್ಲ ಎಂಬ ಉಡಾಫೆಯ ಮಾತುಗಳೆಲ್ಲಾ ಅವರ ಸ್ವಯಂಸೇವಕರ ಮುಂದೆ ನಡೆಯುತ್ತದೆ. ಸರ್ಕಾರದ ಮುಂದೆ ಅಲ್ಲ. ಸರ್ಕಾರದ ಪತ್ರಕ್ಕೆ ಸರಿಯಾದ ಉತ್ತರ ನೀಡಬೇಕು

ಪ್ರಿಯಾಂಕ್ ಖರ್ಗೆ, ಗೃಹ ಸಚಿವ

ಆರ್‌ಎಸ್‌ಎಸ್‌ನವರು ಹಿಂದೂಗಳೇ ಅಲ್ಲ. ಅವರು ಕೇವಲ ಹಿಂದುತ್ವವಾದಿಗಳು. ಧರ್ಮದ ಹೆಸರಿನಲ್ಲಿ ಏನು ಬೇಕಾದರೂ ಮಾಡುತ್ತೇವೆ ಎಂದರೆ ನಡೆಯುವುದಿಲ್ಲ

ಡಾ. ಯತೀಂದ್ರ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ

‘ವಿದೇಶಿ ಲಾಬಿ ಕಂಪನಿ ನಿಯೋಜಿಸಿದ್ದೇಕೆ’

‘ಆರ್‌ಎಸ್‌ಎಸ್ ಮತ್ತು ಇಸ್ಲಾಮಿಕ್ ತೀವ್ರಗಾಮಿ ಸಂಘಟನೆಗಳನ್ನು ಸಮೀಕರಿಸಿ ಅಮೆರಿಕದ ಒಳಾಡಳಿತ ಇಲಾಖೆ ವರದಿ ನೀಡಿತ್ತು. ಆ ವರದಿಯಲ್ಲಿ ತಮಗೆ ವ್ಯತಿರಿಕ್ತವಾಗಿದ್ದ ಅಂಶಗಳ ವಿರುದ್ಧ ಲಾಬಿ ನಡೆಸಲು, ಸ್ಕ್ವೇರ್ ಪಾಟನ್ ಬಾಗ್ಸ್ (ಎಸ್‌ಪಿಬಿ) ಎಂಬ ಲಾಬಿ ಕಂಪನಿಯನ್ನು ಆರ್‌ಎಸ್‌ಎಸ್ ನಿಯೋಜಿಸಿದೆ. ಇದಕ್ಕಾಗಿ ಆರ್‌ಎಸ್‌ಎಸ್, ಎಸ್‌ಪಿಬಿಗೆ 3.30 ಲಕ್ಷ ಡಾಲರ್ ಪಾವತಿಸಿದೆ. ಇಷ್ಟು ದೊಡ್ಡ ಮೊತ್ತ ಪಾವತಿಸಲು ಆರ್‌ಎಸ್‌ಎಸ್‌ಗೆ ಹಣ ಎಲ್ಲಿಂದ ಬಂತು’ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

‘ವಿದೇಶಿ ಸರ್ಕಾರದ ಮಟ್ಟದಲ್ಲಿ ಲಾಬಿ ನಡೆಸಲು ಖಾಸಗಿ ಕಂಪನಿಯನ್ನು ನಿಯೋಜಿಸುವಂತಹ ಆರ್‌ಎಸ್‌ಎಸ್ ತನ್ನ ದೇಶದ ನೆಲದ ಕಾನೂನಿನಂತೆ ನೋಂದಣಿ ಏಕೆ ಮಾಡಿಕೊಳ್ಳುವುದಿಲ್ಲ. ಅಂತಹ ಲಾಬಿ ನಡೆಸುವ ಅವಶ್ಯವಾದರೂ ಆರ್‌ಎಸ್‌ಎಸ್‌ಗೆ ಏನಿತ್ತು’ ಎಂದರು.

‘ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸ ಕೈಗೊಂಡಾಗ, ‘ಅದಕ್ಕೆ ಹಣ ಹೊಂದಿಸಿದವರು ಯಾರು? ಏತಕ್ಕಾಗಿ ವಿದೇಶಿ ಪ್ರಯಾಣ ಮಾಡಿದರು’ ಎಂಬೆಲ್ಲಾ ಪ್ರಶ್ನೆಗಳನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಕೇಳುತ್ತಾರೆ. ಮೋಹನ್ ಭಾಗವತ್ ಮತ್ತು ದತ್ತಾತ್ರೇಯ ಹೊಸಬಾಳೆ ಸಹ ವಿದೇಶ ಪ್ರಯಾಣ ಕೈಗೊಂಡು, ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಅವರ ಪ್ರಯಾಣದ ಖರ್ಚುವೆಚ್ಚದ ಲೆಕ್ಕಾಚಾರವನ್ನು ನಾವು ಕೇಳಬಾರದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸಂಘಟನೆಯೊಂದರ ಸ್ವತ್ತಲ್ಲ’

‘ಹಿಂದೂ ಧರ್ಮವು ಯಾವುದೇ ಒಂದು ಸಂಘಟನೆಯ ಸ್ವತ್ತಲ್ಲ. ಅದು ಆರ್‌ಎಸ್‌ಎಸ್‌ಗಿಂತಲೂ ದೊಡ್ಡದು, ವಿಶಾಲವಾದುದು ಮತ್ತು ಎಲ್ಲರನ್ನು ಒಳಗೊಳ್ಳುವ ನಾಗರಿಕತಾ ಪರಂಪರೆ’ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದ್ದಾರೆ.

ಬಿ.ಕೆ. ಹರಿಪ್ರಸಾದ್

ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ‘ಮೋಹನ್ ಭಾಗವತ್ ಅವರು ಆರ್‌ಎಸ್‌ಎಸ್ ಅನ್ನು ಹಿಂದೂ ಧರ್ಮಕ್ಕೆ ಹೋಲಿಕೆ ಮಾಡಿರುವುದು ಅತ್ಯಂತ ಖಂಡನೀಯ. ಸಾವಿರಾರು ವರ್ಷಗಳ ಇತಿಹಾಸ, ಸಂಸ್ಕೃತಿ, ತತ್ವಶಾಸ್ತ್ರ ಮತ್ತು ವೈವಿಧ್ಯವನ್ನು ಹೊಂದಿರುವ ಹಿಂದೂ ಧರ್ಮವನ್ನು ಒಂದು ನಿರ್ದಿಷ್ಟ ಸಂಘಟನೆಯ ಮಟ್ಟಕ್ಕೆ ಇಳಿಸಿ ನೋಡುವುದು ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಅವಮಾನ’ ಎಂದಿದ್ದಾರೆ.

‘ದೇಶದ್ರೋಹಿಗಳನ್ನು ಪ್ರಶ್ನಿಸುವುದಿಲ್ಲವೇಕೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರ ವಿರೋಧಿ ಚಟುವಟಿಕೆಯ ಅಲ್ಪಸಂಖ್ಯಾತ ಮತೀಯವಾದಿ ಸಂಘಟನೆಗಳು ದೇಶದಲ್ಲಿ ತಲೆಯೆತ್ತಿದ್ದು, ಅಕ್ರಮವಾಗಿ ವಿದೇಶಿ ದೇಣಿಗೆ ಪಡೆದು ರಾಷ್ಟ್ರ ದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಅಂತಹ ಸಂಸ್ಥೆಗಳಿಗೆ ಪತ್ರ ಬರೆದು ಮಾಹಿತಿಯನ್ನು ಏಕೆ ಕೇಳುವುದಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.



ಬಿ.ವೈ. ವಿಜಯೇಂದ್ರ

‘ಮದರಸಾಗಳಂತೆ ಆರ್‌ಎಸ್‌ಎಸ್ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ. ರಾಷ್ಟ್ರೀಯತೆಯನ್ನು ವಿರೋಧಿಸುವ ಸಂಸ್ಥೆಗಳ ಚಟುವಟಿಕೆ ಕಾಂಗ್ರೆಸ್ ಪಕ್ಷದ ಕಣ್ಣಿಗೆ ಬೀಳುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ. ಮತಬ್ಯಾಂಕ್ ಆಧರಿಸಿ ಅಧಿಕಾರ ಅನುಭವಿಸುತ್ತಿರುವ ಪಕ್ಷಕ್ಕೆ ಬದ್ಧತೆ, ನೈತಿಕತೆ ಇಲ್ಲ’ ಎಂದಿದ್ದಾರೆ.

‘ಸ್ವಾತಂತ್ರ್ಯ ಯೋಧರು ಉದಾತ್ತ ಉದ್ದೇಶಕ್ಕಾಗಿ ಕಟ್ಟಿದ್ದ ಸುಮಾರು ₹5,000 ಕೋಟಿಯ ಆಸ್ತಿ ಹೊಂದಿದ್ದ ನ್ಯಾಷನಲ್ ಹೆರಾಲ್ಡ್ ಸಂಸ್ಥೆಯನ್ನು ಮುಳುಗಿಸಿದ ನೆಹರೂ ಕುಟುಂಬದ ಮಹಾನ್ ಫಲಾನುಭವಿಗಳಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಕುರಿತು ವಿಪರೀತ ತಲೆಕೆಡಿಸಿಕೊಂಡಿದ್ದಾರೆ. ಅವರ ಪ್ರಶ್ನೆಗಳಿಗೆ ಭಾಗವತ್ ಅವರು ಸರಿಯಾದ ಉತ್ತರ ಕೊಟ್ಟಿದ್ದಾರೆ. ನೆಹರೂ ಕುಟುಂಬದ ಕುಡಿಗಳನ್ನು ಸಂತೃಪ್ತಿಪಡಿಸುತ್ತಿರುವ ಅವರ ಭ್ರಮೆ ಕಳಚಿ ಬೀಳಲಿದೆ’ ಎಂದಿದ್ದಾರೆ.

ಆರ್‌ಎಸ್‌ಎಸ್ ವಿಷಯದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಒಣ ರಾಜಕೀಯ ಬಿಟ್ಟು, ರಾಜ್ಯದಲ್ಲಿ ಮಾದಕ ಪದಾರ್ಥ ಹಾವಳಿ, ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಲಿ

ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ಆರ್‌ಎಸ್‌ಎಸ್ ಬೆಳೆಯಲು ಕಾಂಗ್ರೆಸ್‌ನ ಮೃದು ಧೋರಣೆ ಕಾರಣ: ಗೆಹಲೋತ್

ಜೈಪುರ (ಪಿಟಿಐ): ‘ಕಾಂಗ್ರೆಸ್‌ನ ‘ಮೃದು ಧೋರಣೆ’ಯಿಂದಾಗಿಯೇ ಆರ್‌ಎಸ್‌ಎಸ್ ಈ ಮಟ್ಟಕ್ಕೆ ಬೆಳೆದಿದ್ದು, 100 ವರ್ಷ ಪೂರೈಸಿದೆ. ಈ ಕಾರಣಕ್ಕೆ ಅದು ಪಕ್ಷಕ್ಕೆ ಋಣಿಯಾಗಿರಬೇಕು’ ಎಂದು ಕಾಂಗ್ರೆಸ್ ಮುಖಂಡ ಹಾಗೂ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮಂಗಳವಾರ ಹೇಳಿದ್ದಾರೆ.

ಅಶೋಕ್ ಗೆಹಲೋತ್

‘ಬಿಜೆಪಿ–ಆರ್‌ಎಸ್‌ಎಸ್ ಆಡಳಿತದ ಅವಧಿಯಲ್ಲಿ ಭಾರತವು ಹಿಂದೂ ರಾಷ್ಟ್ರವಾಗಿದೆ. ಈ ಕುರಿತು ಔಪಚಾರಿಕ ಘೋಷಣೆಯಷ್ಟೆ ಬಾಕಿ ಇದೆ. ಈಗ ಬಿಜೆಪಿ ಮಾಡುತ್ತಿರುವಂತೆ ಕಾಂಗ್ರೆಸ್ ಪಕ್ಷವು ತನ್ನ ಅಧಿಕಾರದ ಅವಧಿಯಲ್ಲಿ ದ್ವೇಷ ಸಾಧಿಸಿದ್ದರೆ ಆರ್‌ಎಸ್‌ಎಸ್ ಅಥವಾ ಬಿಜೆಪಿ ಈ ಮಟ್ಟಿಗೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ’ ಎಂದರು.

‘ಗ್ರೇಟರ್ ಬೆಂಗಳೂರು’ ಖಾತೆ ವಹಿಸಿಕೊಂಡ ಕೃಷ್ಣ ಬೈರೇಗೌಡ

ಬೆಂಗಳೂರು: ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ 13 ದಿನಗಳ ನಂತರ, ಕೃಷ್ಣ ಬೈರೇಗೌಡ ಅವರು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಮಂಗಳವಾರ ವಹಿಸಿಕೊಂಡರು.

ಬಿಡಿಎ, ಬಿಎಂಆರ್‌ಡಿಎ ಹೊರತುಪಡಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಐದು ನಗರ ಪಾಲಿಕೆಗಳು, ಬೆಂಗಳೂರು ಜಲಮಂಡಳಿ, ಮೆಟ್ರೊ ಮಾತ್ರ ‘ಗ್ರೇಟರ್ ಬೆಂಗಳೂರು ಅಭಿವೃದ್ಧಿ’ ಖಾತೆಗೆ ಹಂಚಲಾಗಿತ್ತು. ರಾಜ್ಯಪಾಲರು ಜೂನ್ 4ರಂದು ಖಾತೆಗಳ ಹಂಚಿಕೆಯ ಅಧಿಸೂಚನೆ ಹೊರಡಿಸಿದ್ದರೂ ಕೃಷ್ಣ ಬೈರೇಗೌಡರು ಕಾರ್ಯಾರಂಭ ಮಾಡಿರಲಿಲ್ಲ.

ಏತನ್ಮಧ್ಯೆ, ದೆಹಲಿಗೆ ತೆರಳಿದ್ದ ಅವರು, ತಮ್ಮ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ, ಬೆಂಗಳೂರಿನ ಪೂರ್ಣ ಜವಾಬ್ದಾರಿಯನ್ನು ವಹಿಸಿದಿರುವ ಬಗ್ಗೆ ತಮ್ಮ ಅಸಮಾಧಾನವನ್ನು ಹೊರಹಾಕಿದ್ದರು. ಅಲ್ಲಿಂದ ವಾಪಸ್ ಆದ ಬಳಿಕ, ‘ಬೆಂಗಳೂರು ಅಭಿವೃದ್ಧಿ ಖಾತೆಗೆ ಹಂಚಲಾಗಿರುವ ಇಲಾಖೆಗಳ ಬಗ್ಗೆ ಸ್ಪಷ್ಟತೆ ನೀಡಬೇಕು’ ಎಂದೂ ಹೇಳಿದ್ದರು. ಖಾತೆಯಲ್ಲಿನ ಇಲಾಖೆಗಳ ಬಗ್ಗೆ ಅಂತಿಮವಾಗಿ ಯಾವುದೇ ರೀತಿಯ ಸ್ಪಷ್ಟತೆ ಸಿಗಲಿಲ್ಲ.

‘ಮುಂದಿನ ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಮಾಡುತ್ತೇವೆ, ಖಾತೆ ವಹಿಸಿಕೊಳ್ಳಿ’ ಎಂಬ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಪಕ್ಷದ ವರಿಷ್ಠರ ಸೂಚನೆ ಮೇರೆಗೆ ಅವರು ಜವಾಬ್ದಾರಿ ವಹಿಸಿಕೊಂಡರು. ಜಿಬಿಎ, ನಗರ ಪಾಲಿಕೆಗಳ ಅಧಿಕಾರಿಗಳ ಸಭೆಯನ್ನು ನಡೆಸಿದರು.

ಜೆಡಿಎಸ್ ನಾಯಕರ ಭೇಟಿ ಬೆನ್ನಲ್ಲೇ, ಯೋಜನಾ ಪ್ರದೇಶಕ್ಕೆ ಬಿಜೆಪಿ ನಾಯಕರ ದೌಡು

ಟೌನ್‌ಶಿಪ್ ಹೋರಾಟಕ್ಕೆ ರಾಜಕೀಯ ಬಲ

● ಓದೇಶ ಸಕಲೇಶಪುರ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ 3 ಗ್ರಾಮಗಳಲ್ಲಿ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬಿದ್ದ ಬೆನ್ನಲ್ಲೇ, ಯೋಜನೆ ವಿರುದ್ಧ ನಡೆಯುತ್ತಿರುವ ರೈತರ ಹೋರಾಟಕ್ಕೆ ರಾಜಕೀಯ ಬಲ ಹೆಚ್ಚಾಗಿದೆ.

ಭೂ ಸ್ವಾಧೀನಕ್ಕೆ 15 ತಿಂಗಳ ಹಿಂದೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಮರು ದಿನದಿಂದಲೇ ಯೋಜನಾ ಪ್ರದೇಶದ ರೈತರು ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಮಿತಿ ರಚಿಸಿಕೊಂಡು ಬೈರಮಂಗಲ ವೃತ್ತದಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದಾರೆ.

ಹೋರಾಟಕ್ಕೆ ಆರಂಭದಲ್ಲಿ ಜೆಡಿಎಸ್ ಬೆಂಬಲ ಕೊಟ್ಟಿತ್ತು. ಪಕ್ಷದ ನಾಯಕ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಹ ಭೇಟಿ ನೀಡಿದ್ದರು. ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಸಹ ದನಿ ಎತ್ತಿದ್ದರು. ಅದರ ಬೆನ್ನಲ್ಲೇ ಬಿಜೆಪಿ ನಾಯಕರೂ ಒಮ್ಮೆ ಭೇಟಿ ನೀಡಿ ಸಾಂಕೇತಿಕ ಬೆಂಬಲ ವ್ಯಕ್ತಪಡಿಸಿದ್ದರು. ನಂತರ ರೈತರು ಹೋರಾಟ ಮುಂದುವರಿಸಿದ್ದರು. ಅಂತಿಮ ಅಧಿಸೂಚನೆ ಬೆನ್ನಲ್ಲೇ ಹೋರಾಟಕ್ಕೆ ರಾಜಕೀಯ ಪಕ್ಷಗಳ ಬೆಂಬಲ ಹೆಚ್ಚತೊಡಗಿದೆ.

ಎರಡು ದಶಕದ ಹಿಂದೆ ಕುಮಾರಸ್ವಾಮಿ ರೂಪಿಸಿದ್ದ ಯೋಜನೆಯನ್ನು ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಅನುಷ್ಠಾನಕ್ಕೆ ಮುಂದಾಗಿದ್ದರು. ಅಂತಿಮ ಅಧಿಸೂಚನೆ ಹೊರಬೀಳುವ ಹೊತ್ತಿಗೆ ಅವರು ಮುಖ್ಯಮಂತ್ರಿ ಆಗಿದ್ದಾರೆ. ಅದರ ಬೆನ್ನಲ್ಲೇ ಯೋಜನೆ ವಿರುದ್ಧ ಜೆಡಿಎಸ್ ನಾಯಕರ ಧ್ವನಿ ಜೋರಾಗಿದೆ. ನಿಖಿಲ್ ಕುಮಾರಸ್ವಾಮಿ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪಕ್ಷದ ಕಾರ್ಯಕರ್ತರೊಂದಿಗೆ ಹಳ್ಳಿಗಳನ್ನು ಸುತ್ತಿದ್ದಾರೆ. ‘ಇದು ರೈತರ ಹೋರಾಟವಷ್ಟೇ ಅಲ್ಲ. ನಮ್ಮ ಪಕ್ಷದ ಹೋರಾಟ’ ಎಂದಿದ್ದಾರೆ. ರೈತರ ಪರವಾಗಿ ವಿಧಾನಸೌಧಕ್ಕೆ ಪಾದಯಾತ್ರೆ ನಡೆಸುವುದಾಗಿ ಹೇಳಿದ್ದಾರೆ.

ಜೆಡಿಎಸ್ ನಾಯಕರು ಯೋಜನೆ ವಿರುದ್ಧ ರಣಕಹಳೆ ಮೊಳಗಿದ ಬೆನ್ನಲ್ಲೇ, ಬಿಜೆಪಿ ನಾಯಕರು ಸಹ ಮೈ ಕೊಡವಿಕೊಂಡು ನಿಂತಿದ್ದಾರೆ. ಇದುವರೆಗೆ ಸಾಮಾಜಿಕ ಜಾಲತಾಣದ ಪೋಸ್ಟ್ ಮತ್ತು ಬೆಂಗಳೂರಿನಲ್ಲಿ ಒಂದೆರಡು ಹೇಳಿಕೆ ನೀಡುವುದಕ್ಕೆ ಸೀಮಿತವಾಗಿದ್ದ ನಾಯಕರು, ಇದೀಗ ಯೋಜನಾ ಪ್ರದೇಶಕ್ಕೆ ಭೇಟಿ ನೀಡಲು ಮುಂದಾಗಿದ್ದಾರೆ.

ಇಂದು ಬಿಜೆಪಿ ನಿಯೋಗ ಭೇಟಿ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಎಸ್.ಸುರೇಶ್‌ಕುಮಾರ್ ಅವರನ್ನು ಒಳಗೊಂಡ ಬಿಜೆಪಿಯ ನಿಯೋಗ ಬುಧವಾರ ಯೋಜನಾ ಪ್ರದೇಶಕ್ಕೆ ಭೇಟಿ ನೀಡಲಿದೆ. ಅಲ್ಲಿ ರೈತರ ಅಹವಾಲು ಆಲಿಸಿದ ನಂತರ ಯೋಜನೆ ಕೈಬಿಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲಿದೆ. ಯೋಜನೆ ಕೈಬಿಡದಿದ್ದರೆ ರೈತರ ಜತೆ ಸೇರಿ ಹೋರಾಟ ನಡೆಸಲು ಬಿಜೆಪಿ ನಿರ್ಧರಿಸಿದೆ.

ಸಂಯುಕ್ತ ಹೋರಾಟ– ಕರ್ನಾಟಕ ಬೆಂಬಲ

ಮತ್ತೊಂದೆಡೆ ರೈತರ ಹೋರಾಟ ಬೆಂಬಲಿಸಲು ಸಂಯುಕ್ತ ಹೋರಾಟ–ಕರ್ನಾಟಕ ಸಂಘಟನೆ ನಿರ್ಧರಿಸಿದೆ. ಸ್ಥಳೀಯ ರೈತರ ಸಮಿತಿ ಜೊತೆ ಸಂಘಟನೆ ನಾಯಕರು ಮಂಗಳವಾರ ಸಭೆ ನಡೆಸಿ ಮುಂದಿನ ಹೋರಾಟದ ರೂಪುರೇಷೆ ಕುರಿತು ಚರ್ಚಿಸಿದ್ದಾರೆ.

ಸಭೆಯಲ್ಲಿ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಯಶವಂತ್, ಬಸವರಾಜಪ್ಪ, ಸಿಐಟಿಯು ಸಂಘಟನೆಯ ವರಲಕ್ಷ್ಮಿ, ನೂರ್ ಶ್ರೀಧರ್, ಜನವಾದಿ ಮಹಿಳಾ ಸಂಘಟನೆಯ ದೇವಿ ಸೇರಿದಂತೆ ರಾಜ್ಯಮಟ್ಟದ ನಾಯಕರು ಭಾಗವಹಿಸಿದ್ದರು. ಹೋರಾಟವನ್ನು ರವಿಕೃಷ್ಣಾ ರೆಡ್ಡಿ ಅವರ ಕೆಆರ್‌ಎಸ್ ಪಕ್ಷ ಬೆಂಬಲಿಸಿ ಬೈಕ್ ರ್‍ಯಾಲಿ ನಡೆಸಿದೆ. ಜಿಲ್ಲೆಯ ಕೆಲ ರೈತಪರ, ಕನ್ನಡಪರ, ದಲಿತಪರ ಸಂಘಟನೆಗಳು ಸಹ ಹೋರಾಟ ಬೆಂಬಲಿಸಿವೆ.

‘ಯೋಜನೆ ಕೈ ಬಿಡಲು ಸಾಧ್ಯವಿಲ್ಲ’

‘ಶೇ 80ರಷ್ಟು ರೈತರು ಯೋಜನೆಯ ಪರವಾಗಿದ್ದಾರೆ. ಜೆಡಿಎಸ್ ಈ ವಿಚಾರದಲ್ಲಿ ವಿನಾಕಾರಣ ರಾಜಕಾರಣ ಮಾಡುತ್ತಿದೆ. ಸರ್ಕಾರ ವಶಪಡಿಸಿಕೊಳ್ಳುವ ಭೂಮಿಗೆ ಒಳ್ಳೆಯ ಪರಿಹಾರ ಕೊಡುತ್ತಿದೆ. ಕೆಲವರ ಮಾತನ್ನು ಕೇಳಿ ಯೋಜನೆ ಕೈ ಬಿಡಲು ಸಾಧ್ಯವಿಲ್ಲ. ಬೆಂಗಳೂರಿನ ಜನಸಂದಣಿ ಹೆಚ್ಚಾಗಿದ್ದು, ಅನೇಕರಿಗೆ ನಿವೇಶನದ ಅಗತ್ಯವಿದೆ. ರೈತರ ಜತೆ ಚರ್ಚಿಸಿ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮಾಡುತ್ತೇವೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಆಕಾಶ್‌ಗೆ ಚಿನ್ನ

ಕರ್ನಾಟಕದ ಆಕಾಶ್ ಮಣಿ ಅವರು ಅಹಮದಾಬಾದ್‌ನಲ್ಲಿ ಮಂಗಳವಾರ ಆರಂಭವಾದ 79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು

prajavani.net prajavani

ಬುಧವಾರ, ಜೂನ್ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 167 | ಪುಟ 14

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,808 | ನಿಫ್ಟಿ 23,989 | ಚಿನ್ನ (Std. 10g) ₹1,55,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,65,700 (ಬೆಂಗಳೂರು)

ಕೋಟಿ ಕುಳಗಳಿಗೆ ‘ಲೋಕಾ’ ಗಾಳ

ಆದಾಯಕ್ಕಿಂತ ಹೆಚ್ಚು ಸಂಪತ್ತು ಹೊಂದಿದ ಪ್ರಕರಣ • ₹31.11 ಕೋಟಿ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣಗಳಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಎಂಟು ಅಧಿಕಾರಿಗಳಿಗೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಒಟ್ಟು ₹31.11 ಕೋಟಿ ಮೌಲ್ಯದ ಆಸ್ತಿಗಳನ್ನು ಪತ್ತೆ ಮಾಡಿದ್ದಾರೆ.

ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕಲಬುರಗಿ, ದಾವಣಗೆರೆ, ಬೆಳಗಾವಿ, ಚಿಕ್ಕಮಗಳೂರಿನ ಒಟ್ಟು 35 ಸ್ಥಳಗಳಲ್ಲಿ ಮಂಗಳವಾರ ಬೆಳಿಗ್ಗೆಯೇ ದಾಳಿ ಆರಂಭಿಸಲಾಗಿತ್ತು. ರಾತ್ರಿಯವರೆಗೂ ನಡೆದ ಶೋಧದಲ್ಲಿ ಲೋಕಾಯುಕ್ತ ಪೊಲೀಸರು ₹22.73 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಪತ್ತೆ ಮಾಡಿದ್ದಾರೆ.

ಕರ್ನಾಟಕ ಗೃಹ ಮಂಡಳಿಯ ಕೇಂದ್ರ ಕಚೇರಿಯ ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ಎಸ್.ಎಲ್. ರಾಜಣ್ಣ ಅವರಿಗೆ ಸೇರಿದ 5 ಸ್ಥಳಗಳಲ್ಲಿ ದಾಳಿ ನಡೆಸಲಾಗಿತ್ತು. ನಿವೇಶನ, ಮನೆ, ಕೃಷಿ ಜಮೀನು, ಚಿನ್ನಾಭರಣ, ವಾಹನಗಳು ಮತ್ತು ಬ್ಯಾಂಕ್ ಖಾತೆಗಳಲ್ಲಿನ ಉಳಿತಾಯ ಸೇರಿ ಒಟ್ಟು ₹4.97 ಕೋಟಿ ಮೌಲ್ಯದ ಆಸ್ತಿಗಳನ್ನು ಪತ್ತೆ ಮಾಡಿದ್ದಾರೆ. ಮಂಗಳವಾರದ ದಾಳಿಯಲ್ಲಿ ಪತ್ತೆಯಾದ ಅತಿಹೆಚ್ಚು ಆಸ್ತಿವಂತ ರಾಜಣ್ಣ.

ಕೆಆರ್‌ಐಡಿಎಲ್ ಬೆಳಗಾವಿ ವಿಭಾಗದ ಸೂಪರಿಂಟೆಂಡೆಂಟ್ ಎಂಜಿನಿಯರ್ ಸಣ್ಣ ಕೆಂಚಪ್ಪ ಅವರಿಗೆ ಸೇರಿದ ₹2.97 ಕೋಟಿ ಮೌಲ್ಯದ ಆಸ್ತಿಯನ್ನು ಲೋಕಾಯುಕ್ತ ಪೊಲೀಸರು ಪತ್ತೆ ಮಾಡಿದ್ದಾರೆ. ಇದರಲ್ಲಿ 31 ಎಕರೆಗಳಷ್ಟು ಕೃಷಿ ಭೂಮಿಯೂ ಸೇರಿದೆ. ಈ ದಾಳಿಯಲ್ಲಿ ಪತ್ತೆಯಾದ ಅತಿಹೆಚ್ಚು ಕೃಷಿ ಭೂಮಿ ಹಿಡುವಳಿ ಹೊಂದಿರುವವರು ಸಣ್ಣ ಕೆಂಚಪ್ಪ.

ದಾಳಿಯ ವೇಳೆ ಎಂಟೂ ಅಧಿಕಾರಿಗಳಿಗೆ ಸೇರಿದ ಒಟ್ಟು ₹8.38 ಕೋಟಿ ಮೌಲ್ಯದ ಚರಾಸ್ತಿಗಳು ಪತ್ತೆಯಾಗಿವೆ. ಇದರಲ್ಲಿ ₹3.95 ಕೋಟಿಯಷ್ಟು ಚಿನ್ನಾಭರಣವೇ ಇದೆ. ಶೋಧ ಮತ್ತು ದಾಖಲೆಗಳ ಪರಿಶೀಲನಾ ಕಾರ್ಯ ಮುಂದುವರಿದಿದ್ದು, ಆಸ್ತಿಯ ಮೌಲ್ಯ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಆಸ್ತಿ ವಿವರ 5

ದಾವಣಗೆರೆಯ ಸಿದ್ದೇಶ್ವರ ಎನ್‌.ಹೆಬ್ಬಾಳ ಅವರ ಮನೆಯಲ್ಲಿ ಪತ್ತೆಯಾದ ಬೆಳ್ಳಿ, ಚಿನ್ನಾಭರಣ ಮತ್ತು ನಗದು

ಅಂಕಿ ಅಂಶಗಳು

- ₹22.73 ಕೋಟಿ — ಎಂಟೂ ಅಧಿಕಾರಿಗಳ ಸ್ಥಿರಾಸ್ತಿಗಳ ಒಟ್ಟು ಮೌಲ್ಯ
- ₹3.95 ಕೋಟಿ — ಚಿನ್ನಾಭರಣಗಳ ಮೌಲ್ಯ
- ₹2.04 ಕೋಟಿ — ವಾಹನಗಳ ಮೌಲ್ಯ
- ₹91 ಲಕ್ಷ — ಉಳಿತಾಯ ಖಾತೆ ಠೇವಣಿ ಮತ್ತು ಷೇರು ಹೂಡಿಕೆಗಳ ಮೊತ್ತ
- ₹88.49 ಲಕ್ಷ — ಗೃಹೋಪಯೋಗಿ ವಸ್ತುಗಳ ಮೌಲ್ಯ

22ರವರೆಗೆ ಟೆಲಿಗ್ರಾಮ್ ಆ್ಯಪ್‌ಗೆ ನಿರ್ಬಂಧ

ನವದೆಹಲಿ (ಪಿಟಿಐ): ನೀಟ್‌–ಯುಜಿ 2026 ಮರುಪರೀಕ್ಷೆ ಜೂನ್ 21ರಂದು ನಡೆಯಲಿದ್ದು, ವಂಚನೆ ಜಾಲ ಹಾಗೂ ಸುಳ್ಳು ಸುದ್ದಿ ಹರಡುವುದನ್ನು ತಡೆಗಟ್ಟುವ ಉದ್ದೇಶದಿಂದ ಜೂನ್ 22ರವರೆಗೆ ಟೆಲಿಗ್ರಾಮ್ ಮೆಸೇಜಿಂಗ್ ಆ್ಯಪ್ ಬಳಕೆಯನ್ನು ನಿರ್ಬಂಧಿಸಿ ಕೇಂದ್ರ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಶಿಫಾರಸು ಮೇರೆಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಈ ಕ್ರಮ ಕೈಗೊಂಡಿದೆ.

ಪರೀಕ್ಷೆ ನಂತರ ‘ಪ್ರಶ್ನೆಪತ್ರಿಕೆ ಸೋರಿಕೆ’ ಆಗಿದೆಯೆಂದು ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಲು ಹಾಗೂ ಹರಡಲು ಟೆಲಿಗ್ರಾಮ್ ಆ್ಯಪ್ ಬಳಸಿಕೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಪೋಸ್ಟ್ ಮಾಡಿದ ಸಂದೇಶಗಳನ್ನು ಎಡಿಟ್ ಮಾಡುವ ವೈಶಿಷ್ಟ್ಯವನ್ನು ಭಾರತದಲ್ಲಿ ಜೂನ್ 30ರವರೆಗೆ ನಿಷ್ಕ್ರಿಯಗೊಳಿಸುವಂತೆ ಟೆಲಿಗ್ರಾಮ್ ಸಂಸ್ಥೆಗೆ ಸಚಿವಾಲಯವು ಮತ್ತೊಂದು ಆದೇಶದಲ್ಲಿ ಸೂಚಿಸಿದೆ.

‘ನೀಟ್‌– ಯುಜಿ ಮರುಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳನ್ನು ವಂಚಿಸಲು ವಂಚಕರ ಜಾಲವು ಟೆಲಿಗ್ರಾಮ್ ಆ್ಯಪ್ ಅನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ.

‘ಸುಳ್ಳು ಸುದ್ದಿ ಹರಡುವ ಹಾಗೂ ನೀಟ್ ಅಭ್ಯರ್ಥಿಗಳನ್ನು ವಂಚಿಸುವವರ ಮೇಲೆ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ (ಐಸಿಸಿಸಿ) ನಿಗಾ ವಹಿಸಿದೆ. ಬಿಹಾರ, ಗುಜರಾತ್ ಹಾಗೂ ರಾಜಸ್ಥಾನ ಪೊಲೀಸರು ಹಾಗೂ ಕಾನೂನು ಜಾರಿ ಸಂಸ್ಥೆಗಳ ಸಹಕಾರದೊಂದಿಗೆ ಅನೇಕ ಟೆಲಿಗ್ರಾಮ್ ಚಾನೆಲ್‌ಗಳು, ಗ್ರೂಪ್‌ಗಳು ಹಾಗೂ ಬಾಟ್‌ಗಳನ್ನು ಐಸಿಸಿಸಿ ತೆಗೆದುಹಾಕಿದೆ’ ಎಂದು ಹೇಳಿದ್ದಾರೆ.

‘ಟೆಲಿಗ್ರಾಮ್ ಚಾನೆಲ್ ಅಡ್ಮಿನ್‌ಗಳು ಪರೀಕ್ಷೆ ನಂತರ, ಹಳೆಯ ಸಂದೇಶಗಳನ್ನು ಎಡಿಟ್ ಮಾಡಿ ನಿಜವಾದ ಪ್ರಶ್ನೆಪತ್ರಿಕೆಯನ್ನು ಸೇರಿಸಬಹುದು. ಪ್ರಶ್ನೆಪತ್ರಿಕೆ ಮೊದಲೇ ಲಭ್ಯವಿತ್ತು ಎಂಬುದಾಗಿ ಬಿಂಬಿಸಲು ಅದರ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೆ ಮಾಡಬಹುದು. ಇತ್ತೀಚೆಗೆ ನಡೆದ ಅನೇಕ ಪರೀಕ್ಷೆಗಳ ಸಂದರ್ಭದಲ್ಲೂ ಇದೇ ವಿಧಾನ ಅನುಸರಿಸಿರುವ ನಿದರ್ಶನಗಳಿವೆ’ ಎಂದು ತಿಳಿಸಿದ್ದಾರೆ.

‘ಮರುಪರೀಕ್ಷೆಗೆ ಸಂಬಂಧಿಸಿದಂತೆ ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದ ಪ್ರಕರಣವೊಂದನ್ನು ಅಹಮದಾಬಾದ್ ಪೊಲೀಸರು ಸೋಮವಾರ ಪತ್ತೆಹಚ್ಚಿದ್ದಾರೆ. ಇಂತಹ ಸಂದೇಶಗಳನ್ನು ಹರಡುವುದರಿಂದ ಅಭ್ಯರ್ಥಿಗಳು ಆತಂಕಗೊಳ್ಳಲಿದ್ದು, ಮಾನಸಿಕವಾಗಿ ಒತ್ತಡಕ್ಕೆ ಸಿಲುಕುತ್ತಾರೆ. ಹೀಗಾಗಿ, ಈ ಕ್ರಮ ಕೈಗೊಳ್ಳಬೇಕಾಯಿತು’ ಎಂದು ಸಿಂಗ್ ತಿಳಿಸಿದ್ದಾರೆ.

ನಿರ್ಬಂಧದ ಬೆನ್ನಲ್ಲೇ, ಗೂಗಲ್ ತನ್ನ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಮ್ ಅಪ್ಲಿಕೇಶನ್ ಅನ್ನು ತೆಗೆದುಹಾಕಿದೆ. ಆ್ಯಪಲ್ ಕಂಪನಿ ಕೂಡ ಇದೇ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಟೆಲಿಗ್ರಾಮ್ ಆ್ಯಪ್‌ನಲ್ಲಿ ಸಂದೇಶಗಳ ‘ಎಡಿಟ್’ ವೈಶಿಷ್ಟ್ಯದ ನಿರ್ಬಂಧದಿಂದ ಹೊಸ ಸಂದೇಶಗಳನ್ನು ಕಳುಹಿಸಲು, ಸ್ವೀಕರಿಸಲು ಬಳಕೆದಾರರಿಗೆ ತೊಂದರೆಯಾಗುವುದಿಲ್ಲ

ಅಭಿಷೇಕ್ ಸಿಂಗ್, ಎನ್‌ಟಿಎ ಮಹಾನಿರ್ದೇಶಕ

ನೀಟ್ ಮರುಪರೀಕ್ಷೆ

ಚಿನ್ನದ ಆಮದು ಶೇ 34ರಷ್ಟು ಜಿಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದು ವರ್ಷದ ಮಟ್ಟಿಗೆ ಚಿನ್ನದ ಖರೀದಿ ಮುಂದೂಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶವಾಸಿಗಳಿಗೆ ಕರೆ ನೀಡಿದ್ದರೂ, ಮೇ ತಿಂಗಳಲ್ಲಿ ಚಿನ್ನದ ಆಮದು ಶೇ 34ರಷ್ಟು ಹೆಚ್ಚಳ ಕಂಡಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶದ ಪ್ರಕಾರ ಏಪ್ರಿಲ್, ಮೇ ತಿಂಗಳಲ್ಲಿ ಚಿನ್ನದ ಆಮದು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 60ರಷ್ಟು ಜಾಸ್ತಿ ಆಗಿದೆ.

ಚಿನ್ನದ ಖರೀದಿ ಮುಂದೂಡುವಂತೆ ಪ್ರಧಾನಿಯವರು ಮೇ 10ರಂದು ಮನವಿ ಮಾಡಿದ್ದರು. ಪ್ರಧಾನಿಯವರು ಈ ಮನವಿ ಮಾಡಿದ ಎರಡು ದಿನಗಳ ನಂತರ ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಕೇಂದ್ರ ಮಂಡಳಿಯು ಚಿನ್ನದ ಆಮದು ಸುಂಕವನ್ನು ಶೇ 15ರಷ್ಟಕ್ಕೆ ಹೆಚ್ಚಿಸಿತ್ತು. ಹೀಗಿದ್ದರೂ ಚಿನ್ನದ ಆಮದು ಪ್ರಮಾಣ ಹೆಚ್ಚಾಗಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ತುಂತುರು ಮಳೆಯಾಗಲಿದೆ.

ಡಿಕೆಶಿ ಸಂಪುಟ ಪ್ರಶ್ನಿಸಿದ್ದ ಪಿಐಎಲ್: ಅರ್ಜಿದಾರರಿಗೆ ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವರ ಪ್ರಮಾಣವಚನ ಸ್ವೀಕಾರ ಹಾಗೂ ಮಂತ್ರಿಮಂಡಲದ ರಚನೆ ಸಂವಿಧಾನ ಬಾಹಿರ' ಎಂದು ಘೋಷಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರೊಬ್ಬರಿಗೆ ಹೈಕೋರ್ಟ್ ₹50 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ಹುಬ್ಬಳ್ಳಿಯ ಮಂಗಳಪ್ಪ ತಿಪ್ಪಣ್ಣ ಹುಲಿಕೇರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಇದೊಂದು ಊಹೆ ಮತ್ತು ಗ್ರಹಿಕೆಗಳ ಆಧಾರದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸಲ್ಲಿಸಲಾಗಿರುವ ಕ್ಷುಲ್ಲಕ ಅರ್ಜಿಯಾಗಿದ್ದು, ಈ ಮೂಲಕ ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ಅರ್ಜಿದಾರರಿಗೆ ₹50 ಸಾವಿರ ದಂಡ ವಿಧಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿತು. 'ದಂಡದ ಮೊತ್ತವನ್ನು ಎರಡು ವಾರಗಳಲ್ಲಿ ಕಾನೂನು ಸೇವಾ ಪ್ರಾಧಿಕಾರಕ್ಕೆ ಪಾವತಿಸಬೇಕು' ಎಂದು ನಿರ್ದೇಶಿಸಲಾಗಿದೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ 04/2027/ಎಸ್‌ಬಿಸಿ ದಿನಾಂಕ: 11.06.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ (ಇ–ಮುಕ್ತ ಟೆಂಡರ್)	ಪ್ರಮಾಣ	ಘಟಕ
1	ಎಲ್ 8265924	ಎಸ್‌ಎಸ್ ಬೋಲ್ಟ್ ನಟ್ ಮತ್ತು ವಾಷರ್ ಸಂಪೂರ್ಣ ಅಸೆಂಬ್ಲಿಯೊಂದಿಗೆ ಸಮಾನಾಂತರ ಕ್ಲಾಂಪ್ (ಆರ್‌ಐ ಸಂಖ್ಯೆ 1031–3) ಪೂರೈಕೆ.	16000	ಸೆಟ್
		ಸರಬರಾಜು ವಸ್ತುವಿನ ವಿವರಣೆ: ಸಮಾನಾಂತರ ಕ್ಲಾಂಪ್ ಪೂರೈಕೆ (157–65/107/150) (ಆರ್‌ಐ ಸಂಖ್ಯೆ.1031–3) ಸಂಪೂರ್ಣ ಅಸೆಂಬ್ಲಿ	1000	ಸೆಟ್

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08–07–2026 ರಂದು 10.30 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು

ಪಿಯುಬಿ/212/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ಶ್ರೇ) ಮತ್ತು ಸಿ.ಜೆ.ಎಂ., ಚಾಮರಾಜನಗರ

ಜಿ.&ಡಬ್ಲ್ಯೂ ನಂ. 3/2025

ಅರ್ಜಿದಾರರು ; ಶ್ರೀ ವಿದ್ಯಾಸಾಗರ್ ಎಸ್. ಬಿನ್ ಬಿ. ಲೇಟ್ ಸುಂದರರಾಜು, ವಯಸ್ಸು 50 ವರ್ಷ, ವಾಸ : ಮನೆ ನಂ. 56, ಸಾಗರ ಸದನ, ಬುದ್ದನಗರ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ

ವಿರುದ್ಧ

ಎದುರುದಾರರು : 1. ಶ್ರೀ ಕೆಂಪಯ್ಯ ಬಿನ್ ಲೇಟ್ ಕರಿಯಪ್ಪ, ವಯಸ್ಸು 76 ವರ್ಷ, 2. ಶ್ರೀಮತಿ ಸಣ್ಣಮ್ಮ ಕೋಂ. ಕೆಂಪಯ್ಯ, ವಯಸ್ಸು 70 ವರ್ಷ, 1 ಮತ್ತು 2 ರವರ ವಿಳಾಸ : ನಂ. 23, 4ನೇ ಅಡ್ಡರಸ್ತೆ, ಬಾಪೂಜಿ ಲೇಔಟ್, ಚಂದ್ರ ಲೇಔಟ್, ವಿಜಯನಗರ, ಬೆಂಗಳೂರು ನಗರ – 560 040

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಎದುರುದಾರರ ವಿರುದ್ಧ ಸದರಿ ಅರ್ಜಿಯನ್ನು ತಂದಿದ್ದು, ಸದರಿ ಅರ್ಜಿಯಲ್ಲಿ ಎದುರುದಾರರುಗಳಾದ ನಂ. 1 ಶ್ರೀ ಕೆಂಪಯ್ಯ ಹಾಗೂ ನಂ. 2 ಶ್ರೀಮತಿ ಸಣ್ಣಮ್ಮ ಇವರುಗಳು ನ್ಯಾಯಾಲಯದಿಂದ ಸಮನ್ಸ್‌ನ್ನು ತೆಗೆದುಕೊಳ್ಳದೆ ಹಾಗೂ ಸ್ಪೀಡ್ ಪೋಸ್ಟ್ ಮುಖಾಂತರ ಸಲ್ಲಿಸಿದ್ದರೂ ಸಹ ಸದರಿ ಸ್ಪೀಡ್ ಪೋಸ್ಟ್ ಜಾರಿಯಾಗದೆ ವಾಪಸ್ಸು ಆಗಿರುತ್ತದೆ. ಇವರುಗಳು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತಾರೆ. ಆದುದ್ದರಿಂದ ಅದಕ್ಕೆ ಸಂಬಂಧಿಸಿದಂತೆ ಪ್ರಜಾವಾಣಿ ದಿನ ಪತ್ರಿಕೆಗೆ ಪ್ರಕಟಿಸುತ್ತಿದ್ದು, ಸದರಿಯವರು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ : 06–07–2026 ರಂದು 11.00 ಗಂಟೆಗೆ ಹಾಜರಾಗತಕ್ಕದ್ದು ಅಥವಾ ನಿಮ್ಮ ವಕೀಲರ ಮುಖಾಂತರ ಹಾಜರಾತಕ್ಕದ್ದು. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾಡುತ್ತದೆ. ದಿನಾಂಕ : 11–06–2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
ಸಹಿ/– ನಿಂಗಪ್ಪ ಎಂ., ಕೆ.ಎ.ಆರ್. 3215/2010,
ವಕೀಲರು, ನಂ. 05, ಪಿ.ಡಬ್ಲ್ಯೂಡಿ ಪಂಪ್ ಹೌಸ್ ಹತ್ತಿರ, ಶಿವನ ಸಮುದ್ರ, ಸತ್ತೇಗಾಲ ಅಂಚೆ,
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು, ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ಶ್ರೇ)
ಮತ್ತು ಸಿ.ಜೆ.ಎಂ., ಚಾಮರಾಜನಗರ

NATION TAX MARKET

Government of India
Ministry of Finance, Department of Revenue
OFFICE OF THE PRINCIPAL CHIEF COMMISSIONER OF CENTRAL TAX
Bengaluru Zone, P.B.No.5400, C.R. Building, Queen's Road, Bengaluru-560001
Office email: ccbz-excise@nic.in, Phone: 080-22864523 (257/258)

ಸಾರ್ವಜನಿಕ ಸೂಚನೆ

ಸಾರ್ವಜನಿಕರ ಗಮನಕ್ಕೆ ತರಲಾಗುವುದೇನೆಂದರೆ, ಕೆಲವು ವಂಚಕ ವ್ಯಕ್ತಿಗಳು ತಾವು ಕೇಂದ್ರ ತೆರಿಗೆ ಮತ್ತು ಕಸ್ಟಮ್ಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಸುಳ್ಳು ಹೇಳಿಕೊಂಡು, ಕೇಂದ್ರ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿ (CBIC), ಆದಾಯ ಇಲಾಖೆ, ಹಣಕಾಸು ಸಚಿವಾಲಯ, ಭಾರತ ಸರ್ಕಾರದ ಅಧೀನದಲ್ಲಿರುವ ಕಚೇರಿಗಳಲ್ಲಿ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡಿ, ಉದ್ಯೋಗಾಕಾಂಕ್ಷಿಗಳಿಂದ ಹಣ ವಸೂಲಿ ಮಾಡುವ ಮೂಲಕ ಅವರನ್ನು ವಂಚಿಸಲು ಪ್ರಯತ್ನಿಸುತ್ತಿದ್ದಾರೆ. ಕರ್ನಾಟಕದ ಕಲಬುರಗಿಯಲ್ಲಿ ಸುಮಾರು 47/48 ವರ್ಷ ವಯಸ್ಸಿನ ಬಸವರಾಜ ಟಿ. ಕಲೆಕಿಂಗೆ ಎಂಬ ವ್ಯಕ್ತಿಯೊಬ್ಬರು ಹಣ ಪಡೆದು ಕೇಂದ್ರ ತೆರಿಗೆ ಇಲಾಖೆಯಲ್ಲಿ ಉದ್ಯೋಗ ನೀಡುವುದಾಗಿ ಹೇಳುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಬೆಂಗಳೂರು ವಲಯದ ಪ್ರಧಾನ ಮುಖ್ಯ ಕೇಂದ್ರೀಯ ತೆರಿಗೆ ಆಯುಕ್ತರ ಕಚೇರಿ ಹಾಗೂ ಅದರ ಅಧೀನದಲ್ಲಿರುವ ಯಾವುದೇ ಕಚೇರಿಗಳು ಅಭ್ಯರ್ಥಿಗಳ ನೇಮಕಾತಿಗಾಗಿ ಯಾವುದೇ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಅಧಿಕಾರ ನೀಡಿಲ್ಲ ಎಂಬುದನ್ನು ದಯವಿಟ್ಟು ಗಮನಿಸಬೇಕು. ಅಧಿಕೃತ ನೇಮಕಾತಿಗಳು ಕೇವಲ ಅರ್ಹತೆ ಆಧಾರಿತವಾಗಿದ್ದು, ಸಿಬ್ಬಂದಿ ಆಯ್ಕೆ ಆಯೋಗ (SSC) ಅಥವಾ ಕೇಂದ್ರ ಲೋಕಸೇವಾ ಆಯೋಗ (UPSC) ಮುಂತಾದ ಕಾನೂನುಬದ್ಧ ಸರ್ಕಾರಿ ಸಂಸ್ಥೆಗಳ ಮೂಲಕ ಮಾತ್ರ ನಡೆಸಲಾಗುತ್ತವೆ.

ಆದ್ದರಿಂದ, ಎಲ್ಲಾ ಉದ್ಯೋಗಾಕಾಂಕ್ಷಿಗಳು ಹಾಗೂ ಸಾರ್ವಜನಿಕರು ಅತ್ಯಂತ ಎಚ್ಚರಿಕೆಯಿಂದಿರುವಂತೆ ವಿನಂತಿಸಲಾಗುತ್ತದೆ. ಯಾವುದೇ ಉದ್ಯೋಗ ಸಂಬಂಧಿತ ಮಾಹಿತಿಯ ಸತ್ಯಾಸತ್ಯತೆಯನ್ನು ಇಲಾಖೆಯ ಅಧಿಕೃತ ಜಾಲತಾಣಗಳ ಮೂಲಕ ಪರಿಶೀಲಿಸಿಕೊಳ್ಳುವುದು ಹಾಗೂ ಇಂತಹ ವಂಚನಾತ್ಮಕ ನೇಮಕಾತಿ ಯೋಜನೆಗಳಿಗೆ ಬಲಿಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವಾಗಿರುತ್ತದೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಿಸಲಾಗಿದೆ.

'ಲೂಟಿಗೆ ಅವಕಾಶ ಎಲ್ಲಿದೆ– ಸಾಬೀತುಪಡಿಸಿ'

ಬಿಡದಿ ಟೌನ್‌ಶಿಪ್ ಯೋಜನೆ 'ಕುಮಾರಸ್ವಾಮಿ ಕೂಸು'– ಲಕ್ಷ್ಮಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆ ಕುಮಾರಸ್ವಾಮಿ ಅವರ ಕೂಸು. ಇದು ಬೇಕಿದ್ದು ಬಿಜೆಪಿ ಆಡಳಿತದಲ್ಲಿ. ಈ ಯೋಜನೆ ವಿರೋಧಿಸಿ ಪ್ರತಿಭಟನೆ ಮಾಡುತ್ತಿರುವ ಬಹುತೇಕರು ಹಸಿರು ಶಾಲು ಹೊದ್ದುಕೊಂಡಿರುವ ಜೆಡಿಎಸ್ ಕಾರ್ಯಕರ್ತರು' ಎಂದು ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಯೋಜನೆಯಿಂದ ಮುಂದೆ ಜನರಿಗೆ ಅನ್ಯಾಯವಾಗುತ್ತದೆ ಎಂದು ಅನಿಸಿದರೆ ಅದಕ್ಕೆ ದಾಖಲೆ ಬಿಡುಗಡೆ ಮಾಡಲಿ. ಯೋಜನೆಯಲ್ಲಿ ಲೂಟಿ ಮಾಡಲು ಅವಕಾಶ ಎಲ್ಲಿದೆ ಎಂಬುದನ್ನು ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಸಾಬೀತುಪಡಿಸಲಿ' ಎಂದು ಸವಾಲು ಹಾಕಿದರು.

'ಕುಮಾರಸ್ವಾಮಿ ಅವರ ನೇತೃತ್ವದ ಮೈತ್ರಿ ಸರ್ಕಾರದ ಅವಧಿಯಲ್ಲಿ ಬಿಡದಿಯಲ್ಲಿ 9,484 ಎಕರೆಯಲ್ಲಿ ಟೌನ್‌ಶಿಪ್ ಮಾಡಲು ತೀರ್ಮಾನಿಸಲಾಗಿತ್ತು. 7,481 ಎಕರೆ ಜಮೀನು ಸ್ವಾಧೀನಕ್ಕೆ ನಮ್ಮ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಜಮೀನು ಸ್ವಾಧೀನ ಪಡಿಸಿಕೊಂಡು ನಿವೇಶನ ಮಾಡಿ ಬೇರೆಯವರಿಗೆ ಹಂಚುವ ಉದ್ದೇಶವಿಲ್ಲ. ಕೈಗಾರಿಕಾ ಕಾರಿಡಾರ್ ಮಾದರಿ 7,481 ಎಕರೆ ಜಮೀನು ಡೆವಲಪ್‌ಮೆಂಟ್ ಕಾರಿಡಾರ್ ನಿರ್ಮಿಸಲಾಗುತ್ತಿದೆ. ಭೂಮಿಯನ್ನು ವಶಪಡಿಸಿಕೊಂಡು ನೀಡುವುದಷ್ಟೇ ನಮ್ಮ ಕೆಲಸ. ಟೌನ್‌ಶಿಪ್ ಅನ್ನು ಜನರೇ ನಿರ್ಮಾಣ ಮಾಡಿಕೊಳ್ಳುತ್ತಾರೆ' ಎಂದರು.

'ಇದು ₹33 ಸಾವಿರ ಕೋಟಿ ಹಗರಣ ಎಂದು ಕುಮಾರಸ್ವಾಮಿ ಆರೋಪಿಸುತ್ತಿದ್ದಾರೆ. ಇಷ್ಟು ಹಣ ಎಲ್ಲಿಂದ ಬರುತ್ತದೆ ಎಂಬುದು ಅರ್ಥವಾಗುತ್ತಿಲ್ಲ. 7,481 ಎಕರೆ ಪೈಕಿ, 9 ಹಳ್ಳಿಗಳ 6,043 ರೈತರಿಂದ ಜಮೀನು ಪಡೆಯುತ್ತಿದ್ದೇವೆ. ಜಮೀನು ನೀಡುವುದಿಲ್ಲ ಎಂದು 1,367 ರೈತರು ಲಿಖಿತ ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ರೈತರಿಗೆ ಬಿಎಂಆರ್‌ಡಿಎ ಆಯುಕ್ತರ ನೇತೃತ್ವದ ಸಮಿತಿ ನೋಟಿಸ್ ನೀಡಿ ಅಹವಾಲು ಆಲಿಸಿದಾಗ 247 ರೈತರು ಬರಲಿಲ್ಲ. 259 ರೈತರು ಹಾಜರಾಗಿ ಪರಿಹಾರ ಹೆಚ್ಚಿಸುವಂತೆ ಮನವಿ ಮಾಡಿದರು. 663 ರೈತರು ಮಾತ್ರ ಯಾವುದೇ ಕಾರಣಕ್ಕೆ ಜಮೀನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಾರೆ. ಇವರ ಒಟ್ಟು ಜಾಗ 1,348 ಎಕರೆ. ಅಂದರೆ, ಶೇ 11 ರೈತರು ಮಾತ್ರ ಭೂಮಿ ಕೊಡಲ್ಲ ಎಂದು ಹೇಳುತ್ತಿದ್ದಾರೆ' ಎಂದು ವಿವರಿಸಿದರು.

'ಬಿಎಂಆರ್‌ಡಿಎ ಮೂಲಕ ಪ್ರತಿ ಎಕರೆಗೆ ₹2.14 ಕೋಟಿ ಪರಿಹಾರ ಘೋಷಿಸಲಾಗಿದೆ. ಹಣ ಪಡೆದು ಜಮೀನು ನೀಡಬಹುದು ಅಥವಾ 40:60 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಭೂಮಿ ಪಡೆಯಬಹುದು. ಈ 40:60 ಅನುಪಾತದ ಭೂಮಿ ಪ್ರಸ್ತಾವ ಕುಮಾರಸ್ವಾಮಿ ಅವರದ್ದು. ನಮ್ಮ ಸರ್ಕಾರ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಭೂಮಿ ನೀಡಲು ತೀರ್ಮಾನಿಸಿದೆ. ಮೂಲಸೌಕರ್ಯ ಬಳಕೆ ನಂತರ ಉಳಿಯುವ ಜಾಗದಲ್ಲಿ ರೈತರಿಗೆ 9,600 ಚದರ ಅಡಿಯಷ್ಟು ಭೂಮಿ ನೀಡಲಾಗುತ್ತದೆ. ಅದನ್ನು ರೈತರು ಯಾರಿಗೆ ಬೇಕಾದರೂ ಮಾರಾಟ ಮಾಡಿಕೊಳ್ಳಬಹುದು. ಕುಮಾರಸ್ವಾಮಿ ಅವರು 8 ಸಾವಿರ ಚದರ ಅಡಿಗಳನ್ನು ಪರಿಹಾರವಾಗಿ ನೀಡಲು ನಿರ್ಧರಿಸಿದ್ದರು. ನಮ್ಮ ಸರ್ಕಾರ 1,600 ಚದರ ಅಡಿಗಳಷ್ಟು ಜಮೀನು ಹೆಚ್ಚು ನೀಡುತ್ತಿದೆ' ಎಂದರು.

ಮುಖ್ಯಾಂಶಗಳು

- ಜನರಿಗೆ ಅನ್ಯಾಯವಾದರೆ ದಾಖಲೆ ಬಿಡುಗಡೆಗೊಳಿಸಿ
- ನಿವೇಶನ ಮಾಡಿ ಬೇರೆಯವರಿಗೆ ಹಂಚುವ ಉದ್ದೇಶವಿಲ್ಲ

ಅಶೋಕ ಅವರು ನಾಲಾಯಕ್ ವಿರೋಧ ಪಕ್ಷದ ನಾಯಕ. ಬಾಯಿಗೆ ಬಂದಂತೆ ಸುಳ್ಳು ಹೇಳುತ್ತಾರೆ. ಇಂತಹ ಸುಳ್ಳು ಹೇಳುವ ವ್ಯಕ್ತಿ ಪ್ರಪಂಚದಲ್ಲಿ ಯಾರು ಇಲ್ಲವೇನೋ?

ಎಂ. ಲಕ್ಷ್ಮಣ್, ಕೆಪಿಸಿಸಿ ವಕ್ತಾರ

'ಪರಿಹಾರದ ಹಣವನ್ನು ಕೋರಿದ ಅನಿತಾ ಕುಮಾರಸ್ವಾಮಿ'

'ಶೇ 80ರಷ್ಟು ರೈತರು ಭೂಮಿ ನೀಡಲು ಒಪ್ಪಿಗೆ ನೀಡಿಲ್ಲ ಎಂದು ಕುಮಾರಸ್ವಾಮಿ ಅವರ ಮಾತು ಅಪ್ಪಟ ಸುಳ್ಳು. ಭೂಸ್ವಾಧೀನವಾದರೆ ಅದಕ್ಕೆ ಸಂಬಂಧಿಸಿದ ದಾಖಲಾತಿ, ನೋಟಿಸ್, ಪರಿಹಾರದ ಹಣವನ್ನು ತಮ್ಮ ಹೆಸರಿಗೆ ನೀಡಬೇಕೆಂದು ಅನಿತಾ ಕುಮಾರಸ್ವಾಮಿ ಅವರು ಮನವಿ ಮಾಡಿದ್ದಾರೆ' ಎಂದು ಲಕ್ಷ್ಮಣ್ ಹೇಳಿದರು.

'ಭೂಸ್ವಾಧೀನಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿದ ಬಳಿಕ ಅನಿತಾ ಕುಮಾರಸ್ವಾಮಿ ಅವರು ಈ ಕುರಿತು ಪತ್ರ ಬರೆದಿದ್ದಾರೆ. '35 ಎಕರೆ ಜಮೀನು ನನ್ನ ಹೆಸರಿನಲ್ಲಿದ್ದು, ಕಾರಣಾಂತರಗಳಿಂದ ಎಂ.ಜಿ. ವಿನಯ್ ಗೌಡ ಅವರಿಗೆ ನೀಡಿದ್ದೆ. ಈ ಜಮೀನನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದು, ಪರಿಹಾರದ ಮೊತ್ತವನ್ನು ನನ್ನ ಖಾತೆಗೆ ನೀಡಿ' ಎಂದು ಅನಿತಾ ಅವರು ಪತ್ರದಲ್ಲಿ ಹೇಳಿದ್ದಾರೆ. ವಿನಯ್ ಗೌಡ ಎಂಬ ಬೇನಾಮಿ ಹೆಸರಿನಲ್ಲಿ ಈ ಜಮೀನನ್ನು ಕುಮಾರಸ್ವಾಮಿ ಕುಟುಂಬ ಪಡೆದಿದೆ' ಎಂದು ಲಕ್ಷ್ಮಣ್ ಆರೋಪಿಸಿದರು.

ರೈತರ ಬಳಿಗೆ ಬಿಜೆಪಿ ನಿಯೋಗ ಇಂದು

ಬೆಂಗಳೂರು: ಬಿಡದಿ ಟೌನ್‌ಶಿಪ್ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಳ್ಳುವ ಆತಂಕದಲ್ಲಿರುವ ರೈತರನ್ನು ಭೇಟಿ ಮಾಡಲು ಬಿಜೆಪಿ ಮುಖಂಡರ ನಿಯೋಗ ಹಳ್ಳಿಗಳಿಗೆ ತೆರಳುತ್ತಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಸಿ.ಎನ್. ಅಶ್ವತ್ಥನಾರಾಯಣ, ಎಸ್. ಸುರೇಶ್‌ಕುಮಾರ್ ಮತ್ತಿತರರು ಟೌನ್‌ಶಿಪ್ ನಿರ್ಮಾಣ ಯೋಜನೆ ವಿರೋಧಿಸಿ ಹೋರಾಟ ನಡೆಸುತ್ತಿರುವ ರೈತರನ್ನು ಜೂನ್ 17ರಂದು ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.

ಮೊದಲ ದಿನ ಬಿಡದಿ ವ್ಯಾಪ್ತಿಯ ಕೆಂಪಯ್ಯನಪಾಳ್ಯ, ಅರಳಾಳುಸಂದ್ರ, ಹೊಸೂರು, ಬನ್ನಿಗಿರಿ ಗ್ರಾಮಗಳಿಗೆ ಭೇಟಿ ನೀಡಲಿದ್ದಾರೆ. ರೈತರ ಅಹವಾಲು ಆಲಿಸಿದ ನಂತರ ಯೋಜನೆ ಕೈಬಿಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲಿದ್ದಾರೆ. ಯೋಜನೆ ಕೈಬಿಡದಿದ್ದರೆ ರೈತರ ಜತೆ ಸೇರಿ ಹೋರಾಟ ನಡೆಸಲು ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ.

ನಿಧನ ವಾರ್ತೆ

ಸಿ.ಎಂ.ಲೋಗನಾಥನ್

ಬೆಂಗಳೂರು: ನಗರದ ಫ್ರೇಜರ್‌ಟೌನ್‌ನ ಎ.ಕೆ.ಕಾಲೊನಿ ನಿವಾಸಿ ಸಿ.ಎಂ.ಲೋಗನಾಥನ್ (74) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಬಿಇಎಲ್ ಕಾರ್ಖಾನೆಯಲ್ಲಿ ಉಪ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ.

ಮೃತರ ಅಂತ್ಯಕ್ರಿಯೆ ಕಾಡುಗೊಂಡನಹಳ್ಳಿಯ ಪಿಳ್ಳಣ್ಣ ಗಾರ್ಡನ್‌ನ ಸ್ಮಶಾನದಲ್ಲಿ ಬುಧವಾರ ಮಧ್ಯಾಹ್ನ 1.30ಕ್ಕೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. CAO/CN/BNC/186/2026, ದಿನಾಂಕ: 09.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ಕೋಟೆಗಂಗೂರು ಯಾರ್ಡ್‌ನಲ್ಲಿ ತ್ವರಿತ ಕೋಚ್ ವಾಟರಿಂಗ್ ಸಿಸ್ಟಮ್‌ಅನ್ನು ಸ್ಥಾಪನೆ ಮಾಡಲು ಸಿವಿಲ್ ಮತ್ತು ಸಾಮಾನ್ಯ ಎಲೆಕ್ಟ್ರಿಕಲ್‌ನ ಸಂಯುಕ್ತ ಕಾಮಗಾರಿ. (ಟೆಂಡರು ಉಲ್ಲೇಖ ಸಂಖ್ಯೆ: KGH-DEPOT-04)	ರೂ. 3,68,32,693/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.07.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ಕಂಟೋನ್ಮೆಂಟ್

PUB/202/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

'ಕೆಂಪೇಗೌಡ ಜಯಂತಿ'ಗೆ 15 ಲಕ್ಷ ಗಿಡ'

27ರಂದು ಕೆಂಪೇಗೌಡ ಬಡಾವಣೆಯಲ್ಲಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಹೊಸದಾಗಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಇದೇ 27ರಂದು ಆಚರಿಸಲಾಗುವುದು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್

ಕೆಂಪೇಗೌಡರ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲು ಮಂಗಳವಾರ ನಡೆದ ಪೂರ್ವಭಾವಿ ಸಭೆಯ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಅಂದು ಬೆಳಿಗ್ಗೆ 11.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಅಂದು ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ನೇತೃತ್ವದಲ್ಲಿ ನಗರದಲ್ಲಿ ಬಿಡಿಎ ವತಿಯಿಂದ 15 ಲಕ್ಷ ಗಿಡಗಳನ್ನು ನೆಡಲಾಗುವುದು' ಎಂದರು.

'ಕಾರ್ಯಕ್ರಮದ ರೂಪುರೇಷೆ ಬಗ್ಗೆ ಎಲ್ಲ ಸಂಘಟನೆಗಳ ಜತೆ ಚರ್ಚೆ ನಡೆಸಲಾಗಿದೆ. ನಗರದ ನಾಲ್ಕು ಕೆಂಪೇಗೌಡ ಗೋಪುರಗಳಿಂದ ಪ್ರತ್ಯೇಕ ತಂಡಗಳು ಮೆರವಣಿಗೆಯಲ್ಲಿ ಬರಲಿದ್ದು, ಅದರ ಹೊಣೆಯನ್ನು ಸಚಿವರಾದ ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಜೆ. ಜಾರ್ಜ್ ಮತ್ತು ಬೈರತಿ ಸುರೇಶ್ ವಹಿಸಲಿದ್ದಾರೆ. ಮಾಗಡಿ ತಂಡವನ್ನು ಶಾಸಕ ಎಚ್.ಸಿ. ಬಾಲಕೃಷ್ಣ, ಹುಲಿಯೂರು ದುರ್ಗ ಕಡೆಯಿಂದ ಬರಲಿರುವ ಮೆರವಣಿಗೆಯನ್ನು ಶಾಸಕ ಎಚ್.ಡಿ. ರಂಗನಾಥ್ ಮುನ್ನಡೆಸಲಿದ್ದಾರೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸಚಿವ ಕೆ.ಎಚ್. ಮುನಿಯಪ್ಪ ಭಾಗವಹಿಸಲಿದ್ದಾರೆ' ಎಂದರು.

'ಕೆಂಪೇಗೌಡರ ಹೆಸರಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ 'ನಗರ ಯೋಜನಾ (ಟೌನ್ ಪ್ಲಾನಿಂಗ್) ಕಾಲೇಜು' ನಿರ್ಮಿಸಲು ಸಿದ್ಧತೆ ನಡೆಯುತ್ತಿದೆ. ಪ್ರತಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಜಯಂತಿ ಆಚರಿಸಲು ತಲಾ ₹1 ಲಕ್ಷ, ಬೆಂಗಳೂರಿನ 369 ವಾರ್ಡ್‌ಗಳಲ್ಲಿ ಕಾರ್ಯಕ್ರಮ ನಡೆಸಲು ಜಿಬಿಎ ವತಿಯಿಂದ ತಲಾ ₹1 ಲಕ್ಷ ಅನುದಾನ ನೀಡಲಾಗುವುದು' ಎಂದರು.

'ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಿರುವ ಥೀಮ್ ಪಾರ್ಕನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ ತಯಾರಿ ಮಾಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಗಣ್ಯರು, ಸ್ವಾಮೀಜಿಗಳು ಹಾಗೂ ನಾಯಕರನ್ನು ಆಹ್ವಾನಿಸುವ ಜವಾಬ್ದಾರಿಯನ್ನು ಕೃಷ್ಣ ಬೈರೇಗೌಡರು ವಹಿಸಿಕೊಂಡಿದ್ದಾರೆ. ಸಂಘಟನೆಗಳು ಹಾಗೂ ಒಕ್ಕಲಿಗರ ಸಂಘ ತಮ್ಮದೇ ಆದ ಜವಾಬ್ದಾರಿ ಹೊತ್ತುಕೊಂಡಿವೆ. ಈ ಕಾರ್ಯಕ್ರಮ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ' ಎಂದು ಮುಖ್ಯಮಂತ್ರಿ ತಿಳಿಸಿದರು.

ಸರ್ಕಾರಿ ರಜೆ ಘೋಷಣೆಗೆ ಸಲಹೆ

ನಾಡಪ್ರಭು ಕೆಂಪೇಗೌಡ ಅವರನ್ನು ಬೆಂಗಳೂರಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ, ಜಯಂತಿಯಂದು ಸರ್ಕಾರಿ ರಜೆ ನೀಡಬೇಕು ಎಂಬುದು ಸೇರಿದಂತೆ ಅನೇಕ ಸಲಹೆಗಳು ಪೂರ್ವಭಾವಿ ಸಭೆಯಲ್ಲಿ ವ್ಯಕ್ತವಾದವು.

ಕೆಂಪೇಗೌಡ ಸಮಾಧಿ ಸ್ಥಳವನ್ನು 10 ಎಕರೆ ಜಾಗದಲ್ಲಿ ಅಭಿವೃದ್ಧಿಪಡಿಸಬೇಕು. ಜೊತೆಗೆ, ಕೆಂಪೇಗೌಡರ ಕೋಟೆ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಬೇಕು, ಜಿಬಿಎ ವ್ಯಾಪ್ತಿಯಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚಿಸಬೇಕು, ಎಲ್ಲ ಜಿಲ್ಲೆಗಳಲ್ಲಿ ಕೆಂಪೇಗೌಡ ಜಿಲ್ಲಾ ಭವನ ನಿರ್ಮಿಸಬೇಕು, ಕೆಂಪೇಗೌಡರ ಹೆಸರಿನಲ್ಲಿ ಅಂತರರಾಷ್ಟ್ರೀಯ ಉದ್ಯಾನ ಹಾಗೂ ಅಂತರರಾಷ್ಟ್ರೀಯ ಸಮುದಾಯ ಭವನ ನಿರ್ಮಿಸಬೇಕು, ಕೆಂಪೇಗೌಡರ ವಸ್ತುಸಂಗ್ರಹಾಲಯ, ಕೆರೆಗಳ ಶುದ್ಧೀಕರಣ,ಪುನಶ್ಚೇತನ, ಸ್ವಾಮಿನಾಥನ್ ವರದಿ ಆಧರಿಸಿ ಜಲ ನಿರ್ವಹಣೆ ಬಗ್ಗೆ ಬೆಂಗಳೂರಿನ ಜನರಲ್ಲಿ ಜಾಗೃತಿ ಮೂಡಿಸಲು ಕಾರ್ಯಾಗಾರ, ಪಠ್ಯಪುಸ್ತಕದಲ್ಲಿ ಕೆಂಪೇಗೌಡರ ಜೀವನ ಚರಿತ್ರೆ ಅಳವಡಿಸಬೇಕು ಎಂದು ಕೆಲವರು ಆಗ್ರಹಿಸಿದರು.

'ಕೈ' ರಾಜಕೀಯ ಕೇಂದ್ರವಾದ ರೆಸಾರ್ಟ್

ಪ್ರಜಾವಾಣಿ ವಾರ್ತೆ

ರಾಮನಗರ: ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನ ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಸಚಿವರು, ಶಾಸಕರ ಎರಡು ದಿನದ ವಾಸ್ತವ್ಯಕ್ಕಾಗಿ ಮಂಗಳವಾರ ಬೀಡು ಬಿಟ್ಟಿದ್ದಾರೆ. ಪ್ರವಾಸಿಗರಿಂದ ತುಂಬಿರುತ್ತಿದ್ದ ರೆಸಾರ್ಟ್ ಇದೀಗ ಕಾಂಗ್ರೆಸ್ ರಾಜಕೀಯ ಕೇಂದ್ರವಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ರಾತ್ರಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಹಿನ್ನೆಲೆಯಲ್ಲಿ ಪಕ್ಷದ ಶಾಸಕರು ಮಧ್ಯಾಹ್ನದಿಂದಲೇ ರೆಸಾರ್ಟ್‌ನತ್ತ ಧಾವಿಸಿದರು. ಎರಡು ದಿನದ ವಾಸ್ತವ್ಯಕ್ಕಾಗಿ ರೆಸಾರ್ಟ್‌ನ 140 ಕೊಠಡಿಗಳನ್ನು ಕಾಯ್ದಿರಿಸಲಾಗಿತ್ತು.

ಅವಧಿಗೆ ಮುಂಚೆಯೇ ಬಂದ ಕೆಲ ಶಾಸಕರು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ ರೆಸಾರ್ಟ್ ಒಳಕ್ಕೆ ಹೋದರು. ಸಿಎಲ್‌ಪಿ ಸಭೆಗಾಗಿ ರೆಸಾರ್ಟ್ ಆವರಣಲ್ಲಿ ಜರ್ಮನ್ ಟೆಂಟ್ ನಿರ್ಮಿಸಿ, ಆಸನ ಹಾಗೂ ಮೈಕ್ ವ್ಯವಸ್ಥೆ ಮಾಡಲಾಗಿತ್ತು. ಬಗೆ ಬಗೆ ಮಾಂಸಾಹಾರ ಮತ್ತು ಸಸ್ಯಾಹಾರ ಗಮನಸೆಳೆಯಿತು.

ರೆಸಾರ್ಟ್‌ನಲ್ಲಿ ಸಿಎಲ್‌ಪಿ ಸಭೆ, ಸಚಿವರು, ಶಾಸಕರು ಹಾಗೂ ನಾಯಕರ ವಾಸ್ತವ್ಯಕ್ಕೆ ಮಾಡಿರುವ ವ್ಯವಸ್ಥೆಯನ್ನು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಮೇಲ್ವಿಚಾರಣೆ ನಡೆಸಿದರು. ರೆಸಾರ್ಟ್‌ಗೆ ಪಕ್ಷದ ಜನಪ್ರತಿನಿಧಿಗಳನ್ನು ಹೊರತುಪಡಿಸಿ ಅನಗತ್ಯವಾಗಿ ಬೇರೆಯವರು ಬಾರದಂತೆ ನಿಗಾ ವಹಿಸಲಾಗಿತ್ತು.

ರಾರಾಜಿಸಿದ ಫ್ಲೆಕ್ಸ್‌ಗಳು: ಸಿಎಲ್‌ಪಿ ಸಭೆಗೆ ಬರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ನಾಯಕರಿಗೆ ಹಾಗೂ ಶಾಸಕರಿಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ಸರ್ವೀಸ್ ರಸ್ತೆ ಹಾಗೂ ವಂಡರ್‌ಲಾ ರಸ್ತೆಯುದ್ದಕ್ಕೂ ರಾರಾಜಿಸಿದವು.

ಮಾಧ್ಯಮದವರಿಗೆ ರೆಸಾರ್ಟ್ ಒಳಕ್ಕೆ ಪ್ರವೇಶ ಇರಲಿಲ್ಲ.

ಬಿಗಿ ಪೊಲೀಸ್ ಕಟ್ಟೆಚ್ಚರ

ಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ನಾಯಕರ ಭೇಟಿ ಹಿನ್ನೆಲೆಯಲ್ಲಿ ವಂಡರ್‌ಲಾ ರೆಸಾರ್ಟ್ ರಸ್ತೆಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಶೇಷಗಿರಿಹಳ್ಳಿ ಮತ್ತು ಕಣಿಮಿಣಿಕೆ ಟೋಲ್‌ಗಳಲ್ಲೂ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ಹೆದ್ದಾರಿ ಸರ್ವೀಸ್ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ್ ಗೌಡ, ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದು ಬಂದೋಬಸ್ತ್ ಪರಿಶೀಲಿಸಿದರು.

ದ್ವಿಭಾಷಾ ಕಲಿಕೆ ಹೆಸರಲ್ಲಿ ಅನ್ಯಾಯ

ಬೆಂಗಳೂರು: ದ್ವಿಭಾಷಾ ಕಲಿಕೆ ಹೆಸರಲ್ಲಿ ಕನ್ನಡದ ವಿದ್ಯಾರ್ಥಿಗಳಿಗೆ 'ಬಿ ಶ್ರೇಣಿ' ನೀಡಿರುವುದಕ್ಕೆ ಎಐಡಿಎಸ್‌ಒ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, 'ಹಿಂದಿನ ತರಗತಿಯಿಂದ ಮುಂದಿನ ತರಗತಿಯ ಕಲಿಕೆಗೆ ವಿದ್ಯಾರ್ಥಿಗಳು ಪ್ರವೇಶಿಸುವ ಮುನ್ನ ಸೇತುಬಂಧ ಪರೀಕ್ಷೆಗಳನ್ನು ಸರ್ಕಾರ ನಡೆಸುತ್ತಿದೆ. ಈ ಪರೀಕ್ಷೆಗಳ ಮೌಲ್ಯಮಾಪನದಲ್ಲಿ ಸರ್ಕಾರವು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಅನುಸರಿಸುವ ಮಾನದಂಡವು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ' ಎಂದು ಹೇಳಿದ್ದಾರೆ.

'ದ್ವಿಭಾಷಾ ಮಾಧ್ಯಮ ಜಾರಿಯಲ್ಲಿರುವ ಸರ್ಕಾರಿ ಶಾಲೆಗಳಲ್ಲಿ, ಇಂಗ್ಲಿಷ್ ಮಾಧ್ಯಮದಲ್ಲಿ ಉತ್ತರಿಸಿದರೆ 'ಎ ಶ್ರೇಣಿ' ನೀಡಲಾಗುತ್ತಿದೆ. ಎಷ್ಟೇ ಉತ್ತಮವಾಗಿ ಉತ್ತರ ಬರೆದರೂ, ಕನ್ನಡ ಮಾಧ್ಯಮದಲ್ಲಿ ಉತ್ತರಿಸಿರುವ ವಿದ್ಯಾರ್ಥಿಗಳಿಗೆ 'ಬಿ ಶ್ರೇಣಿ' ನೀಡಲಾಗುತ್ತಿದೆ ಎಂದಿದ್ದಾರೆ.

ಗೌರವ ಡಾಕ್ಟರೇಟ್...

ಪ್ರಜಾವಾಣಿ ಚಿತ್ರ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಪ್ರೊ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಮತ್ತು ರಾಜರಾಜೇಶ್ವರಿ ಸಮೂಹ ಸಂಸ್ಥೆಗಳ ಸ್ಥಾಪಕ ಡಾ.ಎ.ಸಿ.ಷಣ್ಮುಗಂ ಅವರಿಗೆ 'ಗೌರವ ಡಾಕ್ಟರೇಟ್' (ಡಾಕ್ಟರ್ ಆಫ್ ಸೈನ್ಸ್) ಪದವಿ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ., ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಡಾ. ರಿಯಾಜ್ ಬಾಷಾ ಉಪಸ್ಥಿತರಿದ್ದರು

ನಗರದಲ್ಲಿ ಇಂದು

'ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಜಿ.ಪರಮೇಶ್ವರ, ಅತಿಥಿ: ಯು.ಟಿ. ಖಾದರ್, ಶರಣಪ್ರಕಾಶ್ ಪಾಟೀಲ, ದಿನೇಶ್ ಗುಂಡೂರಾವ್, ರಿಜ್ವಾನ್ ಅರ್ಷದ್, ಬಿ.ಸಿ.ಭಗವಾನ್, ಅತಿಥಿಗಳು: ಗುರುದತ್ತ ಹೆಗಡೆ, ಬಿ.ಎಲ್.ಸುಜಾತಾ ರಾಥೋಡ್, ಸ್ಟೀವನ್ ಕೆನೊಲಿ, ಮೆಲ್ವಿನ್ ಮೈಕೆಲ್, ಎಸ್.ಶಿವಕುಮಾರ್, ಅಧ್ಯಕ್ಷತೆ: ಐವಾನ್ ನಿಗ್ಲಿ, ಆಯೋಜನೆ: ಆಂಗ್ಲೊ ಇಂಡಿಯನ್ ಯುನಿಟಿ ಸೆಂಟರ್, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 9.30

ಪ್ರೊ.ಕೆ.ಟಿ.ಪಾಂಡುರಂಗಿ, ಗುರುರಾಜಾಚಾರ್ಯ ಪಾಂಡುರಂಗಿ ಜನ್ಮ ಶತಮಾನೋತ್ಸವ: ಉದ್ಘಾಟನೆ: ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಪ್ರೊ. ಸಚ್ಚಿದಾನಂದ ಉಡುಪ, ಅತಿಥಿ: ಸಚ್ಚಿದಾನಂದ ಮಿಶ್ರಾ, ಹರಿದಾಸ್ ಭಟ್, ಗೋಷ್ಠಿ: ಶ್ರೀನಿಧಿ ವಶಿಷ್ಠ, ವಾಮನಾಚಾರ್ಯ ಆಲೂರ್, ಕೃಷ್ಣಾಚಾರ್ಯ ಉಪಾಧ್ಯಾಯ, ಖೇಡ ವೇದವ್ಯಾಸಾಚಾರ್ಯ, ಕೃಷ್ಣಪ್ರಸಾದ್, ಎ.ವಿ.ನಾಗಸಂಪಿಗೆ, ಸತ್ಯಧ್ಯಾನಾಚಾರ್ಯ ಕಟ್ಟಿ, ಸಾನ್ನಿಧ್ಯ: ಸತ್ಯಾತ್ಮತೀರ್ಥ ಸ್ವಾಮೀಜಿ, ಸ್ಥಳ: ಪೂರ್ಣಪ್ರಜ್ಞ ಸಂಶೋಧನಾ ಮಂದಿರ, ವಿಶ್ವೇಶತೀರ್ಥ ಸ್ವಾಮೀಜಿ ಮಾರ್ಗ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಳಿಗ್ಗೆ 9.30

ಹಸಿರು ಹಬ್ಬ: **ಅತಿಥಿ:** ಉಮಾ ಮಹಾದೇವನ್, ಎಂ.ಮಹೇಶ್ವರ ರಾವ್, ಆರ್. ಸೆಲ್ವಮಣಿ, ಸೌಮ್ಯಾ ರಾಮಲಿಂಗಾರೆಡ್ಡಿ, ಆಯೋಜನೆ: ಹಸಿರು ದಳ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಉಮಾ ಮಹಾದೇವನ್

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರಂಗ ಸಂಭ್ರಮ, ಸ್ಟಾಂಪ್ ವೆಂಕಟೇಶ್ ಸ್ಮರಣಾರ್ಥ 'ಶ್ರೀಕೃಷ್ಣ ರಾಯಭಾರ' ನಾಟಕ ಪ್ರದರ್ಶನ: ಉದ್ಘಾಟನೆ: ಮಂಜುನಾಥ್, ಅಧ್ಯಕ್ಷತೆ: ಎಂ.ಜಗದೀಶ್‌ಗೌಡ, ನಾಟಕದ ಸಂಗೀತ ಮತ್ತು ನಿರ್ದೇಶನ: ಎ.ಎನ್. ಮೂರ್ತಿ, ಆಯೋಜನೆ: ರಾಜೇಶ್ವರಿ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 11.30

'ಭಗವದ್ಗೀತೆ' ನಾಟಕ ಪ್ರದರ್ಶನ:ಸಂಗೀತ ಮತ್ತು ನಿರ್ದೇಶನ: ಎ.ಎನ್.ಮೂರ್ತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 3.30

ಕೋಟೆ ಮಾರಮ್ಮ ದೇವಸ್ಥಾನದ 48ನೇ ರಜತ ಮಹೋತ್ಸವ: ರಂಗೋಲಿ ಸ್ಪರ್ಧೆ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ, ಕೋಟೆ 'ಇ' ಬೀದಿ, ಕಲಾಸಿಪಾಳ್ಯ, ಸಂಜೆ 5

ಯುವ ನಾಟಕೋತ್ಸವ, ದೇವ ನಾಗೇಶ್ ಅವರಿಗೆ ರಂಗನಮನ, 'ಸಾಕ್ಷಿಕಲ್ಲು' ನಾಟಕ ಪ್ರದರ್ಶನ: ನಿರ್ದೇಶನ: ಸಿ.ಎಂ.ತಿಮ್ಮಯ್ಯ, ಸಂಗೀತ: ಎಸ್. ತಿಮ್ಮಯ್ಯ, ಸುಗಮ ಸಂಗೀತ: ಶ್ರೀನಿವಾಸ್ ವಿ.ರಾಘವ, ಸುಬ್ಬಲಕ್ಷ್ಮಿ ಚಿನ್ನಮ್ಮ ಮತ್ತು ತಂಡ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಸಂಜೆ 5

26ನೇ ವರ್ಷದ ಪ್ರವಚನ ವಾಹಿನಿ: 'ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ' ವಿಷಯದ ಬಗ್ಗೆ ಪ್ರವಚನ: ರಾಮಚಂದ್ರಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಕನಕದಾಸರ ವಿರಚಿತ **'ಕೇಶವನಾಮ' ಪ್ರವಚನ: ಕಲ್ಯಾ ನರಸಿಂಹಮೂರ್ತಾಚಾರ್ಯ, ಆಯೋಜನೆ:** ರಾಘವೇಂದ್ರ ಸೇವಾ ಸಮಿತಿ, ಸ್ಥಳ: **ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7**

'ದ್ರೌಪತಿ ಹೇಳ್ತವ್ಳೆ' ನಾಟಕ ಪ್ರದರ್ಶನ: ಸಂಗೀತ ಮತ್ತು ನಿರ್ದೇಶನ: ಗಣೇಶ್ ಮಂದಾರ್ತಿ, ತಂಡ: ರಂಗಾಸ್ಥೆ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

MORNING STAR English School Ramachandrapuram (Rajajinagar Entrance) Requires S.S.L.C, T.C.H/ P.U.C, D.Ed Kannada Lady Teacher to handle primary classes Contact: 9242494544

BISHOP COTTON BOYS' SCHOOL
BENGALURU
REQUIRES
JUNIOR SCHOOL
MUSIC TEACHER : Should have passed music examination in Trinity College of Music, London / ABRSM / London College of Music / Experienced candidate preferred.
PHYSICAL EDUCATION TEACHER: Regular Degree in any subject with C.PEd / B.PEd with good written and spoken English
Apply to: The Principal,
BISHOP COTTON BOYS' SCHOOL,
Residency Road, Bangalore – 560 025.
E-mail: bcbs@bishopcottonboysschool.edu.in
Last date for submission of applications: Thursday, the 25th June 2026 before 3.00 p.m.
ROUNAQH

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Primary Classes & Computer Teacher for High School(ICSE). STATE & ICSE Qualification: B.A./B.Sc., B.Ed., M.A./M.Sc, M.Ed. Only English Medium Candidates need to apply.

SVN ENGLISH HIGH School, Thanisandra Main Road, Nagawara, Bangalore-77, (opposite Elements Mall), Requires Qualified NTT TEACHERS for Nursery Call: 9611807494/ 080 25446756 Mail: svnschool@gmail.com

Graphic Designers

REQUIRED GRAPHIC Designer– Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

JOB To Place your Classified Ads Contact: 9886213331

Marketing & Sales

FORTUNE MATTRESS Company requires AREA SALES MANAGER, SALES OFFICERS, DRIVER. Mattress industry experience will be preferred. Wanted Distributors for out station market. Interested can send resume to: The Managing Director, M/s. Forutune Mattress & Leather Sofas Pvt Ltd, No. 342, 6th Main KHB I Stage, Basaveshwaranagar, Bangalore- 560079. 9845596542.

HRD & Admin

WANTED HR-ADMIN Experience 5-10years Salary 30000/- Plus Incentive Call:7338084555 8296037433 9845053636 Mail glprojects7889@gmail.com Interview Time 10am to 6pm

Hospital & Medical Jobs

WANTED NURSING Staff for ICU, Pediatric Trained Nursing-Staff Night Duty-Doctor Contact: Chaitanya Hospital No-80 P&T Colony, R.T.Nagar Bangalore Ph:9900520357

JUPITER HOSPITALS Nelamangala Required Admin with Good English, Computer Knowldge. Salary:25000/- Free Accommodation. Contact: 9845024211/ 9341220446

Engg/ Production Technical

JOB AVAILABLE for MOTOR WINDER, MOTOR FITTER and ITI ELECTRICIAN positions in Kerala. Contact:- 9567948222

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Finance

URGENT LOAN AVAIL @ 5.5% P.a PERSONAL BUSINESS EDUCATION TAKEOVER ALL TYPES LOAN CAPITAL ONE FINANCE. CALL/ WHATSAPP. 7678360713

PERSONAL

Change of Name

CHANGE OF NAME
I, PURANJOY RAY S/O late Kartick Chandra Ray and Kanak Prova Ray, Presently residing at No.129, Dream Paradise Layout, Basapura Main Road, Electronics City, Bengaluru-560100, do hereby declare that I have changed my name from PURANJOY ROY (Which is mentioned in West Bengal Electoral Roll-2002) to PURANJOY RAY vide affidavit dated 21-04-2026 sworn before the 1st Class Judicial Magistrate at Alipore, West Bengal.

CHANGE OF NAME
I, PREMA KUMARI NARAYANAPPA W/o Srinivas Shamanna, residing at No.722/1, 5th Cross, 1st Main, OMBR Layout, Dodda Banaswadi, Bangalore-560043, have changed my name to NARAYANAPPA PREMA SRINIVAS vide affidavit dated 16-06-2026 before notary B Seshagiri, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

₹3 ಕೋಟಿ ಮೌಲ್ಯದ ಆಭರಣ ದೋಚಿದ್ದವರ ಸೆರೆ

ಮಲ್ಲೇಶ್ವರ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣ ಖರೀದಿಸುವುದಾಗಿ ನಂಬಿಸಿ, ಜ್ಯುವೆಲರಿ ಮಳಿಗೆಯ ಸಿಬ್ಬಂದಿಯಿಂದ ₹3 ಕೋಟಿ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಇಬ್ಬರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಪರೇಶ್ ಸೋನಿ (49) ಹಾಗೂ ಪ್ರವೀಣ್ ಅಲಿಯಾಸ್ 'ಪಪ್ಪು'(44) ಬಂಧಿತರು.

ಶ್ಯಾಮ್ ಹಾಗೂ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಬಂಧಿತರಿಂದ ₹1.64 ಕೋಟಿ ಮೌಲ್ಯದ 1 ಕೆ.ಜಿ. ಚಿನ್ನದ ಗಟ್ಟಿ ಹಾಗೂ ಆಭರಣ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಚಿಕ್ಕಪೇಟೆಯ ಮಹೇಂದ್ರ ಕುಮಾರ್ ಡಿ. ಜೈನ್ ಮೇ 16ರಂದು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಮಹಾರಾಷ್ಟ್ರದಲ್ಲೂ ಆಭರಣ ಖರೀದಿಸುವುದಾಗಿ ನಂಬಿಸಿ ಆರೋಪಿಗಳು ವಂಚಿಸಿದ್ದರು.

ಮುಖ್ಯಾಂಶಗಳು

- ಮಲ್ಲೇಶ್ವರದ ಮಾಹಿ ಕಚೇರಿಯಲ್ಲಿ ಕೃತ್ಯ
- ಫೋಟೊ ತೆಗೆಯುವ ನೆಪದಲ್ಲಿ ಆಭರಣ ಹೊತ್ತೊಯ್ದರು

ಪರೇಶ್ ಸೋನಿ

ಪ್ರವೀಣ್

ಮಹಾರಾಷ್ಟ್ರದ 15 ಪೊಲೀಸ್ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಆರೋಪಿಗಳು ವಂಚಿಸಿದ್ದರು. ಮಹಾರಾಷ್ಟ್ರ ಪೊಲೀಸರಿಗೂ ಮಾಹಿತಿ ನೀಡಿದ್ದು, ಅಲ್ಲಿನ ಪೊಲೀಸರು ಬಾಡಿ ವಾರಂಟ್ ಮೇಲೆ ಆರೋಪಿಗಳನ್ನು ವಶಕ್ಕೆ ಪಡೆದುಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ನಗರ್ತಪೇಟೆಯ 'ಮೆಹ್ತಾ ಗೋಲ್ಡ್ ಮಳಿಗೆ'ಯ ಮಾರಾಟ ವಿಭಾಗದ ವ್ಯವಸ್ಥಾಪಕರಾಗಿ ಮಹೇಂದ್ರ ಕುಮಾರ್ ಜೈನ್ ಹಾಗೂ ಸಹಾಯಕ ವ್ಯವಸ್ಥಾಪಕರಾಗಿ ಗೌತಮ್ ಕೆಲಸ ಮಾಡುತ್ತಿದ್ದರು. ಮಲ್ಲೇಶ್ವರದಲ್ಲಿ ಮಾಹಿ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಆರೋಪಿ ಪರೇಶ್ ಸೋನಿ ಮಳಿಗೆ ತೆರೆದಿದ್ದರು. ಮೇ 16ರಂದು ಗೌತಮ್‌ಗೆ ಕರೆ ಮಾಡಿ 'ತಮ್ಮ ಸಂಸ್ಥೆಗೆ ಭಾರಿ ಪ್ರಮಾಣದ ಆಭರಣಗಳು ಬೇಕಾಗಿವೆ ಎಂಬುದಾಗಿ ಹೇಳಿದ್ದರು. ಹೀಗಾಗಿ, ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಇರುವ ಕಚೇರಿಗೇ ಚಿನ್ನಾಭರಣಗಳ ಮಾದರಿಯನ್ನು ತಂದು ತೋರಿಸುವಂತೆ ಕೋರಿದ್ದರು. ಮಹೇಂದ್ರ ಕುಮಾರ್ ಜೈನ್ ಮತ್ತು ಸಿಬ್ಬಂದಿ ಪ್ರಕಾಶ್ ಮಲ್ಲೇಶ್ವರದಲ್ಲಿರುವ ಮಾಹಿ ಕಚೇರಿಗೆ ಆಭರಣಗಳ ಜತೆಗೆ ಬಂದಿದ್ದರು ಎಂದು ಪೊಲೀಸರು ಹೇಳಿದರು.

ಫೋಟೊ ತೆಗೆಯುವ ನೆಪ: 'ಆರೋಪಿಗಳಾದ ಪರೇಶ್ ಸೋನಿ, ಶ್ಯಾಮ್ ಹಾಗೂ ಚಂದ್ರಶೇಖರ್ ಅವರು ಚಿನ್ನಾಭರಣಗಳ ಮಾದರಿಯನ್ನು ನೋಡಿ, ಆಭರಣಗಳ ಫೋಟೊ ತೆಗೆಯುವ ನೆಪದಲ್ಲಿ ಪಕ್ಕದ ಕೋಣೆಗೆ ಆಭರಣಗಳನ್ನು ಕೊಂಡೊಯ್ದಿದ್ದರು. ಸಮಯ ಕಳೆದರೂ ಆರೋಪಿಗಳು ಕೋಣೆಯಿಂದ ಹೊರಕ್ಕೆ ಬಂದಿರಲಿಲ್ಲ. ಕೋಣೆಯ ಒಳಗೆ ಹೋಗಿ ಪರಿಶೀಲಿಸಿದಾಗ, ಆಭರಣ ಸಹಿತ ಆರೋಪಿಗಳು ನಾಪತ್ತೆ ಆಗಿರುವುದು ಪತ್ತೆಯಾಗಿತ್ತು. ಬಳಿಕ ಠಾಣೆಗೆ ಬಂದು ಮಹೇಂದ್ರ ಕುಮಾರ್ ಡಿ. ಜೈನ್ ದೂರು ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ಮುಂಬೈನ ಜವಾರಿ ಬಜಾರ್ ಸೇರಿದಂತೆ ಹಲವು ಕಡೆ ಆಭರಣಗಳನ್ನು ಆರೋಪಿಗಳು ಮಾರಾಟ ಮಾಡಿದ್ದರು. ಸದ್ಯ ಇದುವರೆಗೂ ನಡೆದ ತನಿಖೆಯಲ್ಲಿ ಒಂದು ಕೆ.ಜಿ ಚಿನ್ನದ ಗಟ್ಟಿ, ಆಭರಣ ಜಪ್ತಿ ಮಾಡಲಾಗಿದೆ. ಉಳಿದ ಆರೋಪಿಗಳ ಸುಳಿವು ಸಿಕ್ಕಿದ್ದು, ಶೀಘ್ರದಲ್ಲಿಯೇ ಬಂಧಿಸುತ್ತೇವೆ' ಎಂದು ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಆಭರಣ

ಅಪರಾಧ ಸುದ್ದಿ

₹37 ಲಕ್ಷದ 60 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಮನೆಯ ಎದುರು, ರಸ್ತೆಯ ಬದಿ ಹಾಗೂ 'ನಮ್ಮ ಮೆಟ್ರೊ' ನಿಲ್ದಾಣದ ಸಮೀಪ ನಿಲುಗಡೆ ಮಾಡುವ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಮೂವರನ್ನು ಜಯನಗರ ಹಾಗೂ ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಆರ್.ಕೆ. ಹೆಗಡೆ ನಗರದ 10ನೇ ಕ್ರಾಸ್‌ನ ನಿವಾಸಿ ಸೈಯದ್ ಉಮರ್ ಅಲಿಯಾಸ್ ಅಂಗುಟಾ (20) ಹಾಗೂ ಮೊಹಮದ್ ಉಮರ್ ಸಾದಿಕ್ ಅಲಿಯಾಸ್ ಮೌಲಾಲಿ (21) ಅವರನ್ನು ಬಂಧಿಸಿದರು.

ಬಂಧಿತರಿಂದ ₹37 ಲಕ್ಷದ 60 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಧ್ರುವದೇಶ್ ಹೊಂಡಾ ಶೋರೂಂ ವ್ಯವಸ್ಥಾಪಕ ಎಂ.ಅವಿನಾಶ್ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮೇ 19ರಂದು ಶೋರೂಂ ಬಳಿಗೆ ಬಂದಿದ್ದ ಸೈಯದ್ ಉಮರ್, ಡಿಯೊ ಸ್ಕೂಟಿಯನ್ನು ಟ್ರಯಲ್ ನೋಡುವುದಾಗಿ ಕೀ ಪಡೆದುಕೊಂಡಿದ್ದರು. ಅದಾದ ಮೇಲೆ ಸ್ಕೂಟಿಯನ್ನು ವಾಪಸ್ ತಂದು ಕೊಡದೇ ಪರಾರಿಯಾಗಿದ್ದರು. ಬಳಿಕ ಮೊಹಮದ್ ಉಮರ್ ಸಾದಿಕ್ ಜತೆಗೆ ಸೇರಿಕೊಂಡು ದ್ವಿಚಕ್ರ ವಾಹನವನ್ನು ಮಾರಾಟ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಕಳ್ಳತನ ಮಾಡಿದ್ದ ದ್ವಿಚಕ್ರ ವಾಹನಗಳ ನಂಬರ್ ಪ್ಲೇಟ್ ಬದಲಾಯಿಸಿ, ನಕಲಿ ನಂಬರ್ ಪ್ಲೇಟ್ ಅಳವಡಿಸಿ ಆರೋಪಿಗಳು ಮಾರಾಟ ಮಾಡುತ್ತಿದ್ದರು. ಕದ್ದ ವಾಹನಗಳನ್ನು ಮಾರಾಟ ಮಾಡಲು ಬೃಂದಾವನ ಪಾರ್ಕ್‌ನ ಪಕ್ಕದ ಖಾಲಿ ಜಾಗ, ಚೊಕ್ಕನಹಳ್ಳಿ, ಅಗ್ರಹಾರ ನೀಲಗಿರಿ ತೋಪಿನಲ್ಲಿ ನಿಲುಗಡೆ ಮಾಡಿದ್ದರು. ಅಲ್ಲಿಂದ ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಜಯನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಒಬ್ಬ ಆರೋಪಿಯನ್ನು ಬಂಧಿಸಿ ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಇ–ಸಿಗರೇಟ್ ಹಾಗೂ ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

₹8 ಕೋಟಿಯ ಇ–ಸಿಗರೇಟ್, ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ, ಇಂದಿರಾನಗರ, ಜೀವನ್ ಬಿಮಾನಗರ, ಸುದ್ದಗುಂಟೆ ಪಾಳ್ಯ, ಹೆಣ್ಣೂರು, ಬಾಣಸವಾಡಿ, ಹಲಸೂರು, ಕೆ.ಜಿ. ಹಳ್ಳಿ ಠಾಣೆಯ ಪೊಲೀಸರು ಹಾಗೂ ಸಿಸಿಬಿಯ ಮಾದಕ ದ್ರವ್ಯ ನಿಗ್ರಹದಳ ವಿಭಾಗದ ಸಿಬ್ಬಂದಿ ಯಶಸ್ವಿ ಕಾರ್ಯಾಚರಣೆ ನಡೆಸಿ, ವಿವಿಧ ಮಾದರಿಯ ಮಾದಕ ವಸ್ತುಗಳು ಹಾಗೂ ನಿಷೇಧಿತ ಇ–ಸಿಗರೇಟ್ ಮಾರಾಟ ಮಾಡುತ್ತಿದ್ದ 23 ಮಂದಿಯನ್ನು ಬಂಧಿಸಿದ್ದಾರೆ.

ಬಂಧಿತರಿಂದ 5 ಕೆ.ಜಿ. 360 ಗ್ರಾಂ ಹೈಡ್ರೊಗಾಂಜಾ, 143 ಕೊಕೇನ್, 10 ಕೆ.ಜಿ. 998 ಗ್ರಾಂ ಗಾಂಜಾ, 237 ಗ್ರಾಂ ಎಂಡಿಎಂಎ, 107 ಗ್ರಾಂ ಮೆಥಾಂಫೆಟಮೈನ್, 180 ಬಾಕ್ಸ್ ಇ–ಸಿಗರೇಟ್ ಆಯಿಲ್ ಹಾಗೂ ಇ–ಸಿಗರೇಟ್, 452 ಬಾಕ್ಸ್ ವಿದೇಶಿ ಸಿಗರೇಟ್, 1,206 ಹುಕ್ಕಾ ಸಿಗರೇಟ್, 120 ಸೆಟ್ ಹುಕ್ಕಾ ಸಿಗರೇಟ್, 100 ಇ–ಸಿಗರೇಟ್ ರೀಫಿಲ್, 6 ಹುಕ್ಕಾ ಸೆಟ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹8 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಹಾಗೂ ಸುಳಿವು ಆಧರಿಸಿ 10 ದಿನದಲ್ಲಿ ಎಂಟು ಸ್ಥಳದಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆ ವೇಳೆ ಹೊರ ರಾಜ್ಯದ ಆರು ಮಂದಿ, ಸ್ಥಳೀಯರಾದ 15 ಜನರು ಸೇರಿ 23 ಮಂದಿಯನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಿದೇಶ ಹಾಗೂ ಹೊರ ರಾಜ್ಯದ ಪೆಡ್ಲರ್‌ಗಳಿಂದಲೂ ಆರೋಪಿಗಳು ಡ್ರಗ್ಸ್ ಖರೀದಿಸಿ ನಗರಕ್ಕೆ ತಂದು ಪೇಯಿಂಗ್ ಗೆಸ್ಟ್ ಹಾಸ್ಟೆಲ್‌ನಲ್ಲಿ ನೆಲಸಿದ ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿರುವುದು ತನಿಖೆ ವೇಳೆ ಕಂಡುಬಂದಿದೆ ಎಂದು ಹೇಳಿದರು.

ಇ–ಸಿಗರೇಟ್ ಆರೋಗ್ಯಕ್ಕೆ ಮಾರಕ ಎಂದು ಕೇಂದ್ರ ಸರ್ಕಾರವು ಹಿಂದೆಯೇ ನಿಷೇಧ ಮಾಡಿತ್ತು. ಆದರೂ, ಆರೋಪಿಗಳು ಬೇರೆ ಬೇರೆ ಪ್ರದೇಶಗಳಿಂದ ಇ–ಸಿಗರೇಟ್, ಅದರ ಲಿಕ್ವಿಡ್, ಪಾಡ್ ಹಾಗೂ ಇತರೆ ಬಿಡಿಭಾಗಗಳನ್ನು ತಂದು ಮಾರಾಟ ಮಾಡುತ್ತಿರುವುದು ನಗರದಲ್ಲಿ ಕಂಡುಬರುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೊಲೆ ಬಳಿಕ ವಕೀಲರಿಗೆ ಕರೆ ಮಾಡಿದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸುತ್ತಿದ್ದ ಯುವತಿಯ ಕತ್ತು ಹಿಸುಕಿ ಕೊಲೆ ಮಾಡಿದ ಬಳಿಕ ವಕೀಲರೊಬ್ಬರಿಗೆ ಕೃತ್ಯದ ಮಾಹಿತಿ ನೀಡಿ ಪರಾರಿಯಾಗಿದ್ದ ಆರೋಪಿಯನ್ನು ಶೇಷಾದ್ರಿಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೊಲೆಯಾದ ಅನುಷಾ

ಶರತ್

ಹಾಸನ ಜಿಲ್ಲೆ ಸಕಲೇಶಪುರದ ಎನ್‌.ಡಿ.ಅನುಷಾ (20) ಕೊಲೆಯಾದ ಯುವತಿ. ಶರತ್ ಬಂಧಿತ ಯುವಕ.

ಮನೆ ಮಾಲೀಕ ರಮೇಶ್ ಬಾಬು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಮಲ್ಲೇಶ್ವರದ 7ನೇ ಕ್ರಾಸ್‌ನಲ್ಲಿರುವ ಮನೆಯಲ್ಲಿ ಶರತ್ ಹಾಗೂ ಮೃತ ಅನುಷಾ ನೆಲಸಿದ್ದರು. ಜೂನ್ 14ರಂದು ಕೊಲೆ ಮಾಡಿ ಬಳಿಕ ವಕೀಲರೊಬ್ಬರಿಗೆ ಆರೋಪಿ ಶರತ್ ಕರೆ ಮಾಡಿ ತಲೆಮರೆಸಿಕೊಂಡಿದ್ದರು. ವಕೀಲರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದು ಪೊಲೀಸರು ಪರಿಶೀಲಿಸಿದಾಗ, ಮಲಗಿರುವ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ಕತ್ತು ಹಿಸುಕಿ ಹತ್ಯೆ ಮಾಡಿರುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢಪಟ್ಟಿತ್ತು ಎಂದು ಪೊಲೀಸರು ಹೇಳಿದರು.

'ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಬಂಧಿತ ಆರೋಪಿಯ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ರೌಡಿ ಪಟ್ಟಿಯಿಂದ ಮುಕ್ತಿಗೆ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ಮಂದಿಯನ್ನು ರೌಡಿ ಪಟ್ಟಿಯಿಂದ ಕೈಬಿಡಲಾಗಿದ್ದು, ಈ ಸಂಬಂಧ ಕಾನೂನು ತಜ್ಞರ ಜೊತೆಗೆ ಚರ್ಚಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ರಾಜ್ಯ ಪೊಲೀಸ್ ಮಹಾನಿರ್ದೇಶಕರ ಜತೆಗೂ ಚರ್ಚಿಸಲಾಗುವುದು' ಎಂದರು.

ಹೈಕೋರ್ಟ್ ಮಾರ್ಗಸೂಚಿಯನ್ನು ರಾಜ್ಯ ಪೊಲೀಸರು ಉಲ್ಲಂಘಿಸಿದ ಕಾರಣಕ್ಕೆ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಸುನಿಲ್ ಕುಮಾರ್ ಅಲಿಯಾಸ್ ಸೈಲೆಂಟ್ ಸುನಿಲ್, ರೋಹಿತ್ ಅಲಿಯಾಸ್ ಒಂಟೆ ರೋಹಿತ್ ಸೇರಿದಂತೆ 66 ಮಂದಿಗೆ ರೌಡಿಶೀಟ್‌ನಿಂದ ಮುಕ್ತಿ ದೊರೆತಿದೆ.

ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪೊಲೀಸರು ತೆರೆದಿರುವ ರೌಡಿಪಟ್ಟಿಯಿಂದ ತಮ್ಮ ಹೆಸರು ತೆಗೆಯುವಂತೆ ಸೈಲೆಂಟ್ ಸುನಿಲ್ ಸೇರಿ 100ಕ್ಕೂ ಹೆಚ್ಚು ರೌಡಿಗಳು ರಾಜ್ಯ ಪೊಲೀಸ್ ದೂರು ಪ್ರಾಧಿಕಾರಕ್ಕೆ ದೂರು(ಮನವಿ) ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಪ್ರಾಧಿಕಾರವು ಈ ವರ್ಷದ ಮೇ ಅಂತ್ಯಕ್ಕೆ 28 ರೌಡಿಗಳ ಹೆಸರನ್ನು ರೌಡಿಪಟ್ಟಿಯಿಂದ ಕೈಬಿಟ್ಟಿದೆ.

ಮೇ 19ರಂದು ನಡೆದ ವಿಚಾರಣೆಯಲ್ಲಿ ಸೈಲೆಂಟ್ ಸುನಿಲ್ ಹೆಸರನ್ನು ಅಮೃತಹಳ್ಳಿ ಠಾಣೆ ಪೊಲೀಸರು ರೌಡಿಪಟ್ಟಿಯಿಂದ ತೆಗೆದಿದ್ದಾರೆ. ಮೇ 25ರಂದು ಸುನಿಲ್ ಸಹಚರ ಒಂಟೆ ರೋಹಿತ್ ಹಾಗೂ ಕೆಲವು ರೌಡಿಗಳ ಹೆಸರು ತೆಗೆಯಲಾಗಿದೆ. ಇದೇ ರೀತಿ 2025ರಲ್ಲಿ 38 ರೌಡಿಗಳನ್ನು ಪಟ್ಟಿಯಿಂದ ಹೊರಗಿಡಲಾಗಿದೆ.

'ನಗರದ ಏಳು ಮಂದಿಯ ಹೆಸರನ್ನು ಯಾವ ಕಾರಣಕ್ಕೆ ಕೈಬಿಡಲಾಗಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಪ್ರಕ್ರಿಯೆ ವೇಳೆ ಪೊಲೀಸ್ ಇಲಾಖೆಯಿಂದ ಲೋಪವಾಗಿದೆಯೇ ಎಂಬುದುರ ಕುರಿತೂ ತನಿಖೆ ನಡೆಸಲಾಗುವುದು' ಎಂದು ಪ್ರತಿಕ್ರಿಯಿಸಿದರು.

ಮೇಲ್ಮನವಿ ಸಲ್ಲಿಕೆ: 'ರೌಡಿ ಪಟ್ಟಿಯಿಂದ ಕೈಬಿಟ್ಟಿರುವ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು. ನಗರದಲ್ಲಿ ರೌಡಿ ಚಟುವಟಿಕೆ ನಿಯಂತ್ರಣದಲ್ಲಿ ಇದೆ. ರೌಡಿಗಳು ಬಾಲ ಬಿಚ್ಚದಂತೆ ನಿಗಾ ಇಟ್ಟಿದ್ದೇವೆ. ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿರುವ ರೌಡಿಗಳ ಮೇಲೆ ಕಣ್ಣಿಡಲಾಗಿದೆ' ಎಂದು ಹೇಳಿದರು.

ಪ್ರಕ್ರಿಯೆ ಸ್ಥಗಿತಕ್ಕೆ ಗೃಹ ಸಚಿವರ ಸೂಚನೆ

'66 ಮಂದಿಯನ್ನು ರೌಡಿಪಟ್ಟಿಯಿಂದ ಕೈಬಿಡುವ ನಿರ್ಧಾರ ಸರಿಯಲ್ಲ. ಆ ಪ್ರಕ್ರಿಯೆಯನ್ನು ನಿಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. 66 ರೌಡಿಗಳ ಪೈಕಿ 8 ಮಂದಿ ಬಿಜೆಪಿ ಬೆಂಬಲಿತರು ಇದ್ದಾರೆ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

ಆರ್‌ಟಿಒ ಕಚೇರಿಗಳಿಗೆ ಬಾಂಬ್ ಬೆದರಿಕೆ

ಬೆಂಗಳೂರು: ನಗರದ ನಾಲ್ಕು ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಮಂಗಳವಾರ ಇ–ಮೇಲ್ ಮೂಲಕ ಬಾಂಬ್ ಬೆದರಿಕೆಯ ಸಂದೇಶಗಳು ಬಂದಿದ್ದು, ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಕಸ್ತೂರಿನಗರ, ಜ್ಞಾನಭಾರತಿ, ತಲಘಟ್ಟಪುರ, ಎಚ್‌.ಎಸ್‌.ಆರ್ ಲೇಔಟ್‌ನ ಆರ್‌ಟಿಒ ಕಚೇರಿಗಳಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶಗಳು ಬಂದಿದ್ದವು. ಮಧ್ಯಾಹ್ನ 1.15ರ ಸುಮಾರಿಗೆ ಬಾಂಬ್ ಸ್ಫೋಟವಾಗಲಿದೆ ಎಂದು ಉಲ್ಲೇಖಿಸಲಾಗಿತ್ತು.

ನಿಷೇಧಿತ ಸಂಘಟನೆಯ ಹೆಸರಿನಲ್ಲಿ ಇ–ಮೇಲ್ ರವಾನೆ ಮಾಡಲಾಗಿದೆ. ಆತಂಕ ಸೃಷ್ಟಿಸುವ ಉದ್ದೇಶದಿಂದ ಇ–ಮೇಲ್ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರ್‌ಟಿಒ ಸಿಬ್ಬಂದಿ ನೀಡಿದ ಮಾಹಿತಿ ಮೇರೆಗೆ ಕಚೇರಿಗೆ ಬಾಂಬ್ ನಿಷ್ಕ್ರಿಯ ದಳ, ಬಾಂಬ್ ಪತ್ತೆ ದಳ ಹಾಗೂ ಶ್ವಾನದಳದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇ–ಮೇಲ್ ವಿವರ ಪಡೆದುಕೊಳ್ಳಲಾಗಿದೆ. ಆಯಾ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

Fashion Partner: TRENDS
Mobility Partner: Akshaya Motors
Banking Partner: ಕೆನರಾ ಬ್ಯಾಂಕ್ Canara Bank
Wardrobe Partner: MALLESHWARAM Sudarshan Silks
Mobile Partner: HUMAN MOBILE DEVICES HMD
Taste Partner: Sunpure
EV Partner: VIDA Powered by Hero
Travel Partner: ಅಡಿಗಾಸ್ ಯಾತ್ರಾ
Knowledge Partners: GM UNIVERSITY DAVANAGERE, INSIGHTSIAS, GITAM
Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್, ಒಡ್‌ಕರ್, MSIL ಚಿಟ್ಸ್ Chits, The Janatha Co-operative Bank Ltd., Malleswaram, Bangalore, KAYAM TABLET, Bindu, NBCC A Navratna CPSE
Audit Partner: EY
Television Partner: Z ಕನ್ನಡ

ರಸ್ತೆ ನಿರ್ಮಾಣ ರಾಕೆಟ್ ಸೈನ್ಸಾ?: ಕೃಷ್ಣ ಬೈರೇಗೌಡ

‘ಗುಂಡಿ ಬೀಳದಂತೆ ರಸ್ತೆ ನಿರ್ಮಿಸುವುದು ಸಾಧ್ಯವಿಲ್ಲವೇ’ ಸಚಿವರ ಪ್ರಶ್ನೆಗೆ ಅಧಿಕಾರಿಗಳು ನಿರುತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುಂಡಿ ಬೀಳದಂತೆ ರಸ್ತೆ ನಿರ್ಮಿಸುವುದು ಸಾಧ್ಯವಿಲ್ಲವೇ? ಮಳೆ ಬರೋದು ನಮಗೆ ಗೊತ್ತಿಲ್ಲವೇ.. ಬೇರೆ ರಾಜ್ಯಗಳಲ್ಲೂ ಮಳೆ ಬರುತ್ತೆ. ಅಲ್ಲಿಲ್ಲದ ಗುಂಡಿ ಇಲ್ಲೇಕೆ? ಗುಂಡಿ ಆಗುವಂತೆ ರಸ್ತೆ ನಿರ್ಮಿಸುವುದು, ನಂತರ ವರ್ಷಪೂರ್ತಿ ಅದನ್ನು ಮುಚ್ಚುವುದೇ ದೊಡ್ಡ ಉದ್ಯೋಗ... ರಸ್ತೆ ನಿರ್ಮಾಣ ರಾಕೆಟ್ ಸೈನ್ಸಾ...’

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಕೇಳಿದ ಪ್ರಶ್ನೆಗಳಿವು. ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ ಮಂಗಳವಾರ ಮೊದಲ ಬಾರಿಗೆ ನಡೆದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಐದು ನಗರ ಪಾಲಿಕೆ ಅಧಿಕಾರಿಗಳ ಸಭೆಯಲ್ಲಿ ಅವರ ನೇರ ಪ್ರಶ್ನೆಗಳಿಗೆ ಅಧಿಕಾರಿಗಳು ನಿರುತ್ತರರಾದರು.

‘ನಾನು ನಾಲ್ಕಾರು ರಾಜ್ಯಗಳಿಗೆ ಹೋಗಿದ್ದೇನೆ. ನೀವು ಹಲವು ಕಡೆ ಸಂಚಾರ ಮಾಡಿದ್ದೀರಿ. ಅಕ್ಕಪಕ್ಕದ ರಾಜ್ಯಗಳಲ್ಲೂ ಇದೇ ರೀತಿ ರಸ್ತೆ ಗುಂಡಿ ಆಗುತ್ತದೆಯೇ? ಅವರ ಅಂದಾಜು ವೆಚ್ಚ ಬೇರೆ, ನಿಮ್ಮ ಅಂದಾಜು ಬೇರೇನಾ? ಇಲ್ಲ ಅಂದಮೇಲೆ, ರಸ್ತೆ ಗುಂಡಿಗಳು ಏಕೆ ಉದ್ಭವವಾಗುತ್ತವೆ. ನಮ್ಮ ಎಂಜಿನಿಯರ್‌ಗಳಿಗೆ ಗುಂಡಿ ಬೀಳದಂತೆ ಗುಣಮಟ್ಟದ ರಸ್ತೆ ನಿರ್ಮಿಸಲು ಇರುವ ಸಮಸ್ಯೆಯಾದರೂ ಏನು’ ಎಂದು ಸಚಿವರು ಪ್ರಶ್ನಿಸಿದರು.

‘ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ. ವ್ಯವಸ್ಥಿತವಾಗಿ ಹಾಗೂ ಗುಣಮಟ್ಟದೊಂದಿಗೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳನ್ನು ತಡೆಯಬೇಕು. ಕಾಮಗಾರಿಗಳ ಗುಣಮಟ್ಟವನ್ನು ಮತ್ತಷ್ಟು ಸುಧಾರಿಸಲು ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳು, ಎಂಜಿನಿಯರ್‌ಗಳಿಗೆ ತಾಕೀತು ಮಾಡಿದರು.

ಆದ್ಯತೆ: ‘ಬೆಂಗಳೂರು ಸವಾಲುಗಳಿಂದ ಕೂಡಿರುವ ನಗರ. ರಾಜ್ಯ, ದೇಶಕ್ಕೆ ಅಮೂಲ್ಯ ಆಸ್ತಿ. ವಿಶ್ವದ ಅನೇಕ ಭಾಗಗಳ ಹಲವು ಸಂಸ್ಥೆಗಳು ಇಲ್ಲಿ ಉತ್ಪಾದನೆ ಮಾಡಿ, ವಿಶ್ವದ ಮೂಲೆಮೂಲೆಗೆ ರಫ್ತು ಮಾಡುತ್ತಿವೆ. ವಿಶ್ವಕ್ಕೇ ನಗರ ಆಧಾರಸ್ತಂಭ. ಆದಾಯ, ರಫ್ತು, ವಿನಿಮಯ... ಇದೆಲ್ಲಕ್ಕಿಂತ ಮುಖ್ಯ, ಇಲ್ಲಿ ನೆಲಸಿರುವ ಕೋಟ್ಯಂತರ ಜನರ ಜೀವನಮಟ್ಟ ಸುಧಾರಣೆ ಆಗಬೇಕು’ ಎಂದು ಕೃಷ್ಣ ಬೈರೇಗೌಡ ಸಭೆ ಬಳಿಕ ಮಾಧ್ಯಮದವರಿಗೆ ಮಾಹಿತಿ ನೀಡಿದರು.

‘ಸಮಸ್ಯೆಗಳನ್ನು ಪರಿಹರಿಸಲು ಐದು ನಗರ ಪಾಲಿಕೆಗಳಿವೆ. 15 ಐಎಎಸ್ ಅಧಿಕಾರಿಗಳಿದ್ದಾರೆ. ಸಿಬ್ಬಂದಿ ಕೊರತೆ ಇರಬಹುದು. ಆದರೆ, ಇರುವ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸಿದರೆ ಕೆಲವು ಸಮಸ್ಯೆಗಳನ್ನಾದರೂ ನಿವಾರಿಸಬಹುದು. ಅದನ್ನು ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಲಾಗಿದೆ’ ಎಂದರು.

‘39 ಸಾವಿರ ಕೋಟಿ ವೆಚ್ಚದ ಕಸದ ಟೆಂಡರ್ ಬಗ್ಗೆ ಉನ್ನತ ಮಟ್ಟದ ಸಮಿತಿ ತನಿಖೆ ನಡೆಸುತ್ತಿದೆ. ವಿರೋಧ ಪಕ್ಷಗಳು ಆ ಸಮಿತಿಗೆ ಮಾಹಿತಿಗಳನ್ನು ನೀಡಬಹುದು. ಉನ್ನತ ಮಟ್ಟದ ಸಮಿತಿ ವರದಿ ನೀಡಿದ ನಂತರ ಅದರಂತೆ ಮುಂದುವರಿಯುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಲ್ಲೇ ಶಾಸಕ ಆಗಿರುವುದರಿಂದ ಎಲ್ಲ ಕೆಲಸ ಗೊತ್ತೇ ಇರುತ್ತದೆ. ಕೆಲವು ನಿತ್ಯದ ಕಾರ್ಯಗಳನ್ನು ಅರ್ಥೈಸಿಕೊಳ್ಳಬೇಕಿದೆ. ಆಡಳಿತಯಂತ್ರವನ್ನು ಸುಧಾರಿಸಬೇಕಿದೆ
ಕೃಷ್ಣ ಬೈರೇಗೌಡ
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ

‘ಕಸ: ವ್ಯವಸ್ಥೆಯಲ್ಲೇ ಸಮಸ್ಯೆ ಇದೆ’

‘ನಗರದಲ್ಲಿ ಕಸ ಸಂಗ್ರಹ ವ್ಯವಸ್ಥೆಯಲ್ಲೇ ಸಮಸ್ಯೆ ಇದೆ. ನಾಗರಿಕರು, ಅಧಿಕಾರಿಗಳು, ಸಿಬ್ಬಂದಿ ಎಲ್ಲರಿಂದಲೂ ಸಮಸ್ಯೆ ಆಗುತ್ತಿದೆ. ಇದೆಲ್ಲವನ್ನೂ ಪರಿಣಾಮಕಾರಿಯಾಗಿ ಪರಿಹರಿಸಬೇಕು’ ಎಂದು ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

‘ನಾಗರಿಕರು ಮನೆ ಬಳಿ ಬಂದಾಗ ಕಸ ಹಾಕುವುದಿಲ್ಲ, ರಸ್ತೆಯಲ್ಲಿ ಬಿಸಾಡಿ ಹೋಗುತ್ತಾರೆ. ಕೆಲ ಸಿಬ್ಬಂದಿ ಮನೆಗಳಿಂದ ಸಂಗ್ರಹಿಸಿದ ಕಸವನ್ನು ರಸ್ತೆಯಲ್ಲಿ ಹಾಕುತ್ತಿದ್ದಾರೆ. ಕಸ ಸಂಗ್ರಹ, ವಿಲೇವಾರಿ ವ್ಯವಸ್ಥೆಯಲ್ಲೇ ಸಮಸ್ಯೆ ಇದ್ದು, ಇದನ್ನು ಪರಿಹರಿಸಬೇಕಿದೆ. ಜನರು ಕೂಡ ತಮ್ಮ ಜವಾಬ್ದಾರಿಯನ್ನು ಅರಿತು ಕಸವನ್ನು ವಿಂಗಡಿಸಿ, ಮನೆ ಮುಂದೆ ಬರುವ ವಾಹನಗಳಿಗೆ ನೀಡಬೇಕು. ಮನೆಯ ಬಳಿ ಕಸ ಸಂಗ್ರಹಿಸುವವರು ಬಾರದಿದ್ದರೆ ಕೂಡಲೇ ದೂರು ನೀಡಬೇಕು. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು. ಬೇರೆಯವರ ಮೇಲೆ ಹೊಣೆ ಹೊರಿಸಬಾರದು. ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ’ ಎಂದು ಹೇಳಿದರು.

ಕೃಷ್ಣ ಬೈರೇಗೌಡ ಅವರು ಜಿಬಿಎ– ನಗರ ಪಾಲಿಕೆಗಳ ಅಧಿಕಾರಿಗಳ ಸಭೆಯನ್ನು ಮಂಗಳವಾರ ನಡೆಸಿದರು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಜರಿದ್ದರು

‘ವ್ಯವಸ್ಥೆ ಹಿಡಿತಕ್ಕೆ ಬಾರದೆ ಹೋದರೆ ಕಷ್ಟ..’

ಬೆಂಗಳೂರು: ‘ವ್ಯವಸ್ಥೆ ಹಿಡಿತಕ್ಕೆ ಬಾರದೆ ಹೋದರೆ ಫಲಿತಾಂಶ ನೀಡಲು ಕಷ್ಟವಾಗುತ್ತದೆ. ಒಂದು ಜವಾಬ್ದಾರಿ ವಹಿಸಿಕೊಂಡ ಮೇಲೆ ಅದರಿಂದ ಫಲಿತಾಂಶ ಕೊಡಬೇಕು. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ಉತ್ತರ ದಾಯಿತ್ವವನ್ನು ನಾನೇ ಹೊರಬೇಕಾಗುತ್ತದೆ. ಎಲ್ಲರೂ ನನ್ನನ್ನೇ ಗುರಿ ಮಾಡುತ್ತಾರೆ. ಹೀಗಾಗಿ ಖಾತೆ ಬಗ್ಗೆ ಸ್ಪಷ್ಟತೆ ನೀಡಬೇಕು ಎಂದು ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರಲ್ಲಿ ಕೇಳಿದ್ದೇನೆ’ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬಿಡಿಎ, ಬಿಎಂಆರ್‌ಡಿಎ ಹೊರತುಪಡಿಸಿ ನೀಡಿರುವ ಖಾತೆಯ ಬಗ್ಗೆ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ಇಲ್ಲಿ ಸಮರ್ಪಕವಾಗಿ ಆಡಳಿತ ನಡೆಸಬೇಕೆಂದರೆ, ಉತ್ತರದಾಯಿತ್ವದ ಫಲಿತಾಂಶ ಕೊಡಬೇಕಾದರೆ ಖಾತೆಯಲ್ಲಿ ಸ್ಪಷ್ಟತೆ ಇರಬೇಕು. ಇದು ಸಿಕ್ಕ ಮೇಲೆ ಜವಾಬ್ದಾರಿ ವಹಿಸಿಕೊಳ್ಳುವುದು ಸೂಕ್ತ ಎಂಬ ನಿಲುವು ಹೊಂದಿದ್ದೆ. ಆದರೆ, ಮುಖ್ಯಮಂತ್ರಿ, ಪಕ್ಷದ ವರಿಷ್ಠರು, ‘ಜವಾಬ್ದಾರಿ ವಹಿಸಿಕೊಂಡು ಕೆಲಸ ಆರಂಭ ಮಾಡಿ. ಈ ಬಗ್ಗೆ ತೀರ್ಮಾನ ಮಾಡುತ್ತೇವೆ’ ಎಂದು ಸೂಚನೆ ನೀಡಿದ್ದಾರೆ. ಅಂತಿಮವಾಗಿ ಅವರ ಮಾತಿಗೆ ಗೌರವ ಕೊಟ್ಟು, ಸೋಮವಾರದಿಂದ ಜವಾಬ್ದಾರಿ ವಹಿಸಿಕೊಂಡು ಕೆಲಸ ಆರಂಭಿಸಿದ್ದೇನೆ’ ಎಂದು ಮಾಹಿತಿ ನೀಡಿದರು.

‘ಮುಖ್ಯಮಂತ್ರಿ ಅವರ ವಿವೇಚನೆಯನ್ನು ಉಪಯೋಗ ಮಾಡಿ ತೀರ್ಮಾನ ಮಾಡಿದ್ದಾರೆ. ಅದನ್ನು ಮರುಪರಿಶೀಲನೆ ಮಾಡಿ ಎಂದು ಮನವಿ ಮಾಡಿದ್ದೇನೆ. ಅದು ಅವರ ವಿವೇಚನೆಗೆ ಒಳಪಟ್ಟಂತಹ ವಿಷಯ. ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂಬ ಕಾರಣಕ್ಕೆ ಮರುಪರಿಶೀಲನೆಗೆ ಕೇಳಿದ್ದೇನೆ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

‘ಕೆಲವು ಇಲಾಖೆಗಳನ್ನು ನೀಡದಿರುವುದಕ್ಕೆ ಕಾರಣ ಗೊತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಏನೋ ಇರುತ್ತೆ, ಅವರವರ ಅರ್ಹತೆಗೆ ತಕ್ಕಂತೆ ತೀರ್ಮಾನಗಳಾಗುತ್ತವೆ. ಅಂತಹ ಸಂದರ್ಭದಲ್ಲಿ ನಾವೂ ಒಪ್ಪಿಕೊಳ್ಳಬೇಕು. ನನ್ನ ಅರ್ಹತೆ ಬಗ್ಗೆ ನಾನೇ ಹೇಳಿಕೊಳ್ಳಬಾರದು, ಬೇರೆಯವರು ಹೇಳಬೇಕು. ರಾಜಕೀಯದಲ್ಲಿ ಕೊಟ್ಟಿರುವ ಅಧಿಕಾರವನ್ನು ಸಮಚಿತ್ತದಿಂದ ಸ್ವೀಕಾರ ಮಾಡಿ ಕೆಲಸ ಮಾಡಬೇಕು. ಅದು ರಾಜಕೀಯದ ಅನಿವಾರ್ಯ. ಕೇಳಿದ್ದೆಲ್ಲವೂ ಸಿಗುವುದಿಲ್ಲ, ಇರುವ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಸಮಾಧಾನ, ಖುಷಿ, ಕಹಿ–ಸಿಹಿ... ಇವೆಲ್ಲ ಜೀವನದ ಅವಿಭಾಜ್ಯ ಅಂಗ. ಅಧಿಕಾರ ಸಿಕ್ಕಾಗ ನಮ್ಮ ಕೈಲಾದ ಸೇವೆಯನ್ನು ಜನರಿಗೆ ಮಾಡಬೇಕು’ ಎಂದರು.

ಅಧಿಕಾರಿಗಳಿಗೆ ಸೂಚನೆ

- ‘ಹಳೆ ಕಲ್ಲು ಹೊಸ ಬಿಲ್ಲು’ ಎಂಬಂತೆ ಗುಂಡಿ ಮುಚ್ಚುವ ತಾತ್ಕಾಲಿಕ ಪರಿಹಾರ ಬೇಡ
- ಗುಣಮಟ್ಟದ ರಸ್ತೆ ನಿರ್ಮಿಸಿ, ಕೆಟ್ಟ ರಸ್ತೆಗಳಿಂದ ಜನರ ಬವಣೆ ನೀಗಬೇಕು
- ಅಧಿಕಾರಿಗಳು, ಜನಸಾಮಾನ್ಯರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು
- ಇರುವ ವ್ಯವಸ್ಥೆಯಲ್ಲೇ ಕೆಲವು ಸಮಸ್ಯೆಗಳನ್ನಾದರೂ ಶಾಶ್ವತವಾಗಿ ನಿವಾರಿಸಬೇಕು
- ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳಿಗೆ ಬೆಂಬಲವಾಗಿ ನಿಲ್ಲುತ್ತೇನೆ

ನಾಗರಿಕರಿಗೆ ಭರವಸೆ

- ಬೆಂಗಳೂರಿನ 1.5 ಕೋಟಿ ಜನರ ಜೀವನ ಗುಣಮಟ್ಟ ಸುಧಾರಣೆಗೆ ಆದ್ಯತೆ
- ಸಂಚಾರ ದಟ್ಟಣೆ, ಸ್ವಚ್ಛತೆ ಸೇರಿದಂತೆ ನಿತ್ಯದ ಎಲ್ಲ ಸಮಸ್ಯೆಗಳಿಗೆ ತ್ವರಿತ ಪರಿಹಾರ
- ನಗರದ ದೀರ್ಘಾವಧಿಯ ಅಭಿವೃದ್ಧಿಗೆ ಅಗತ್ಯ ಯೋಜನೆಗಳಿಗೆ ರೂಪುರೇಷೆ
- ಆಡಳಿತದಲ್ಲಿ ಚುರುಕು ಮೂಡಿಸಿ, ಸೇವಾ ವಿತರಣೆಯಲ್ಲಿ ಸುಧಾರಣೆ
- ಅತ್ಯುತ್ತಮ ಖಾತಾ ವ್ಯವಸ್ಥೆ ನಗರದಲ್ಲಿದ್ದು, ಆರಂಭಿಕ ಸಮಸ್ಯೆಗಳು ಪರಿಹಾರವಾಗಲಿವೆ

ಕೃಷ್ಣ ಬೈರೇಗೌಡರ ಮಾತು

- ರಸ್ತೆಗಳನ್ನು ನಿರ್ಮಾಣ ಮಾಡಿದ ಹಿಂದೆಯೇ ಗುಂಡಿಗಳು ಬಾಯ್ತೆರೆಯುತ್ತಿವೆ
- ನಗರದ ರಸ್ತೆಗಳಲ್ಲಿ ಗುಂಡಿಗಳು ಅಣಬೆ ರೀತಿಯಲ್ಲಿ ಉದ್ಭವಿಸುತ್ತಿವೆ
- 25 ವರ್ಷದಿಂದ ಇದೇ ಮಾತನ್ನು ಹೇಳುತ್ತಿದ್ದೇವೆ, ಆದರೆ ಸಮಸ್ಯೆ ಹೋಗಿಲ್ಲ
- ಮಾಡುವ ಕೆಲಸ ಸರಿಯಾಗಿ ಮಾಡದ್ದರಿಂದ, ಸಮಸ್ಯೆ ಉದ್ಭವಿಸಲು ನಾವೇ ಕಾರಣವಾಗಿದ್ದೇವೆ
- ಸಮಸ್ಯೆಗಳನ್ನು ಒಪ್ಪಿಕೊಂಡು, ಅದನ್ನು ಪರಿಹರಿಸಲು ಪ್ರಯತ್ನಪಡುತ್ತೇವೆ
- ನಾನು 5 ವರ್ಷಕ್ಕೊಂದು ಟೆಂಡರ್ ತಗೊಂಡು ಬಂದಿದ್ದೀನಾ ಸರ್ಕಾರ ನಡೆಸಲು?
- ಮೂಲಸಮಸ್ಯೆಗಳನ್ನು ಪರಿಹರಿಸಲು ದೀರ್ಘಕಾಲಕ್ಕೆ ದೂರದೃಷ್ಟಿ ಯೋಜನೆ ನೀಡಬೇಕು
- ಯಾರೂ ನಗರ ಬಿಟ್ಟು ಹೋಗುತ್ತಿಲ್ಲ, ಇಲ್ಲಿರುವ ರಿಯಲ್ ಎಸ್ಟೇಟ್ ಬೇಡಿಕೆ ಬೇರೆಲ್ಲೂ ಇಲ್ಲ
- ಬೆಂಗಳೂರಿನಲ್ಲಿ ಬೇರೆಡೆಗಿಂತ ಹೆಚ್ಚಿನ ವಾಕ್‌ಸ್ವಾತಂತ್ರ್ಯ ಇರುವುದರಿಂದ ಚರ್ಚೆಗಳು ಹೆಚ್ಚೇ ಇವೆ
- ನಗರ ಪಾಲಿಕೆಗಳ ಆರ್ಥಿಕ ಸಂಕಷ್ಟದ ಬಗ್ಗೆ ಅರಿವಿದ್ದು, ಅದನ್ನು ಸರಿದೂಗಿಸುವ ಪರಿಹಾರ ಇದೆ
- ತಯಾರಿಯಲ್ಲಿ ಇದ್ದೇವೋ ಇಲ್ಲವೋ ಎನ್ನುವುದು ಮುಖ್ಯವಲ್ಲ, ಪಾಲಿಕೆಗಳಿಗೆ ಚುನಾವಣೆ ಮಾಡಬೇಕಾಗುತ್ತದೆ

360 ಡಿಗ್ರಿ ದೃಷ್ಟಿಕೋನ

ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯಿಂದ ಮಾತ್ರ ಜೀವನದ ಗುಣಮಟ್ಟ ಸುಧಾರಿಸಲು ಸಾಧ್ಯ. ಈ ನಿಟ್ಟಿನಲ್ಲಿ 360 ಡಿಗ್ರಿ ದೃಷ್ಟಿಕೋನದೊಂದಿಗೆ ಬೆಂಗಳೂರಿನ ಜನರ ಜೀವನಮಟ್ಟ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾಗುವುದು ಎಂದು ಕೃಷ್ಣ ಬೈರೇಗೌಡ ಅವರು ತಿಳಿಸಿದರು.

‘ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಅಭಿವೃದ್ಧಿಗೆ ಸ್ಪಷ್ಟವಾದ ದೂರದೃಷ್ಟಿಯ ಯೋಜನೆಗಳನ್ನು ಹೊಂದಿದ್ದಾರೆ. ಅದರಂತೆ ಎಲ್ಲಾ ಅಧಿಕಾರಿಗಳು, ಆಡಳಿತ ಮತ್ತು ವಿರೋಧ ಪಕ್ಷಗಳ ಜನಪ್ರತಿನಿಧಿಗಳ ಸಹಕಾರದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ, ಬದ್ಧತೆಯಿಂದ ಒಂದುಗೂಡಿ ಕೆಲಸ ಮಾಡಬೇಕಾಗುತ್ತದೆ. ರಾಜಕೀಯದ ಹೊರತಾಗಿ ಎಲ್ಲರ ಸಹಕಾರ ಅಗತ್ಯ’ ಎಂದು ಹೇಳಿದರು.

ರಾಜ್ಯದ ಮೇಲೂ ಎಲ್ ನಿನೊ ಪರಿಣಾಮ

ನವದೆಹಲಿ: ಮುಂಗಾರು ಹಂಗಾಮಿನಲ್ಲಿ ಎಲ್ ನಿನೊ ಕಾರಣದಿಂದ ಕರ್ನಾಟಕ ಸೇರಿದಂತೆ 12 ರಾಜ್ಯಗಳು ಹೆಚ್ಚು ತೊಂದರೆಗೆ ಒಳಗಾಗಲಿದ್ದು, ಈ ರಾಜ್ಯಗಳಿಗೆ ವಿಶೇಷ ಗಮನ ನೀಡಲಾಗುವುದು ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ ಘೋಷಿಸಿದ್ದಾರೆ.

ಸೋಮವಾರ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ದೇಶದ 326 ಜಿಲ್ಲೆಗಳಲ್ಲಿ ಹೆಚ್ಚು ಪರಿಣಾಮ ಬೀರಲಿದೆ ಎಂಬುದನ್ನು ಅಧಿಕಾರಿಗಳು ಗುರುತಿಸಿದ್ದಾರೆ. ಪ್ರತಿಕೂಲ ಹವಾಮಾನದಿಂದ ಕೃಷಿ ಮತ್ತು ಕೃಷಿಕರನ್ನು ರಕ್ಷಿಸುವ ನಿಟ್ಟಿನಲ್ಲಿ ವಿಸ್ತೃತ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಜಿಲ್ಲಾಧಿಕಾರಿ ಗಳ ಜೊತೆ ಸಭೆ ನಡೆಸಲಾಗುವುದು’ ಎಂದು ತಿಳಿಸಿದರು.

‘ಎಲ್ ನಿನೊ ಪರಿಣಾಮಗಳನ್ನು ಗಮನಿಸುವ ಮತ್ತು ತಗ್ಗಿಸುವ ಉದ್ದೇಶದಿಂದ ರಾಷ್ಟ್ರ ಮಟ್ಟದಲ್ಲಿ ಪ್ರತಿ ವಾರವೂ ಸಭೆ ನಡೆಸಲಾಗುವುದು. ಜಿಲ್ಲಾವಾರು ಯೋಜನೆ ಮತ್ತು ರಸಗೊಬ್ಬರ ಲಭ್ಯತೆಯನ್ನು ವಿವರವಾಗಿ ಚರ್ಚಿಸಲಾಗು ವುದು. ಕೃಷಿಕರನ್ನು ರಕ್ಷಿಸುವುದು ಸರ್ಕಾರದ ಆದ್ಯತೆ’ ಎಂದು ಹೇಳಿದರು.

ರಾಜಾಜಿನಗರ: ಪ್ರಗತಿ ಪರಿಶೀಲನೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ನಗರ ಪಾಲಿಕೆ ಆಯುಕ್ತ ಕೆ.ವಿ.ರಾಜೇಂದ್ರ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್‌ಅವರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಿಗೆ ಸಂಬಂಧಿಸಿದ ಸಮಸ್ಯೆಗಳು, ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ಶ್ರೀರಾಮಪುರದಲ್ಲಿರುವ ಎಸ್.ಸಿ/ಎಸ್.ಟಿ. ಮತ್ತು ಒಬಿಸಿ ವರ್ಗಕ್ಕೆ ಶೇ 50 ರಷ್ಟು ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವ ಅಂಬೇಡ್ಕರ್ ಡೇ ಕೇರ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸ್ಥಾಪಿಸುವ ಪ್ರಸ್ತಾವಕ್ಕೆ ಚಾಲನೆ ನೀಡಲು, ಪ್ರಕಾಶ ನಗರದ ಮರಿಯಪ್ಪನಪಾಳ್ಯದಲ್ಲಿ ಡಯಾಲಿಸಿಸ್ ಕೇಂದ್ರದ (ನೆಫ್ರೊ ಪ್ಲಸ್) ಬಾಕಿಯಿರುವ ಕಾಮಗಾರಿ ಶೀಘ್ರ ಪೂರ್ಣಗೊಳ್ಳುವಂತೆ ಕ್ರಮ ವಹಿಸಲು ಆರೋಗ್ಯ ಅಧಿಕಾರಿಗೆ ಆಯುಕ್ತರು ಸೂಚಿಸಿದರು.

ಶಿಶುವಿಹಾರ, ನಮ್ಮ ಕ್ಲಿನಿಕ್ ಕಟ್ಟಡ ಸೇರಿದಂತೆ ಎಲ್ಲ ಸರ್ಕಾರಿ ಸ್ವತ್ತುಗಳ ಜವಾಬ್ದಾರಿಯನ್ನು ಎಂಜಿನಿಯರಿಂಗ್ ವಿಭಾಗ ತೆಗೆದುಕೊಳ್ಳಬೇಕು. ವಿಭಾಗ ಕಚೇರಿಯ ಬಲವರ್ಧನೆಯಾಗಬೇಕು ಎಂದು ಆಯುಕ್ತರು ಹೇಳಿದರು.

ಪಾಲಿಕೆಯ ಶಾಲಾ ಕಾಲೇಜು ಜುಲೈ 31ರವರೆಗೆ ದಾಖಲಾತಿ

ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಾಲಿಕೆಯ ಶಿಶು ವಿಹಾರ, ಶಾಲಾ-ಕಾಲೇಜುಗಳಿಗೆ ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆ ಜುಲೈ 31ರವರೆಗೆ ಅವಕಾಶವಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು ಐದು ಶಿಶುವಿಹಾರ, ಒಂದು ಪ್ರೌಢಶಾಲೆ ಮತ್ತು ಒಂದು ಪದವಿ ಪೂರ್ವ ಕಾಲೇಜು ಇದ್ದು, ಈ ಎಲ್ಲಾ ಶಾಲೆಗಳಲ್ಲಿ ಒಟ್ಟಾರೆಯಾಗಿ 519 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಾಲಿಕೆಯ ಶಿಶು ವಿಹಾರ, ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳಲ್ಲಿ ಒಟ್ಟು 272 ವಿದ್ಯಾರ್ಥಿನಿಯರು ಹಾಗೂ 247 ವಿದ್ಯಾರ್ಥಿಗಳು ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ.

ಕೆ.ಆರ್. ಮಾರುಕಟ್ಟೆ: ಸ್ವಚ್ಛತೆಗೆ ಆದ್ಯತೆ

ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ ಹಾಗೂ ಸುರಕ್ಷತೆಗೆ ಆದ್ಯತೆ ನೀಡಲಾಗುವುದು ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ಜಿ. ಜಗದೀಶ್ ತಿಳಿಸಿದರು.

ಕೆ.ಆರ್. ಮಾರುಕಟ್ಟೆಯಲ್ಲಿ ಪಾದಚಾರಿ ಒತ್ತುವರಿ ತೆರವು, ಸ್ವಚ್ಛತೆ ಕಾರ್ಯ, ಅನಧಿಕೃತ ಮಳಿಗೆಗಳ ತೆರವು ಕಾರ್ಯಾಚರಣೆಯನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮಂಗಳವಾರ ನಡೆಸಿದ ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿ, ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಮಳಿಗೆಗಳ ಮುಂಭಾಗದ ಒತ್ತುವರಿಗಳನ್ನು ಹಾಗೂ ಅನಧಿಕೃತ ಮಳಿಗೆಗಳನ್ನು ತೆರವುಗೊಳಿಸಿ, ವ್ಯಾಪಾರಿಗಳು, ರೈತರು ಹಾಗೂ ಸ್ಥಳೀಯ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ, ಮಾರುಕಟ್ಟೆಯಲ್ಲಿನ ಸಮಸ್ಯೆಗಳನ್ನು ಆಲಿಸಿ, ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಕೇಂದ್ರ ನಗರ ಪಾಲಿಕೆಗೆ ಪಾವತಿಸಬೇಕಾದ ಬಾಡಿಗೆ ಶುಲ್ಕವನ್ನು ಯಾವುದೇ ಮಧ್ಯವರ್ತಿಗಳಿಗೆ ಅಥವಾ ಅನಧಿಕೃತ ವ್ಯಕ್ತಿಗಳಿಗೆ ನೀಡದೆ ನೇರವಾಗಿ ನಗರ ಪಾಲಿಕೆಗೆ ಮಾತ್ರ ಪಾವತಿಸುವಂತೆ ಆಯುಕ್ತರು ವ್ಯಾಪಾರಿಗಳಿಗೆ ತಿಳಿಸಿದರು.

ವ್ಯಾಪಾರಿಗಳು ಮತ್ತು ರೈತರು ತಮ್ಮ ವ್ಯಾಪಾರ ನಡೆಸುವ ಸ್ಥಳಗಳನ್ನು ಗುರುತಿಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ರೂಪಿಸಲು ವಿಶೇಷ ವಿನ್ಯಾಸ ರೂಪಿಸಲಾಗುತ್ತಿದೆ. ಈ ಯೋಜನೆಯನ್ನು ಜಿಬಿಎ ಮುಖ್ಯ ಆಯುಕ್ತರು, ವ್ಯಾಪಾರಿಗಳು, ರೈತರು ಹಾಗೂ ಸಂಘ-ಸಂಸ್ಥೆಗಳ ಮುಖಂಡರೊಂದಿಗೆ ಚರ್ಚಿಸಿ ಎಲ್ಲರ ಒಪ್ಪಿಗೆಯೊಂದಿಗೆ ಅಂತಿಮ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದರು.

‘ನೆಲಮಹಡಿಯಲ್ಲಿ ವಾಹನ ಪಾರ್ಕಿಂಗ್ ಅವೈಜ್ಞಾನಿಕ’

‘ಕೆ.ಆರ್.ಮಾರುಕಟ್ಟೆಯ ನೆಲಮಹಡಿಯಲ್ಲಿ ವಾಹನ ಪಾರ್ಕಿಂಗ್ ವ್ಯವಸ್ಥೆ ಅವೈಜ್ಞಾನಿಕವಾಗಿದ್ದು, ವ್ಯಾಪಾರಿಗಳು ಮತ್ತು ರೈತರಿಗೆ ತೊಂದರೆಯಾಗಿದೆ. ಕೂಡಲೇ ಪರ್ಯಾಯ ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಒತ್ತಾಯಿಸಿದ್ದಾರೆ.

ಮಂಗಳವಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತರಿಗೆ ಮನವಿ ಸಲ್ಲಿಸಿರುವ ಅವರು, ‘ಮಾರುಕಟ್ಟೆಯನ್ನು ಸಂಪರ್ಕಿಸುವ ಎಲ್ಲ ಮಾರ್ಗಗಳಲ್ಲಿಯೂ ಬ್ಯಾರಿಕೇಡ್‌ಗಳನ್ನು ಹಾಕಲಾಗಿದ್ದು, ರಸ್ತೆ ಇಕ್ಕೆಲದಲ್ಲಿ ನಾಗರಿಕರು ಓಡಾಡುವುದೇ ಕಷ್ಟವಾಗಿದೆ’ ಎಂದಿದ್ದಾರೆ.

‘ಬೀದಿಬದಿ ವ್ಯಾಪಾರಿಗಳನ್ನು ತೆರವು ಮಾಡಲಾಗಿದ್ದು, ಅವರಿಗೆ ಪರ್ಯಾಯ ಮಾರ್ಗ ತೋರಿಲ್ಲ. ದಟ್ಟಣೆ ಹೆಚ್ಚಾಗಿದ್ದು, ಮೈಸೂರು ಮುಖ್ಯರಸ್ತೆಯಲ್ಲಿ ಸುಗಮ ಸಂಚಾರ ಸಾಧ್ಯವಾಗುತ್ತಿಲ್ಲ. ಕೂಡಲೇ ಏಳು ಮಾರ್ಗಗಳ ಬ್ಯಾರಿಕೇಡ್ ತೆರವು ಮಾಡಬೇಕು. ಮಾರುಕಟ್ಟೆಯನ್ನು ಪಾರ್ಕಿಂಗ್‌ಗಾಗಿ ಬದಲಾಯಿಸಬಾರದು’ ಎಂದು ಕೋರಿದ್ದಾರೆ.

ಕೆರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಜ್ಯೋತಿಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಕೆರೆಗಳಲ್ಲಿ ಅಧಿಕಾರಿಗಳು ಮಂಗಳವಾರ ಒತ್ತುವರಿ ತೆರವುಗೊಳಿಸಿದರು.

ಪೂರ್ವ ತಾಲ್ಲೂಕು ತಹಶಿಲ್ದಾರ್ ಪರಶುರಾಮ್ ಅವರು, ಬಿದರಹಳ್ಳಿ ಉಪ ತಹಶಿಲ್ದಾರ್ ಮಂಜುನಾಥ್ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಕಾರ್ಯಾಚರಣೆ ನಡೆಸಿದರು.

ನಂತರ ಮಾತನಾಡಿದ ತಹಶಿಲ್ದಾರ್, ‘ಜಿಲ್ಲಾಧಿಕಾರಿಯ ಸೂಚನೆ ಮೇರೆಗೆ ಜ್ಯೋತಿಪುರ ಗ್ರಾಮದಿಂದ ಕಾರ್ಯಾಚರಣೆ ಶುರುವಾಗಿದೆ. ಮತ್ತೆ ಒತ್ತುವರಿ ಮಾಡದಂತೆ ನಾಮಫಲಕವನ್ನು ಹಾಕಿ ಸಣ್ಣ ನೀರಾವರಿ ಇಲಾಖೆ ಸುಪರ್ದಿಗೆ ಒಪ್ಪಿಸಲಾಗುವುದು. ಅಕ್ರಮ ಕೃಷಿ ಚಟುವಟಿಕೆ ನಡೆಸುತ್ತಿದ್ದ ರೈತರಿಗೆ ಎಚ್ಚರಿಕೆ ನೀಡಲಾಗಿದೆ. ಪುನರಾವರ್ತಿಸಿದರೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಮೂರು ದಿನದೊಳಗೆ ಹಂಚರಹಳ್ಳಿ, ರಘುವನಹಳ್ಳಿ, ಬೊಮ್ಮೇನಹಳ್ಳಿ, ಹುಸ್ಕೂರಿನಲ್ಲಿ ಒತ್ತುವರಿ ತೆರವುಗೊಳಿಸಿ, ಗಡಿ ಗುರುತಿಸಲಾಗುವುದು’ ಎಂದು ಉಪ ತಹಶೀಲ್ದಾರ್ ತಿಳಿಸಿದರು.

‘ಪ್ರಜಾವಾಣಿ’ಯ ಸೋಮವಾರದ ಸಂಚಿಕೆಯಲ್ಲಿ ‘ಕೆರೆ ಜಾಗದಲ್ಲಿ ಅಕ್ರಮ ಕೃಷಿ’ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಚಿತ್ರಾವಳಿ

ಬಸವನಗುಡಿಯ ಬ್ಯೂಗಲ್ ರಾಕ್ ಉದ್ಯಾನದಲ್ಲಿ ಗುರುವನ ಫೌಂಡೇಷನ್ ಆಯೋಜಿಸಿದ್ದ ಪರಿಸರ ದಿನಾಚರಣೆಯಲ್ಲಿ ಸೋಲೂರಿನ ಬ್ರಹ್ಮಶ್ರೀ ನಾರಾಯಣಗುರು ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ವಿಖ್ಯಾತನಂದ ಸ್ವಾಮೀಜಿ, ಯೋಗಿ ಹರೀಶ ಮಧ್ಯಸ್ಥ, ಶಾಸಕ ರವಿ ಸುಬ್ರಹ್ಮಣ್ಯ ಗಿಡ ನೆಟ್ಟರು. ಮೇದಿನಿ ಗರುಡಾಚಾರ್, ಎಚ್.ಎನ್.ಗೌತಮ್, ವಿ.ಎಸ್.ಆರಾಧ್ಯ, ನಾಗರಾಜು, ಭಾರತಿ ಪೂಜಾರಿ ಪಾಲ್ಗೊಂಡಿದ್ದರು

ಅತ್ತಿಬೆಲೆಯ ಕಲಾಸಂಗಮದಲ್ಲಿ ಸರ್ಜಾಪುರದ ಸ್ನೇಹ ಸಮ್ಮಿಲನ ಫೌಂಡೇಷನ್, ನಾರಾಯಣ ನೇತ್ರಾಲಯದ ಸಹಯೋಗದಲ್ಲಿ ಆಯೋಜಿಸಿದ್ದ ಕಣ್ಣಿನ ಉಚಿತ ತಪಾಸಣೆಯಲ್ಲಿ 60 ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಿ, ಕನ್ನಡಕ ನೀಡಲಾಯಿತು

‘ಬಿಬಿಸಿ ಟೆಂಡರ್ ಕಾನೂನುಬಾಹಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ– 1, ಬಿಬಿಸಿ) ಯೋಜನೆಯ ಪ್ಯಾಕೇಜ್–1ರ ನಿರ್ಮಾಣ ಕಾಮಗಾರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಟೆಂಡರ್ ಕರೆದಿರುವುದು ಕಾನೂನು ಬಾಹಿರವಾಗಿದೆ’ ಎಂದು ಪಿ.ಆರ್.ಆರ್. ರೈತ ಹಾಗೂ ನಿವೇಶನದಾರರ ಸಂಘ ಆರೋಪಿಸಿದೆ.

ಯಲಹಂಕದ ವಿಮಾನ ನಿಲ್ದಾಣ ರಸ್ತೆಯ ಕೋಗಿಲು ಕ್ರಾಸ್ ಬಳಿಯ ಹೋಟೆಲ್‌ನಲ್ಲಿ ಮಂಗಳವಾರ ಸಭೆ ನಡೆಸಿದ ಪಿ.ಆರ್.ಆರ್.ಯೋಜನೆಗೆ ಒಳಪಡುವ ನಿವೇಶನದಾರರು ಮತ್ತು ಜಮೀನಿನ ಮಾಲೀಕರು, ಪ್ರಾಧಿಕಾರದ ಕ್ರಮವನ್ನು ಖಂಡಿಸಿದರು.

ಸಂಘದ ಅಧ್ಯಕ್ಷ ಮಾವಳಿಪುರ ಶ್ರೀನಿವಾಸ್ ಮಾತನಾಡಿ, ‘ಟೆಂಡರ್ ಕರೆದ ಬಳಿಕ 21 ಕಿಲೋ ಮೀಟರ್‌ನಲ್ಲಿ ನೈಸ್ ಇಂಟಿಗ್ರೇಷನ್‌ಗೆ ಒಳಪಡುವ 3.8 ಕಿಲೋಮೀಟರ್ ಉದ್ದದ ರಸ್ತೆ ನಿರ್ಮಾಣಕ್ಕೆ ಜೂನ್ 10ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಹೈಕೋರ್ಟ್‌ನಲ್ಲಿ 200ಕ್ಕೂ ಹೆಚ್ಚು ಪ್ರಕರಣಗಳ ವಿಚಾರಣೆ ಮುಂದುವರಿಯುತ್ತಿದ್ದು, ಕೆಲವು ಪ್ರಕರಣಗಳಲ್ಲಿ ಮಧ್ಯಂತರ ತಡೆ ಆದೇಶಗಳು ಇದ್ದರೂ ಟೆಂಡರ್ ಕರೆದಿರುವುದು ನ್ಯಾಯಾಲಯದ ಆದೇಶ ಉಲ್ಲಂಘನೆಯಾಗಿದೆ’ ಎಂದು ಹೇಳಿದ್ದಾರೆ.

‘ಬಿಬಿಸಿ ಯೋಜನೆಯು 100 ಮೀಟರ್ ರಸ್ತೆ ಅಗಲದ ನಿರ್ಮಾಣಕ್ಕೆ ಪರಿಸರ ಅನುಮೋದನೆ ಪಡೆದುಕೊಂಡು ಈಗ ಪ್ರಾಧಿಕಾರ 65 ಮೀಟರ್ ರಸ್ತೆ ನಿರ್ಮಾಣಕ್ಕೆ ಟೆಂಡರ್ ಹೊರಡಿಸಿರುವುದು ಪರಿಸರ ಕಾಯ್ದೆಗಳ ಉಲ್ಲಂಘನೆಯಾಗಿದೆ. ಶೇಕಡ 80 ರಷ್ಟು ಭೂಸ್ವಾಧೀನ ಪೂರ್ಣಗೊಳ್ಳದೆ ಟೆಂಡರ್ ಆಹ್ವಾನಿಸಿರುವುದು ಕಾನೂನು ಬಾಹಿರ’ ಎಂದು ತಿಳಿಸಿದ್ದಾರೆ.

ಪ್ರಧಾನ ಕಾರ್ಯದರ್ಶಿ ಕೃಷ್ಣ ಮಾತನಾಡಿ, ‘2013ರ ಭೂ ಸ್ವಾಧೀನ (ಪರಿಹಾರ ಮತ್ತು ಪುನರ್ ವಸತಿ) ಕಾಯ್ದೆ ಅನುಸರಿಸದೆ 1894ರ ಕಾಯ್ದೆ ಪ್ರಕಾರ ಸಂಧಾನಿತ ಸೂತ್ರದ ಮೂಲಕ ಪರಿಹಾರ ಆಯ್ಕೆಗಳನ್ನು ಘೋಷಣೆ ಮಾಡಿ ವಂಚಿಸಲಾಗುತ್ತಿದೆ’ ಎಂದು ಹೇಳಿದ್ದಾರೆ.

‘ಯೋಜನೆ ರೂಪಿಸುವುದಾದರೆ ಕೇಂದ್ರ ಸರ್ಕಾರದ 2013ರ ಕಾಯ್ದೆ ನಿಯಮಗಳನ್ನು ಬಿಡಿಎ ಅಳವಡಿಸಿಕೊಂಡು, ಪರಿಹಾರ ಮತ್ತು ಪುನರ್ವಸತಿ ನೀಡಬೇಕು. ಸಾಧ್ಯವಾಗದಿದ್ದಲ್ಲಿ ರೈತರಿಗೆ ನಿರಾಕ್ಷೇಪಣ ಪತ್ರ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಸಾರ್ವಜನಿಕರ ಅನುಕೂಲಕ್ಕಾಗಿ ಜೂನ್ 18ರಂದು ಬೆಳಿಗ್ಗೆ 9.30ರಿಂದ 11 ಗಂಟೆವರೆಗೆ ನೀರಿನ ಅದಾಲತ್ ನಡೆಸಲಿದೆ.

ಹೆಚ್ಚಿನ ಮಾಹಿತಿಗಾಗಿ:
ಪಶ್ಚಿಮ 1–9980214906,
ಪಶ್ಚಿಮ 2–7259756643,
ಪಶ್ಚಿಮ 3–9845444069,
ಪಶ್ಚಿಮ 4–7259031533,
ಉತ್ತರ 1–9845444060,
ಉತ್ತರ 2–8217467686,
ಉತ್ತರ 3–9590595245,
ಉತ್ತರ 4–9845967847,
ದಕ್ಷಿಣ 1–9886152469,
ದಕ್ಷಿಣ 2–9845444090,
ದಕ್ಷಿಣ 3–9845444042,
ದಕ್ಷಿಣ 4– 9591988970.

ಕುಂದು ಕೊರತೆಗಳಿಗೆ ಸಂಬಂಧಿಸಿ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಕ್ಕೆ ಕರೆಮಾಡಿ ದೂರು ದಾಖಲಿಸಬಹುದು. ಅಲ್ಲದೆ ಮೊ. 87622 28888ಕ್ಕೆ ದೂರು ಸಲ್ಲಿಸಬಹುದು.

ನಗರದ ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ‘ಇಸ್ರೊ’ ಸಂಸ್ಥೆಯ ‘ಸ್ಪೇಸ್ ಆನ್ ವೀಲ್ಸ್’ ಅಭಿಯಾನದ ಅಂಗವಾಗಿ ವಸ್ತುಪ್ರದರ್ಶನ ನಡೆಯಿತು

ಗಮನಸೆಳೆದ ‘ಸ್ಪೇಸ್ ಆನ್ ವೀಲ್ಸ್’

ಬೆಂಗಳೂರು; ಯುವ ಮನಸ್ಸುಗಳಲ್ಲಿ ಬಾಹ್ಯಾಕಾಶ ವಿಜ್ಞಾನದ ಬಗ್ಗೆ ಇರುವ ಕುತೂಹಲವನ್ನು ಬಲಗೊಳಿಸಲು ‘ಇಸ್ರೊ’ ಸಂಸ್ಥೆಯು ರೂಪಿಸಿರುವ ‘ಸ್ಪೇಸ್ ಆನ್ ವೀಲ್ಸ್’ ಅಭಿಯಾನದ ಅಂಗವಾಗಿ ನಗರದ ಸಪ್ತಗಿರಿ ಎನ್‌ಪಿಎಸ್ ವಿಶ್ವ ವಿದ್ಯಾಲಯದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವಸ್ತುಪ್ರದರ್ಶನವು ಬಾಹ್ಯಾಕಾಶದ ಅದ್ಭುತಗಳನ್ನು ತೆರೆದಿಟ್ಟಿತು.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ನೇತೃತ್ವದಲ್ಲಿ ನಡೆದ ಸಂಚಾರಿ ಪ್ರದರ್ಶನವು ಬಾಹ್ಯಾಕಾಶ ಕ್ಷೇತ್ರದ ಕುತೂಹಲಕಾರಿ ಸಂಶೋಧನೆಗಳನ್ನು ಅನಾವರಣಗೊಳಿಸಿತು. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಉತ್ಸಾಹದಿಂದ ಪಾಲ್ಗೊಂಡರು.

ವಿಶೇಷವಾಗಿ ವಿನ್ಯಾಸಗೊಳಿಸಿದ ಬಸ್‌ನಲ್ಲಿ ಇಸ್ರೊದ ಉಡಾವಣಾ ವಾಹನಗಳು ಮತ್ತು ಉಪಗ್ರಹಗಳ ವಿವರವಾದ ಮಾದರಿಗಳು ಗಮನ ಸೆಳೆದವು. ಬಾಹ್ಯಾಕಾಶ ನೌಕೆಗಳ ಕಾರ್ಯವೈಖರಿ ಕುರಿತ ವಿಜ್ಞಾನ ಮಾದರಿಗಳ ಮೂಲಕ ಇಸ್ರೊ ಸಿಬ್ಬಂದಿ ಮಾಹಿತಿ ನೀಡಿದರು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನೂರಾರು ವಿದ್ಯಾರ್ಥಿಗಳು ಪ್ರದರ್ಶನವನ್ನು ವೀಕ್ಷಿಸಿ, ಸಂವಾದದಲ್ಲಿ ಪಾಲ್ಗೊಂಡರು. ಪ್ರದರ್ಶನದ ಸ್ವರೂಪವನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಮೋತಿಲಾಲ್ ಮುಣೋತ್ ಸ್ಮರಣಾರ್ಥ ಗೋ ಸೇವಾ ಸಾಂಸ್ಕೃತಿಕ ಉತ್ಸವ ಆಯೋಜನೆ

ಗೋವುಗಳ ಸಂರಕ್ಷಣೆಗೆ ₹56 ಲಕ್ಷ ದೇಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವುಗಳ ಸೇವೆಗಾಗಿ ಮಹೇಂದ್ರ ಮುಣೋತ್ ಕುಟುಂಬವು ₹56 ಲಕ್ಷ ದೇಣಿಗೆಯನ್ನು ಅಮೃತಧಾರ ಗೋ ಶಾಲೆಗೆ ನೀಡಿದೆ.

ತಂದೆ ಮೋತಿಲಾಲ್ ಮುಣೋತ್ ಸ್ಮರಣಾರ್ಥ ಅವರ ಪುತ್ರರಾದ ಮಹೇಂದ್ರ ಸುರಕ್ಷಾ ಮುಣೋತ್ ಮತ್ತು ಹಂಸರಾಜ್ ಭಾಗ್ಯವಂತಿ ಮುಣೋತ್ ಕನಕಪುರ ರಸ್ತೆಯಲ್ಲಿರುವ ಅಮೃತಧಾರ ಗೋಶಾಲೆಯಲ್ಲಿ ಗೋ ಸೇವಾ ಸಾಂಸ್ಕೃತಿಕ ಉತ್ಸವ ಆಯೋಜಿಸಿದ್ದರು.

ಮುಣೋತ್ ಕುಟುಂಬದೊಂದಿಗೆ ಸಂತರಾದ ಪುಖರಾಜ್, ಆನಂದ್ ಕೃಷ್ಣ ದಾಸ್ ಮತ್ತು ಗೋ ಭಕ್ತರು ಹಸುಗಳನ್ನು ಪೂಜಿಸಿದರು. ಅಲ್ಲದೆ ಇದೇ ಸಂದರ್ಭದಲ್ಲಿ ಸಸಿಗಳನ್ನು ನೆಟ್ಟರು.

ಮಾರುತಿ ಮೆಡಿಕಲ್ಸ್‌ನ ನಿರ್ದೇಶಕ ಆನಂದ ಮುನೋತ್ ಜೈನ್ ಭಾಗವಹಿಸಿದ್ದರು. ಕೃಪಾ ಲವಿಂಗ್ ಅನಿಮಲ್ಸ್, ಕ್ಯೂಪ, ಸರ್ವ, ಭಾರತೀಯ ಗೋ ಪರಿವಾರ, ಆದರ್ಶ ಗೋಶಾಲೆ ರಾಜನಕುಂಟೆ, ಕೃಷ್ಣ ಗೋ ಸೇವಾಶ್ರಮ , ಕೇಸರಿಯಾನಾಥ ಗೋಶಾಲೆ, ಪಿಂಜರಾಪೋಲ್ ಗೋಶಾಲೆ, ಧ್ಯಾನ್ ಫೌಂಡೇಷನ್, ಶಿವಗಂಗೆಯ ಓಂಕಾರ ಗೋ ಶಾಲೆ, ಚಿಕ್ಕಮಗಳೂರಿನ ಕಾಮಧೇನು ಗೋಶಾಲೆ ಮತ್ತು ವಿವಿಧ ಗೋ ಸೇವಕ ದಳದ ಪ್ರತಿನಿಧಿಗಳು ಭಾಗವಹಿಸಿದ್ದರು.

ಹಸುಗಳು ಮತ್ತು ಇತರ ಪ್ರಾಣಿಗಳ ಸೇವೆಗಾಗಿ ಒಟ್ಟು ₹56 ಲಕ್ಷದ ಚೆಕ್ ಅನ್ನು ದೇಣಿಗೆಯಾಗಿ ನೀಡಲಾಯಿತು.

ಗೋಶಾಲೆಗಳ ಪ್ರತಿನಿಧಿಗಳಾಗಿ ನಿತಿನ್ ಭಾಯಿ, ಮಹೇಂದ್ರ ಜೈನ್, ಡಾ. ಜಯಶ್ರೀ, ಡಾ.ಉದಯ್, ಆದಿತ್ಯ, ಉಪೇಂದ್ರ ಕುಮಾರ್, ಗೌತಮ್ ಶರ್ಮಾ, ಸಂತೋಷ್ ತಿವಾರಿ, ಅಮಿತ್, ರಾಜಣ್ಣ ಭಾಗವಹಿಸಿದ್ದರು.

ಗೋವುಗಳ ಸೇವೆಗಾಗಿ ಮಹೇಂದ್ರ ಮುಣೋತ್ ಕುಟುಂಬವು ₹56 ಲಕ್ಷ ದೇಣಿಗೆಯನ್ನು ಅಮೃತಧಾರ ಗೋ ಶಾಲೆಗೆ ನೀಡಿದೆ

ಮೈಸೂರು ರೇಸ್

ಸ್ಪ್ಲೆಂಡಿಡೊ ಗೆಲ್ಲುವ ನಿರೀಕ್ಷೆ

ಡಾ. ಎನ್.ಎಂ.ಶ್ರೀನಿವಾಸ್ ಮೆಮೊರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಪ್ಲೆಂಡಿಡೊ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಆಪ್ಟಿಮಿಸ್ಟ್ 1, ಪೀಟರ್ಸ್ ಚಾಯ್ಸ್ 8, ಸಿಟಿ ಆಫ್ ಹಸ್ಲ್ 2
2ನೇ ರೇಸ್: ಅಡೇನಿಯಾ 4, ಫಾರೆಸ್ಟ್ ಲೇಕ್ 11, ಫಿನಿಕಸ್ ಗೋಲ್ಡ್ 8
3ನೇ ರೇಸ್: ನ್ಯಾಚುರಲ್ ಡೈಮಂಡ್ 7, ಟೈಗರ್‌ಕಿಂಗ್ 1, ಮಲ್ಟಿಕ್ರೌನ್ 6
4ನೇ ರೇಸ್: ಮಿಸ್ಟರ್ ಕರ್ನಾಟಕ 4, ಆಬ್ಸಲ್ಯೂಟ್ ಕೇಸರಿ 7, ಸನ್‌ವೇ ಲಗೂನ್ 9
5ನೇ ರೇಸ್: ಶೀರ್ ಲಾಕ್ಸ್ 1, ಕ್ರಿಯೇಟಿವ್ ಗರ್ಲ್ 6, ಸೂರ್ಯಕ್ರಿಷಿ 5
6ನೇ ರೇಸ್: ಸ್ಪ್ಲೆಂಡಿಡೊ 8, ಸ್ಟಿಲ್ ಐ ರೈಝ್ 1, ಲಾಕ್ ಲೊಮೊಂಡ್ 3
7ನೇ ರೇಸ್: ಶರ್ಪ 6, ಸಿಯೋಲ್‌ಫರ್ ಬುಲೆಟ್ 3, ಓಪಸ್ ಒನ್ 1
8ನೇ ರೇಸ್: ಸೀಕಿಂಗ್ ಆಲ್ಫಾ 4, ವಿಶ್ವಾಸ್ 6, ಮಿಸ್ಟಿಕ್ ಡಿವೈನ್ 2

ಉತ್ತಮ ಬೆಟ್: ಮಿಸ್ಟರ್ ಕರ್ನಾಟಕ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

‘ಪ್ರತಿ ವರ್ಷ 13,940 ವೈದ್ಯರು ಸೇವೆಗೆ ಅಣಿ’

ರಾಜೀವ್ ಗಾಂಧಿ ಆರೋಗ್ಯ ವಿ.ವಿ ಘಟಿಕೋತ್ಸವದಲ್ಲಿ 72,741 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ 72 ವೈದ್ಯಕೀಯ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ವಾರ್ಷಿಕ 72 ಸಾವಿರ ಆರೋಗ್ಯ ವಿಜ್ಞಾನ ಪದವೀಧರರು ಹೊರಬರುತ್ತಿದ್ದಾರೆ. 13,940 ವೈದ್ಯರು ಸೇವೆಗೆ ಅಣಿಯಾಗುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ವೈದ್ಯಕೀಯ ಕ್ಷೇತ್ರದ ವಿವಿಧ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ, ಮಾತನಾಡಿದರು.

‘ಇಲ್ಲಿ ಅತ್ಯುತ್ತಮ ವೈದ್ಯರು, ಆರೋಗ್ಯ ವೃತ್ತಿಪರರನ್ನು ರೂಪಿಸಲಾಗುತ್ತಿದ್ದು, ಅವರಿಗೆ ವಿದೇಶದಲ್ಲಿಯೂ ಬೇಡಿಕೆಯಿದೆ. ಇಲ್ಲಿ ತಯಾರಾದ ವೈದ್ಯರ ಪ್ರತಿಭೆ, ಗುಣಮಟ್ಟ, ಸೇವೆ ಹಾಗೂ ಬದ್ಧತೆಗೆ ಸರಿಸಾಟಿ ಬೇರೆಲ್ಲೂ ಇಲ್ಲ. ವಿದೇಶಗಳಲ್ಲಿನ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿಯೂ ಭಾರತೀಯ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ’ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳ ಜತೆಗೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ನಿರ್ಮಿಸುವುದು ನಮ್ಮ ಸರ್ಕಾರದ ಗುರಿ. ರಾಜ್ಯದಾದ್ಯಂತ ಟ್ರಾಮಾ ಕೇರ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು’ ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ., ‘ಪ್ರಸ್ತುತ ಸುಮಾರು 1,450 ಸಂಸ್ಥೆಗಳೊಂದಿಗೆ ವಿಶ್ವವಿದ್ಯಾಲಯವು ಸಂಯೋಜನೆಗೊಂಡಿದ್ದು, 4 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಭೀಮನಕುಪ್ಪೆಯಲ್ಲಿ 50 ಎಕರೆ ಪ್ರದೇಶದಲ್ಲಿ ಸಂಶೋಧನೆ ಮತ್ತು ನಾವೀನ್ಯತಾ ಕೇಂದ್ರವನ್ನು ₹200 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ಡಿಜಿಟಲ್ ಪೆಥಾಲಜಿ, ರೇಡಿಯಾಲಜಿ, ಕೃತಕ ಬುದ್ಧಿಮತ್ತೆ ಆಧಾರಿತ ಡಯಾಗ್ನೋಸ್ಟಿಕ್ಸ್, ಬಯೋಬ್ಯಾಂಕ್ ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಈ ಕೇಂದ್ರ ಒಳಗೊಳ್ಳಲಿದೆ’ ಎಂದರು.

‘ವೈದ್ಯಕೀಯ ಸೇವೆಗೆ ಉನ್ನತ ಸ್ಥಾನ’

‘ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಸೇವೆ ಮತ್ತು ಕರುಣೆಯ ಕ್ಷೇತ್ರವಾಗಿದೆ. ವೈದ್ಯರು ಸದಾ ನೈತಿಕತೆ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕು. ವೈದ್ಯರ ಮಾತುಗಳು ಭರವಸೆ ನೀಡಿದರೆ, ಅವರ ಸ್ಪರ್ಶ ನಂಬಿಕೆಯನ್ನು ಮೂಡಿಸುತ್ತದೆ. ಅವರ ನಿರ್ಧಾರಗಳು ಜೀವ ಉಳಿಸುವ ಸಾಮರ್ಥ್ಯವನ್ನು ಹೊಂದಿವೆ. ಭಾರತೀಯ ಸಂಸ್ಕೃತಿಯಲ್ಲಿ ಸೇವೆಗೆ ಅತ್ಯುನ್ನತ ಸ್ಥಾನವಿದೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕಿವಿಮಾತು ಹೇಳಿದರು.

‘ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ ಸೇರಿದಂತೆ ಭಾರತದ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳು ವಿಶ್ವದಾದ್ಯಂತ ಮನ್ನಣೆ ಪಡೆಯುತ್ತಿದ್ದು, ಆಧುನಿಕ ವೈದ್ಯಕೀಯ ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಸಮನ್ವಯಗೊಳಿಸುವ ಅಗತ್ಯವಿದೆ’ ಎಂದು ಅವರು ಅಭಿಪ್ರಾಯಪಟ್ಟರು.

> **ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡದ ಕೊನೆಯ ಬೆಂಚಿನ ವಿದ್ಯಾರ್ಥಿಗಳು, ಉತ್ತಮ ವೈದ್ಯರಾಗಿ ಯಶಸ್ವಿಯಾದ ನಿದರ್ಶನಗಳಿವೆ. ಇದಕ್ಕೆ ರೋಗಿಗಳ ಜತೆಗಿನ ಅವರ ಸಂವಹನ ಕಲೆ, ಆಪ್ತತೆ ಮುಖ್ಯ ಕಾರಣ**
> **ಡಾ. ಶರಣ ಪ್ರಕಾಶ್ ಪಾಟೀಲ,**
> ವೈದ್ಯಕೀಯ ಶಿಕ್ಷಣ ಸಚಿವ

ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಸಂಭ್ರಮಿಸಿದ ಕ್ಷಣ —ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

115 ಚಿನ್ನದ ಪದಕ ವಿತರಣೆ

ಘಟಿಕೋತ್ಸವದಲ್ಲಿ ಒಟ್ಟು 72,741 ವಿದ್ಯಾರ್ಥಿಗಳು ಪದವಿ ಪಡೆದರು. 71 ಸಂಶೋಧಕರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು. 103 ವಿದ್ಯಾರ್ಥಿಗಳು ಒಟ್ಟು 115 ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದರು. ಬೆಂಗಳೂರಿನ ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿಯ ವಿದ್ಯಾರ್ಥಿ ಸ್ಪಂದನಾ ಐ. ಅವರು ಮೂರು ಚಿನ್ನದ ಪದಕ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿ ಪ್ರಜ್ವಲ್ ಕಶ್ಯಪ್ ಅವರು ಎರಡು ಚಿನ್ನದ ಪದಕ ಮತ್ತು ಎರಡು ನಗದು ಬಹುಮಾನ ಸ್ವೀಕರಿಸಿದರು.

ಪ್ರೊ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ, ಡಾ.ಎ.ಸಿ.ಷಣ್ಮುಗಂ ಅವರಿಗೆ ‘ಗೌರವ ಡಾಕ್ಟರೇಟ್’ (ಡಾಕ್ಟರ್ ಆಫ್ ಸೈನ್ಸ್) ಪದವಿ ಪ್ರದಾನ ಮಾಡಲಾಯಿತು.

‘47ನೇ ವರ್ಷಕ್ಕೆ ಪದವಿ’

‘ವಿದ್ಯಾರ್ಥಿ ಜೀವನದಲ್ಲೇ ರಾಜಕೀಯ ಪ್ರವೇಶಿಸಿದ ಕಾರಣ ಪದವಿ ಪಡೆಯಲು ಸಾಧ್ಯವಾಗಿರಲಿಲ್ಲ. 2008ರಲ್ಲಿ ನನಗೆ 47 ವರ್ಷವಾದಾಗ ಮೈಸೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಪದವಿ ಪಡೆದ ಗಳಿಗೆ ನನ್ನ ಜೀವನದ ಅವಿಸ್ಮರಣೀಯ. ಬಂಗಾರಪ್ಪ, ಎಸ್.ಎಂ. ಕೃಷ್ಣ ಅವರ ಸರ್ಕಾರದಲ್ಲಿ ಸಚಿವನಾಗಿದ್ದರೂ, ಪದವಿ ಪಡೆದಾಗ ಆದ ಸಂತೋಷ ಬೇರೆ ಯಾವಾಗಲೂ ಆಗಿರಲಿಲ್ಲ’ ಎಂದು ಸ್ಮರಿಸಿದರು.

ದರ್ಶನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದಲ್ಲಿ, ‘ರೇಣುಕಸ್ವಾಮಿ ಅವರ ತಾಯಿ ರತ್ನಪ್ರಭಾ ಅವರನ್ನು ಪಾಟಿ ಸವಾಲಿಗೆ ಒಳಪಡಿಸಲು ನಿರಾಕರಿಸಲಾಗಿದೆ’ ಎಂದು ಆಕ್ಷೇಪಿಸಿ ಪ್ರಾಸಿಕ್ಯೂಷನ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಆರೋಪಿಗಳಾದ ಪವಿತ್ರಾಗೌಡ ಮತ್ತು ದರ್ಶನ್ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಪ್ರಾಸಿಕ್ಯೂಷನ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಭಾರತೀಯ ಸಾಕ್ಷ್ಯ ಅಧಿನಿಯಮ–1872ರ ಕಲಂ 154ರ ಅನುಸಾರ; ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಕರೆಸಿದ್ದ ಸಾಕ್ಷಿಯು (ರತ್ನಪ್ರಭಾ) ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಷನ್‌ಗೆ ವಿರುದ್ಧವಾಗಿ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಸಾಕ್ಷಿ ತನ್ನ ಹೇಳಿಕೆಯಿಂದ ಹಿಂದೆ ಸರಿದಾಗ, ನಮ್ಮ ಮನವಿಯ ಮೇರೆಗೆ ನ್ಯಾಯಾಲಯ ತನ್ನ ವಿವೇಚನೆಯನ್ನು ಬಳಸಿ ಪಾಟಿ ಸವಾಲು ನಡೆಸಲು ಅನುಮತಿ ನೀಡಬೇಕಿತ್ತು. ಆದರೆ, ನಮ್ಮ ಮನವಿಯನ್ನು ಸೆಷನ್ಸ್ ನ್ಯಾಯಾಲಯ ತಳ್ಳಿ ಹಾಕಿದೆ’ ಎಂದರು.

‘ಈ ಕುರಿತಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಸಿಟಿ ಸಿವಿಲ್ ಕೋರ್ಟ್‌ನ 57ನೇ ನ್ಯಾಯಾಲಯ 2026ರ ಜನವರಿ 17ರಂದು ತಿರಸ್ಕರಿಸಿದೆ. ಆದ್ದರಿಂದ, ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿ ರತ್ನಪ್ರಭಾ ಅವರನ್ನು ಪಾಟಿ ಸವಾಲಿಗೆ ಒಳಪಡಿಸಲು ಅನುಮತಿ ನೀಡಿ ಆದೇಶಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರತಿವಾದಿಗಳಾದ ಪವಿತ್ರಾ ಗೌಡ, ದರ್ಶನ್ ಮತ್ತು ಇತರ ಆರೋಪಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

‘ಸಮೀಕ್ಷೆ ವರದಿ ಬಹಿರಂಗ ಸಲ್ಲ’

ಬೆಂಗಳೂರು: ‘ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಿಂದ ಹೊರ ತೆರೆಯಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮೌಖಿಕ ನಿರ್ದೇಶನ ನೀಡಿದೆ.

ಸಮೀಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಹಿರಿಯ ವಕೀಲ ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಹಿಂದುಳಿದ ವರ್ಗಗಳ ಆಯೋಗ ತನ್ನ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಹಿಂದೆ ನ್ಯಾಯಾಲಯ ದತ್ತಾಂಶದಲ್ಲಿನ ಗೋಪ್ಯತೆ ಕಾಯ್ದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಸೋರಿಕೆಯಾಗಬಾರದು ಮತ್ತು ದತ್ತಾಂಶಗಳನ್ನು ಎಲ್ಲೂ ಹಂಚಿಕೊಳ್ಳಬಾರದು ಎಂದು ಆದೇಶಿಸಿತ್ತು. ಆದರೂ ಆಯೋಗ ವರದಿ ಸಲ್ಲಿಸಿದ ಬಳಿಕ ದತ್ತಾಂಶ ಸೋರಿಕೆಯಾಗಿದೆ. ಹಾಗಾಗಿ, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ‘ಹಿಂದುಳಿದ ವರ್ಗಗಳ ಆಯೋಗ ದತ್ತಾಂಶ ಹಂಚಿಕೊಂಡಿಲ್ಲ’ ಎಂದು ನ್ಯಾಯಪೀಠಕ್ಕೆ ಸಮಜಾಯಿಷಿ ನೀಡಿದರು.

ಅಂತಿಮವಾಗಿ, ‘ಮುಚ್ಚಿದ ಲಕೋಟೆಯಲ್ಲಿರುವ ವರದಿಯನ್ನು ತೆರೆಯಬಾರದು’ ಎಂದು ಸರ್ಕಾರಕ್ಕೆ ಮೌಖಿಕ ನಿರ್ದೇಶನ ನೀಡಿ ವಿಚಾರಣೆಯನ್ನು ಆಗಸ್ಟ್ 20ಕ್ಕೆ ಮುಂದೂಡಿತು.

ಲೋಕಾಯುಕ್ತ ದಾಳಿ: ಅಧಿಕಾರಿಗಳ ಆಸ್ತಿ ವಿವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಆಸ್ತಿ ಹೊಂದಿದ ಆರೋಪದಲ್ಲಿ ಲೋಕಾಯುಕ್ತ ಪೊಲೀಸರು ನಡೆಸಿದ ದಾಳಿಯ ವೇಳೆ, ಸರ್ಕಾರಿ ಅಧಿಕಾರಿಗಳು ತಮ್ಮ ಸಂಪಾದನೆಯ ಬಹುಪಾಲನ್ನು ಸ್ಥಿರಾಸ್ತಿಗಳ ಮೇಲೆ ಹೂಡಿಕೆ ಮಾಡಿರುವುದು ಪತ್ತೆಯಾಗಿದೆ. ಎಂಟೂ ಅಧಿಕಾರಿಗಳ ಮನೆಗಳು, ನಿವೇಶನ ಮತ್ತು ಕೃಷಿ ಜಮೀನಿನ ಮೌಲ್ಯ ಮೇಲೆ ₹22.73 ಕೋಟಿಯಷ್ಟಾಗುತ್ತದೆ. ಅಧಿಕಾರಿಗಳ ಆಸ್ತಿಯ ವಿವರ ಈ ಕೆಳಗಿನಂತಿವೆ.

ರಾಜಣ್ಣ ಎಸ್.ಎಲ್. ಹೆಚ್ಚುವರಿ ನಿರ್ದೇಶಕ, ನಗರ ಯೋಜನೆ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು	
₹3.89 ಕೋಟಿ ಮೌಲ್ಯದ 3 ನಿವೇಶನ, 2 ಮನೆ, 3 ಎಕರೆ ಕೃಷಿ ಜಮೀನು	
₹1.07 ಕೋಟಿ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು ಮತ್ತು ಬ್ಯಾಂಕ್ ಉಳಿತಾಯ	
₹4.97 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಉದಯ ಕುಮಾರ್ ಎಂ.ಬಿ. ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಬೆಸ್ಕಾಂ ಸಿ–07 ಉಪವಿಭಾಗ, ಯಲಹಂಕ, ಬೆಂಗಳೂರು	
₹2.66 ಕೋಟಿ ಮೌಲ್ಯದ 10 ನಿವೇಶನ, 1 ಮನೆ, 1 ಎಕರೆ ಕೃಷಿ ಜಮೀನು	
₹87.93 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು ಮತ್ತು ಬ್ಯಾಂಕ್ ಉಳಿತಾಯ	
₹3.54 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಹರ್ಷವರ್ಧನ ಪಿ.ಎನ್., ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ	
₹4.05 ಕೋಟಿ ಮೌಲ್ಯದ 4 ನಿವೇಶನ, 2 ಮನೆ	
₹80.03 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು ಮತ್ತು ಬ್ಯಾಂಕ್ ಉಳಿತಾಯ	
₹4.85 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಸಿದ್ದೇಶ್ವರ ಎನ್.ಹೆಬ್ಬಾಳ, ಮುಖ್ಯ ತಾಂತ್ರಿಕ ಎಂಜಿನಿಯರ್, ವಾಯವ್ಯ ಸಾರಿಗೆ, ಹುಬ್ಬಳ್ಳಿ	
₹1.65 ಕೋಟಿ ಮೌಲ್ಯದ 1 ನಿವೇಶನ, 2 ಮನೆ	
₹2.11 ಕೋಟಿ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು	
₹3.76 ಕೋಟಿ	ಆಸ್ತಿಯ ಒಟ್ಟು ಮೌಲ್ಯ

ಸಣ್ಣ ಕೆಂಚಪ್ಪ, ಸೂಪರಿಂಟೆಂಡೆಂಟ್ ಎಂಜಿನಿಯರ್, ಕೆಆರ್‌ಐಡಿಎಲ್, ಬೆಳಗಾವಿ	
₹2 ಕೋಟಿ ಮೌಲ್ಯದ 3 ಮನೆ, 31 ಎಕರೆ ಕೃಷಿ ಜಮೀನು	
₹97.12 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು	
₹2.97 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಕೃಷ್ಣ ನಾಯಕ್ ಎಲ್.ಎ., ಕಾರ್ಯದರ್ಶಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಚಿತ್ರದುರ್ಗ	
₹1.86 ಕೋಟಿ ಮೌಲ್ಯದ 7 ನಿವೇಶನ, 3 ಮನೆ, 2 ಎಕರೆ ಕೃಷಿ ಜಮೀನು	
₹83.94 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು	
₹2.70 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಮಾಣಿಕ್ ಎಸ್.ಕನಕಟ್ಟಿ, ಸೂಪರಿಂಟೆಂಡೆಂಟ್ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಕಲಬುರಗಿ	
₹3.14 ಕೋಟಿ ಮೌಲ್ಯದ 5 ನಿವೇಶನ, 3 ಮನೆ, 1 ವಾಣಿಜ್ಯ ಸಂಕೀರ್ಣ	
₹1.54 ಕೋಟಿ ಮೌಲ್ಯದ ಚಿನ್ನಾಭರಣ, ವಾಹನ, ಗೃಹೋಪಯೋಗಿ ವಸ್ತುಗಳು, ಬ್ಯಾಂಕ್ ಉಳಿತಾಯ	
₹4.68 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಕೆ.ಎಸ್.ಮೋಹನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ, ಚಿಕ್ಕಮಗಳೂರು	
₹3.45 ಕೋಟಿ ಮೌಲ್ಯದ 3 ನಿವೇಶನ, 2 ಮನೆ, 7 ಎಕರೆ ಕೃಷಿ ಜಮೀನು	
₹16.36 ಲಕ್ಷ ಚಿನ್ನಾಭರಣ, ವಾಹನಗಳು	
₹3.62 ಕೋಟಿ	ಆಸ್ತಿಯ ಒಟ್ಟು ಮೌಲ್ಯ

ನಿರೀಕ್ಷಣಾ ಜಾಮೀನು ರದ್ದು ಕೋರಿದ ಅರ್ಜಿ ವಿಚಾರಣೆ

ವಚನಾನಂದ ಶ್ರೀಗೆ ನೋಟಿಸ್

ಪ್ರಜಾವಾಣಿ ವಾರ್ತೆ

> **ಸೆಷನ್ಸ್ ಕೋರ್ಟ್ ನಡೆ ಆಘಾತಕಾರಿ. ಇಲ್ಲಿ ವಚನಾನಂದ ಸ್ವಾಮೀಜಿ ಪವರ್ ಕಾಣಿಸುತ್ತಿದೆ. ಪೋಕ್ಸೊ ಹಾಗೂ ಅತ್ಯಾಚಾರ ಪ್ರಕರಣಗಳಲ್ಲಿ ಈ ರೀತಿಯಾಗಕೂಡದು. ಇಂತಹ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಪ್ರಶ್ನೆಯೇ ಇರುವುದಿಲ್ಲ**
> **ನ್ಯಾ.ಎಂ.ನಾಗಪ್ರಸನ್ನ**

ಬೆಂಗಳೂರು: ಪೋಕ್ಸೊ ಕಾಯ್ದೆಯಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ವಿಚಾರಣಾ ನ್ಯಾಯಾಲಯದ ಕ್ರಮಕ್ಕೆ ಹೈಕೋರ್ಟ್ ತೀವ್ರ ಆಘಾತ ವ್ಯಕ್ತಪಡಿಸಿದೆ.

ನಿರೀಕ್ಷಣಾ ಜಾಮೀನು ರದ್ದು ಕೋರಿ ಸಂತ್ರಸ್ತ ಬಾಲಕನೊಬ್ಬನ ತಾಯಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಡಿ.ಆರ್.ರವಿಶಂಕರ್, ‘ವಿಚಾರಣಾ ನ್ಯಾಯಾಲಯ ನೀಡಿರುವ ಜಾಮೀನು ಆದೇಶದ 14ನೇ ಪ್ಯಾರಾ ಗಮನಿಸಿದರೆ, ಜಾಮೀನು ಮಂಜೂರು ಮಾಡಿರುವ ವಿಧಾನ ನಿಜಕ್ಕೂ ಆಘಾತಕಾರಿಯಾಗಿದೆ’ ಎಂದರು.

ವಿಚಾರಣಾ ನ್ಯಾಯಾಲಯದ ಆದೇಶದ ಮುಖ್ಯಾಂಶಗಳನ್ನು ನ್ಯಾಯಪೀಠಕ್ಕೆ ಓದಿ ಹೇಳಿದ ರವಿಶಂಕರ್, ‘ಮಠದ ಟ್ರಸ್ಟಿಗಳು, ಅವರ ಸಹವರ್ತಿಗಳು, ಭಕ್ತರು, ಮಕ್ಕಳು ಅಥವಾ ಅವರ ಪೋಷಕರು ನೀಡುವ ಯಾವುದೇ ದೂರು ಅಥವಾ ಪೋಕ್ಸೊ ಕಾಯ್ದೆಯ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಲಂ 4, 6, 8, 10 ಮತ್ತು 12ರ ಅಥವಾ ಸಂಬಂಧಿತ ನಿಬಂಧನೆಗಳ ಅಡಿ ಎಫ್‌ಐಆರ್ ದಾಖಲಾಗಿ, ಸ್ವಾಮೀಜಿಯನ್ನು ಬಂಧಿಸಿದರೆ ಅವರಿಂದ ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಹಾಗೂ ಒಬ್ಬರ ಖಾತರಿ ಪಡೆದು ಬಿಡುಗಡೆ ಮಾಡಬೇಕು ಎಂದು ಆದೇಶಿಸಲಾಗಿದೆ’ ಎಂದು ವಿವರಿಸಿದರು.

ಕಡತ ಪರಿಶೀಲಿಸಿದ ನ್ಯಾಯಪೀಠ ‘ದೂರು ದಾಖಲಾಗದೇ ಅಪರಾಧಗಳು ಹೇಗೆ ಬಂದವು’ ಎಂದು ಪ್ರಶ್ನಿಸಿತಲ್ಲದೆ, ಆರೋಪಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿತು. ಅಂತಿಮವಾಗಿ, ‘ಜಾಮೀನು ಪಡೆದಿರುವ ಆರೋಪಿಯ ವಾದ ಆಲಿಸದೆ ಯಾವುದೇ ಆದೇಶ ಹೊರಡಿಸಲಾಗದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಚನಾನಂದ ಸ್ವಾಮೀಜಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ.

‘2026ರ ಮೇ 7ರಂದು ದೂರು ನೀಡಲಾಗಿದ್ದು, ಮೇ 8ರಂದು ಎಫ್‌ಐಆರ್ ದಾಖಲಾಗಿದೆ. ಆದರೆ, ಅದಕ್ಕೂ ಮೊದಲೇ ಅಂದರೆ ಮೇ 6ರಂದೇ ದಾವಣಗೆರೆಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ’ ಎಂದು ಅರ್ಜಿದಾರರ ಆಕ್ಷೇಪ.

‘ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಪಬ್‌ನಲ್ಲಿ ಬೆಂಕಿ ಅವಘಡ ಪ್ರಕರಣಕ್ಕೆ ಸಂಬಂಧಿಸಿದಂತೆ ಅಬಕಾರಿ ಡಿ.ಸಿ. ಅಮಾನತಿಗೆ ಶಿಫಾರಸು ಮಾಡಲಾಗಿದೆ’ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿ ಇರುವ ಫಾಕ್ಸ್ ಡೆನ್ ಲಿಕ್ಕರ್ ಗ್ಯಾರೇಜ್‌ನ ‘ಮಾರಾ’ ರೆಸ್ಟೋ ಪಬ್‌ಗೆ ಮಂಗಳವಾರ ಭೇಟಿ ನೀಡಿ ಘಟನೆ ಸಂಬಂಧ ಮಾಹಿತಿ ಪಡೆದು, ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು.

ಡಾ.ಯತೀಂದ್ರ

‘ರೆಸ್ಟೋರೆಂಟ್ ನಡೆಸಲು ಮಾಲೀಕರು ಅನುಮತಿ ಪಡೆದಿರಲಿಲ್ಲ. ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಅನುಮತಿ ಇಲ್ಲದೆ ಕಾರ್ಯಾಚರಣೆ ನಡೆಸುತ್ತಿದ್ದರೂ ಕಣ್ಣುಮುಚ್ಚಿ ಕುಳಿತಿದ್ದ ಅಬಕಾರಿ ಡಿ.ಸಿ. ಅಮಾನತಿಗೆ ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ’ ಎಂದರು.

ರೆಸ್ಟೋರೆಂಟ್ ಅನಧಿಕೃತ: ಫಾಕ್ಸ್ ಡೆನ್ ಲಿಕ್ಕರ್ ಗ್ಯಾರೇಜ್‌ನ ‘ಮಾರಾ’ ರೆಸ್ಟೋ ಪಬ್ ಮೂರು ವರ್ಷದ ಹಿಂದೆ ಆರಂಭವಾಗಿದೆ. ಮಾಲೀಕ ಪ್ರೀತಂ ಪುನೀತ್ ಕಟ್ಟಡದಲ್ಲಿರುವ ಬಾರ್ ಹಾಗೂ ಮೊದಲನೇ ಮಹಡಿಯಲ್ಲಿರುವ ರೆಸ್ಟೋರೆಂಟ್‌ಗೆ ಪಾಲಿಕೆ ಹಾಗೂ ಅಬಕಾರಿ ಇಲಾಖೆಯಿಂದ ವ್ಯಾಪಾರ ಪರವಾನಗಿ (ಟ್ರೇಡ್ ಲೈಸೆನ್ಸ್) ಪಡೆದಿದ್ದರು. ಆದರೆ ಎರಡನೇ ಮಹಡಿಯಲ್ಲಿ ದಕ್ಷಿಣ ಆಫ್ರಿಕಾದ ಮಾರಾ ಜನಾಂಗದ ಶೈಲಿಯ ರೆಸ್ಟೋರೆಂಟ್ ಆರಂಭಿಸಿದ್ದು, ಅದಕ್ಕೆ ಯಾವುದೇ ಪರವಾನಗಿ ಪಡೆದಿಲ್ಲ ಎಂದು ಮೂಲಗಳು ತಿಳಿಸಿವೆ. ಮಾಲೀಕರ ವಿರುದ್ಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ವಿಡಿಯೊ ಪ್ರಸಾರ ವಿರುದ್ಧ ತಕ್ಷಣವೇ ಎಫ್‌ಐಆರ್‌ಗೆ ಸೂಚನೆ

ಫ್ಲಾಪ್ ಒಂದನೇ ಪುಟದಿಂದ...

ಎಲ್ಲ ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು. ಸಂತ್ರಸ್ತರ ಗುರುತು ಗೋಪ್ಯವಾಗಿ ಇರುವಂತೆ ನೋಡಿಕೊಳ್ಳಬೇಕು. ದೂರುದಾರರನ್ನು ಸೂಕ್ಷ್ಮವಾಗಿ ನಡೆಸಿಕೊಳ್ಳುವುದು ಮತ್ತು ಅವರು ಅವಮಾನಕ್ಕೀಡಾಗುವಂತಹ ಯಾವುದೇ ವರ್ತನೆ ತಪ್ಪಿಸಬೇಕು. ಸಾಧ್ಯವಾದರೆ, ಸಂತ್ರಸ್ತೆಯ ದೂರನ್ನು ಮಹಿಳಾ ಅಧಿಕಾರಿಯಿಂದಲೇ ದಾಖಲಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಎಫ್‌ಐಆರ್ ನೋಂದಣಿ ಮಾಡದಿರುವುದು ಅಥವಾ ‘ಪೂರ್ವಾನುಮತಿ’ ಎಂಬ ತಪ್ಪು ಕಾರಣದಿಂದ ವಿಳಂಬ ಮಾಡುವುದು ಕಂಡುಬಂದರೆ ಅಂತಹ ಲೋಪಗಳನ್ನು ಗಂಭೀರವಾಗಿ ಪರಿಗಣಿಸಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಜಯಮ್ಮ

ಬೆಂಗಳೂರು: ನಿರ್ಮಾಪಕ ಎಸ್.ಎ. ಚಿನ್ನೇಗೌಡ ಅವರ ಪತ್ನಿ, ನಟರಾದ ಶ್ರೀಮುರಳಿ ಮತ್ತು ವಿಜಯ ರಾಘವೇಂದ್ರ ಅವರ ತಾಯಿ ಜಯಮ್ಮ (75) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತಿ, ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ಜಯಮ್ಮ ಅವರು ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ವಸಂತ ನಗರದಲ್ಲಿನ ಸ್ವಗೃಹದಲ್ಲಿ ಮಧ್ಯಾಹ್ನ ಮೂರು ಗಂಟೆಯವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಹೆಬ್ಬಾಳದ ಚಿತಾಗಾರದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಕರ್ನಾಟಕ ಗೃಹ ಮಂಡಳಿ

3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/63/2026–27 **ದಿನಾಂಕ: 16–06–2026**

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ: ಪ್ರತಿಪಾಟಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರೊಂದಿಗೆ ಜಂಟಿ ಸಹಭಾಗಿತ್ವ ಯೋಜನೆಯಡಿ (Marketing JV) ಕೊಡಗು ಜಿಲ್ಲೆ, ಮಡಿಕೇರಿ ನಗರದ ಕೆ. ನಿಡುಗಣೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳನ್ನು ಒಳಗೊಂಡಂತೆ ಒಟ್ಟು 94.45 ಎಕರೆ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16–06–2026 ಆಗಿರುತ್ತದೆ. **ಸಾರ್ವಜನಿಕರ ಹಿತದೃಷ್ಟಿಯಿಂದ ಅರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕ: 04–07–2026 ರವರೆಗೆ ಕಾಲಾವಕಾಶ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 10–05–2026ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 04–07–2026.**

ಹೆಚ್ಚಿನ ಮಾಹಿತಿಗಾಗಿ ಜಂಟಿ ಸಹಭಾಗಿತ್ವ ಯೋಜನೆ ಪಾಲುದಾರರ ಸಂಸ್ಥೆಯ ಶ್ರೀ **ದಯಾನಂದ ಕೆ.ಬಿ, ಮ್ಯಾನೇಜರ್, ದೂರವಾಣಿ ಸಂಖ್ಯೆ: 9739946532, ಶ್ರೀ ಗುರುರಾಜ್, ಸೈಟ್ ಇಂಜಿನಿಯರ್, ದೂರವಾಣಿ ಸಂಖ್ಯೆ: 9686202507** ಮತ್ತು ಹಂಚಿಕೆ ಹಾಗೂ ಅರ್ಜಿ ಸಲ್ಲಿಕೆ ಸಂಬಂಧ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಂದಾಯ ಅಧಿಕಾರಿಗಳು, ಕ.ಗೃ.ಮಂ., ಕೊಡಗು ಉಪ–ವಿಭಾಗ, ಮೈಸೂರು ಇವರನ್ನು ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ: 0821–2343094/0821–2543237** ಹಾಗೂ ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: **080–22273511, 307, 309** ಮೂಲಕ ಸಂಪರ್ಕಿಸುವುದು.

ಸಹಿ/–
ಕಾರ್ಯದರ್ಶಿಗಳು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/1181/ಎಂಎಎ/2026–27

Infosys Limited

Navigate your next

Corporate Identification Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: +91 80 2852 0261, Fax: +91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered shareholder(s) thereof have applied for the issue of duplicate share certificate(s).

Notice is hereby given that the Company shall proceed with issuance of the securities in dematerialized form in lieu of duplicate share certificate(s) unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

FOLIO NO.	REGISTERED SHAREHOLDER(S)	CERTIFICATE NO.	DISTINCTIVE NOS.		EQUITY SHARES
			FROM	TO	
INF100010	V M SUNDARAM	145476	665683	665882	200
		151216	277499517	277499716	200
		600184	575025054	575025453	400
		1000186	1150057338	1150058137	800
		2386564	4479950396	4479951995	1600
ITL000534	V M SUNDARAM R V SUBRAMANIAM	150076	266546091	266546690	600
		151183	277460015	277460614	600

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company shall proceed with issuance of securities in dematerialized form without further reference in lieu of duplicate share certificate(s) to the person listed above and no further claim would be entertained from any other person(s).

Registered Office
Electronics City,
Hosur Road,
Bengaluru-560 100.

June 16, 2026
Bengaluru, India

For Infosys Limited
sd/-
Manikantha AGS
Company Secretary
Membership No. A21918

ಉದ್ಯೋಗ ವಾಣಿ

BEL EDUCATIONAL INSTITUTIONS

Jalahalli Post, Bengaluru – 560013

Bharat Electronics Educational Institutions(BEEI) is one of the premiere institutions having a rich legacy of providing quality education.

BEEI requires well-qualified and experienced Teachers (PRT, TGT, GPT, PGT) on Temporary Basis.

Candidates having relevant experience only need to apply on or before 07.07.2026.

For detailed advertisement visit our website

www.beei.edu.in **www.bel-india.in**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ರಕ್ಷಣಾ ಮಂತ್ರಾಲಯದ ಅಧೀನ ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯ ಎನ್ ಎಸ್ (ಎಸ್ & ಸಿ ಎಸ್) ಎಸ್ ಬಿ ಯು ವಿಗೆ ತಾತ್ಕಾಲಿಕ ಆಧಾರದ ಮೇಲೆ ಉತ್ಕೃಷ್ಟ ಸಿಬ್ಬಂದಿಯ ಅವಶ್ಯಕತೆ ಇದೆ.

ಹುದ್ದೆ/ ಹುದ್ದೆಯ ಕೋಡ್	ವಿದ್ಯಾರ್ಹತೆ	ದಿನಾಂಕ: 01.06.2026 ರಂತೆ ಸಂಗತ ಅರ್ಹತೋತ್ತರ ಅನುಭವ	ಹುದ್ದೆಗಳ ಸಂಖ್ಯೆ ಮತ್ತು ಮೀಸಲಾತಿ	ಪ್ರತಿ ತಿಂಗಳ ಕ್ರೋಢೀಕೃತ ಸಂಭಾವನೆ	ನಿಯೋಜನೆ ಸ್ಥಳ
ಪರಿಯೋಜನ ಅಭಿಯಂತರ–I PRE-I (SSI-2026)	ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್/ ಎಲೆಕ್ಟ್ರಿಕಲ್/ಮೆಕ್ಯಾನಿಕಲ್/ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಪೂರ್ಣಕಾಲಿಕ ಬಿ.ಇ./ ಬಿ.ಟೆಕ್.	ಎಲೆಕ್ಟ್ರಾನಿಕ್ಸ್ /ಎಲೆಕ್ಟ್ರಿಕಲ್ ಸಿಸ್ಟಮ್‌ಗಳ ಸ್ಥಾಪನೆ ಹಾಗೂ ಕಮಿಷನಿಂಗ್ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷಗಳ ಅರ್ಹತೋತ್ತರ ಅನುಭವ	ಸಾಮಾನ್ಯ–03 ಇ.ಹಿ.ವ–01 ಪ.ಜಾ – 01 ಒಟ್ಟು – 05	ಮೊದಲನೇ ವರ್ಷ– ರೂ.40,000/– ಎರಡನೇ ವರ್ಷ– ರೂ.45,000/– ಮೂರನೇ ವರ್ಷ– ರೂ.50,000/– ನಾಲ್ಕನೇ ವರ್ಷ– ರೂ. 55,000/–	ನವ ದೆಹಲಿ, ಗುರ್ಗಾಂವ್, ಗಾಂಧಿನಗರ್, ವೈಜಾಗ್, ಕೋಲ್ಕತ್ತಾ, ಕೊಚ್ಚಿ, ಚೆನ್ನೈ, ಪೋರ್ಟ್ ಬ್ಲೇರ್ ಮತ್ತು ಮುಂಬೈ
ಪರಿಯೋಜನ ಅಭಿಯಂತರ–I PRE-I (TSCS-2026)	ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್/ಎಲೆಕ್ಟ್ರಿಕಲ್/ ಇಂಸ್ಟ್ರುಮೆಂಟೇಷನ್ ವಿಷಯದಲ್ಲಿ ಪೂರ್ಣಕಾಲಿಕ ಬಿ.ಇ./ಬಿ. ಟೆಕ್	ಎಲೆಕ್ಟ್ರಾನಿಕ್ಸ್/ಎಲೆಕ್ಟ್ರಿಕಲ್ ಸಿಸ್ಟಮ್‌ಗಳ ಸ್ಥಾಪನೆ ಹಾಗೂ ಕಮಿಷನಿಂಗ್ ಮತ್ತು ಯಾವುದೇ ಪರಿಯೋಜನೆಗಳಿಗೆ ಎಲೆಕ್ಟ್ರಾನಿಕ್ಸ್/ ಎಂಬೆಡೆಡ್ ನ ಏಕೀಕರಣದ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷಗಳ ಅರ್ಹತೋತ್ತರ ಅನುಭವ	ಸಾಮಾನ್ಯ–01 ಇ.ಹಿ.ವ.–01 ಇಡಬ್ಲ್ಯೂ ಎಸ್–02 ಒಟ್ಟು 04	ಮೊದಲನೇ ವರ್ಷ– ರೂ.40,000/– ಎರಡನೇ ವರ್ಷ– ರೂ.45,000/– ಮೂರನೇ ವರ್ಷ– ರೂ.50,000/– ನಾಲ್ಕನೇ ವರ್ಷ– ರೂ. 55,000/–	ವೈಜಾಗ್, ಕೋಲ್ಕತ್ತಾ

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ **04.07.2026** ಆಗಿರುತ್ತದೆ. ಅರ್ಜಿ ಸಲ್ಲಿಸಲು ವಿಸ್ತೃತ ಜಾಹೀರಾತು ಮತ್ತು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಅಧಿಕೃತ ವೆಬ್‌ಸೈಟ್ **www.bel-india.in**. ನ **CAREERS** ಲಿಂಕ್ ನಲ್ಲಿ ವೀಕ್ಷಿಸಿರಿ.

ದಿನಾಂಕ: 17.06.2026

ಸಹಿ /–
ವ್ಯವಸ್ಥಾಪಕರು – ಮಾ.ಸಂ.(ಎನ್ ಎಸ್ – ಎಸ್ & ಸಿ ಎಸ್)

ಪ್ರಾತಿನಿಧಿಕ ಚಿತ್ರ

ಕಂಪ್ಯೂಟರ್ ‘ಇತಿಹಾಸಕಾರ’ ಓಎಸ್ ಮ್ಯೂಸಿಯಂ

• ಕೃಷ್ಣಭಟ್

ತಂತ್ರಜ್ಞಾನಲೋಕದಲ್ಲಿ ದಿನಕ್ಕೊಂದು ಹೊಸ ಆವಿಷ್ಕಾರಗಳು ನಡೆಯುತ್ತಲೇ ಇರುತ್ತವೆ. ಹೊಸ ಆಪರೇಟಿಂಗ್ ಸಿಸ್ಟಮ್‌ಗಳು ಮಾರುಕಟ್ಟೆಗೆ ಬಂದಾಗ ಹಳೆಯವು ಇತಿಹಾಸದ ಪುಟಗಳನ್ನು ಸೇರುತ್ತವೆ. ವಿಂಡೋಸ್ 95, ಕ್ಲಾಸಿಕ್ ಮ್ಯಾಕ್ ಓಎಸ್ ಅಥವಾ ಹಳೆಯ ಮೊಬೈಲ್ ಆಪರೇಟಿಂಗ್ ಸಿಸ್ಟಮ್‌ಗಳಾದ ಪಾಮ್ ಓಎಸ್ ಮತ್ತು ಆರಂಭಿಕ ಆ್ಯಂಡ್ರಾಯ್ಡ್ ಆವೃತ್ತಿಗಳನ್ನು ಇಂದು ಬಳಸಬೇಕೆಂದರೆ ಅದು ಅಷ್ಟು ಸುಲಭದ ಮಾತಲ್ಲ. ಆದರೆ, ಕಂಪ್ಯೂಟರ್ ಇತಿಹಾಸದ ಆರಂಭದಿಂದ ಇಂದಿನವರೆಗಿನ ಇಡೀ ಪ್ರಯಾಣವನ್ನು ನಿಮ್ಮ ಕಣ್ಣೆದುರು ತರಲು ಡೆವಲಪರ್ ಒಬ್ಬರು ಅದ್ಭುತವಾದ ವರ್ಚುವಲ್ ಓಎಸ್ ಮ್ಯೂಸಿಯಂ ಒಂದನ್ನು ಸೃಷ್ಟಿಸಿದ್ದಾರೆ. 1948ರ ಜಗತ್ತಿನ ಮೊದಲ ಪ್ರೋಗ್ರಾಮ್ ಸಂಗ್ರಹಿಸುವ ಕಂಪ್ಯೂಟರ್‌ನಿಂದ ಹಿಡಿದು ಆಧುನಿಕ ತಂತ್ರಜ್ಞಾನದವರೆಗಿನ ಇತಿಹಾಸವನ್ನು ಒಂದೇ ಸೂರಿನಡಿ ತಂದಿರುವ ಈ ಡಿಜಿಟಲ್ ಮ್ಯೂಸಿಯಂ ತಂತ್ರಜ್ಞಾನ ಆಸಕ್ತರ ಗಮನ ಸೆಳೆಯುತ್ತಿದೆ.

ಏನಿದು ವರ್ಚುವಲ್ ಓಎಸ್ ಮ್ಯೂಸಿಯಂ?

ಆಂಡ್ರ್ಯೂ ವಾರ್ಕೆಂಟಿನ್ ಎಂಬ ಸಾಫ್ಟ್‌ವೇರ್ ಡೆವಲಪರ್ ಒಬ್ಬರು ಕಳೆದ 2003ರಿಂದ, ಎಂದರೆ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಜಗತ್ತಿನ ವಿವಿಧ ಅಪರೂಪದ ಆಪರೇಟಿಂಗ್ ಸಿಸ್ಟಮ್‌ಗಳ ಎಮ್ಯುಲೇಟರ್ ಇಮೇಜ್‌ಗಳನ್ನು ಸಂಗ್ರಹಿಸುತ್ತಿದ್ದರು. ಇವೆಲ್ಲವನ್ನೂ ಕ್ರೋಡೀಕರಿಸಿ, ಅವರು ಒಂದು ಲಿನಕ್ಸ್ ವರ್ಚುವಲ್ ಮಷಿನ್ ರೂಪದಲ್ಲಿ ಪ್ಯಾಕೇಜ್ ಮಾಡಿದ್ದಾರೆ. ಇದನ್ನು ಯಾವುದೇ ಸಾಮಾನ್ಯ ಲ್ಯಾಪ್‌ಟಾಪ್‌ನಲ್ಲಿ ರನ್ ಮಾಡಬಹುದಾಗಿದ್ದು, ಇದರೊಳಗೆ ಬರೋಬ್ಬರಿ 1,700ಕ್ಕೂ ಹೆಚ್ಚು ಪ್ರಿ-ಇನ್‌ಸ್ಟಾಲ್ಡ್ ಆಪರೇಟಿಂಗ್ ಸಿಸ್ಟಮ್‌ಗಳು ಅಡಗಿವೆ! ಇದರಲ್ಲಿ 250ಕ್ಕೂ ಹೆಚ್ಚು ವಿಭಿನ್ನ ಹಾರ್ಡ್‌ವೇರ್ ಪ್ಲಾಟ್‌ಫಾರ್ಮ್‌ಗಳಿಗೆ ಸೇರಿದ 570ಕ್ಕೂ ಹೆಚ್ಚು ವಿಶಿಷ್ಟ ಓಎಸ್‌ಗಳನ್ನು ಗ್ರಾಹಕರು ಬಳಸಬಹುದಾಗಿದೆ.

‘ಮ್ಯಾಂಚೆಸ್ಟರ್ ಬೇಬಿ’

ಈ ಮ್ಯೂಸಿಯಂನ ಅತ್ಯಂತ ಆಕರ್ಷಕ ಭಾಗವೆಂದರೆ ಇದರ ವ್ಯಾಪ್ತಿ. ಜಗತ್ತಿನ ಅತ್ಯಂತ ಮೊದಲ ಸಾಫ್ಟ್‌ವೇರ್ ಸಂಗ್ರಹಶಕ್ತಿಯುಳ್ಳ ಕಂಪ್ಯೂಟರ್ ಎಂದೇ ಪ್ರಸಿದ್ಧಿಯಾಗಿರುವ 1948ರ ‘ಮ್ಯಾಂಚೆಸ್ಟರ್ ಬೇಬಿ’ಗೆ ಬರೆದಿದ್ದ ಸಾಫ್ಟ್‌ವೇರ್‌ನಿಂದ ಹಿಡಿದು, ಇತ್ತೀಚಿನ ಆರಂಭಿಕ ಆ್ಯಂಡ್ರಾಯ್ಡ್ ಮತ್ತು ಐಒಎಸ್ ವರೆಗಿನ ಓಎಸ್‌ಗಳು ಇದರಲ್ಲಿ ಲಭ್ಯವಿವೆ. ಡೆಸ್ಕ್‌ಟಾಪ್ ಮಾದರಿಯ ಗ್ರಾಫಿಕಲ್ ಯೂಸರ್ ಇಂಟರ್‌ಫೇಸ್ ಹೊಂದಿದ್ದ ಜಗತ್ತಿನ ಮೊದಲ ಓಎಸ್ ಎನ್ನಲಾದ ‘ಕ್ಸೆರಾಕ್ಸ್ ಸ್ಟಾರ್ ಪೈಲಟ್’ ಕೂಡ ಈ ಮ್ಯೂಸಿಯಂನಲ್ಲಿದೆ.

ನಾವು ಸಾಮಾನ್ಯವಾಗಿ ಕೇಳಿರುವ ವಿಂಡೋಸ್ 1.0 ಆವೃತ್ತಿಯಿಂದ ಹಿಡಿದು ಮೈಕ್ರೋಸಾಫ್ಟ್‌ನ ಆರಂಭಿಕ ಲಾಂಗ್‌ಹಾರ್ನ್ ಬೀಟಾ ಆವೃತ್ತಿಗಳು, ಆಪಲ್‌ನ ಕ್ಲಾಸಿಕ್ ಮ್ಯಾಕ್ ಓಎಸ್, ಮ್ಯಾಕ್ ಓಎಸ್ ಎಕ್ಸ್ 10.5 ಪಿಸಿ ಹಾಗೂ ಬಿಓಎಸ್, ನೆಕ್ಸ್ಟ್‌ಸ್ಟೆಪ್, ನ್ಯೂಟನ್ ಓಎಸ್‌ನಂತಹ ಪ್ರಮುಖ ಓಎಸ್‌ಗಳು ಇಲ್ಲಿವೆ. ಇದರೊಂದಿಗೆ ಟೆಂಪಲ್ ಓಎಸ್, ಪ್ಲಾನ್ 9, ಕ್ಯೂಎನ್‌ಎಕ್ಸ್, ಜೀಟಾಲಿಸ್ಪ್, ಓಬೆರಾನ್‌ನಂತಹ ವಿಚಿತ್ರ ಮತ್ತು ಅಪರೂಪದ ಆಪರೇಟಿಂಗ್ ಸಿಸ್ಟಮ್‌ಗಳೂ ಇಲ್ಲಿವೆ. ಹಳೆಯ ಮೈನ್‌ಫ್ರೇಮ್ ಯುಗದ ಸಿಟಿಎಸ್‌ಎಸ್, ಎಂವಿಎಸ್, ಮಲ್ಟಿಕ್ಸ್ ಮತ್ತು ಟಾಪ್ಸ್-10/20 ಸಾಫ್ಟ್‌ವೇರ್‌ಗಳನ್ನು ಕಣ್ತುಂಬಿಕೊಳ್ಳಬಹುದು. ಹಳೆಯ ಹೋಮ್ ಕಂಪ್ಯೂಟರ್ ಪ್ರೇಮಿಗಳಿಗಾಗಿ ಬಿಬಿಸಿ ಮೈಕ್ರೋ, ಝಡ್‌ಎಕ್ಸ್ ಸ್ಪೆಕ್ಟ್ರಮ್, ಕೊಮೊಡೋರ್ 8-ಬಿಟ್ಸ್, ಎಂಎಸ್‌ಎಕ್ಸ್ ಹಾಗೂ ಅಟಾರಿ 8-ಬಿಟ್ ಕಂಪ್ಯೂಟರ್‌ಗಳ ಓಎಸ್‌ಗಳನ್ನು ಸಹ ಇದರಲ್ಲಿ ಜೋಡಿಸಲಾಗಿದೆ.

ಸುಲಭ ಬಳಕೆ

ಸಾಮಾನ್ಯವಾಗಿ ಹಳೆಯ ಆಪರೇಟಿಂಗ್ ಸಿಸ್ಟಮ್ ಒಂದನ್ನು ಇಂದಿನ ಕಂಪ್ಯೂಟರ್‌ನಲ್ಲಿ ರನ್ ಮಾಡಬೇಕೆಂದರೆ ಸಾಕಷ್ಟು ತಾಂತ್ರಿಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಎಮ್ಯುಲೇಟರನ್ನು ಹುಡುಕುವುದು, ಇನ್‌ಸ್ಟಾಲೇಶನ್ ಮೀಡಿಯಾ ಕಾನ್ಫಿಗರ್ ಮಾಡುವುದು, ಹಾರ್ಡ್‌ವೇರ್ ಹೊಂದಾಣಿಕೆಗಳನ್ನು ಪರಿಶೀಲಿಸುವುದು ತುಂಬಾ ತಲೆನೋವಿನ ಕೆಲಸ. ಆದರೆ ಆಂಡ್ರ್ಯೂ ವಾರ್ಕೆಂಟಿನ್ ಈ ಎಲ್ಲಾ ಕಠಿಣ ಕೆಲಸಗಳನ್ನು ತಾವೇ ನಿಭಾಯಿಸಿ ಬಳಕೆದಾರರಿಗೆ ಸಿದ್ಧ ರೂಪದಲ್ಲಿ ನೀಡಿದ್ದಾರೆ. ಬಳಕೆದಾರರು ಕೇವಲ ಲಾಂಚರ್ ಓಪನ್ ಮಾಡಿ, ತಮಗೆ ಬೇಕಾದ ಓಎಸ್ ಅನ್ನು ಆಯ್ಕೆ ಮಾಡಿ ಕ್ಲಿಕ್ ಮಾಡಿದರೆ ಸಾಕು, ಅದು ತಕ್ಷಣವೇ ರನ್ ಆಗುತ್ತದೆ. ಒಂದು ವೇಳೆ ಓಎಸ್ ಬಳಸುವಾಗ ಏನಾದರೂ ದೋಷ ಉಂಟಾದರೆ, ‘ಸ್ನ್ಯಾಪ್‌ಶಾಟ್’ ವೈಶಿಷ್ಟ್ಯದ ಮೂಲಕ ಅದನ್ನು ಮೊದಲಿನ ಸ್ಥಿತಿಗೆ ತರಬಹುದು. ಈ ವರ್ಚುವಲ್ ಮಷಿನ್ QEMU, ವರ್ಚುವಲ್ ಬಾಕ್ಸ್ ಅಥವಾ UTM ನಂತಹ ಸಾಫ್ಟ್‌ವೇರ್‌ಗಳ ಮೇಲೆ ಚಲಿಸುತ್ತದೆ ಹಾಗೂ ವಿಂಡೋಸ್, ಮ್ಯಾಕ್ ಮತ್ತು ಲಿನಕ್ಸ್ ಬಳಕೆದಾರರಿಗೆ ಸೂಕ್ತವಾದ ಇನ್‌ಸ್ಟಾಲರ್‌ಗಳನ್ನು ಹೊಂದಿದೆ.

ಸಾಮರ್ಥ್ಯ–ಮಿತಿಗಳು

ಈ ವರ್ಚುವಲ್ ಮ್ಯೂಸಿಯಂ ನಿಮ್ಮ ಕಂಪ್ಯೂಟರ್‌ನಲ್ಲಿ ದೊಡ್ಡ ಮಟ್ಟದ ಜಾಗವನ್ನು ಕೇಳುತ್ತದೆ. ಇದರ ಸಂಪೂರ್ಣ ಆಫ್‌ಲೈನ್ ಆವೃತ್ತಿಯು ಜಿಪ್ ಮಾಡಿದಾಗ 121GB ಗಾತ್ರ ಹೊಂದಿದ್ದು, ಅದನ್ನು ಅನ್‌ಪ್ಯಾಕ್ ಮಾಡಿದಾಗ ಬರೋಬ್ಬರಿ 174GB ಜಾಗವನ್ನು ಆಕ್ರಮಿಸಿ ಕೊಳ್ಳುತ್ತದೆ. ಆದರೆ, ಎಲ್ಲರಿಗೂ ಇಷ್ಟು ದೊಡ್ಡ ಫೈಲ್ ಡೌನ್‌ಲೋಡ್ ಮಾಡಲು ಸಾಧ್ಯವಾಗದಿರಬಹುದು ಎಂಬ ಕಾರಣಕ್ಕೆ 14GBಯ ‘ಲೈಟ್’ ಆವೃತ್ತಿಯನ್ನೂ ಬಿಡುಗಡೆ ಮಾಡಲಾಗಿದೆ. ಈ ಆವೃತ್ತಿಯಲ್ಲಿ ನೀವು ಮೊದಲಬಾರಿಗೆ ಯಾವುದೇ ಓಎಸ್ ಅನ್ನು ಬೂಟ್ ಮಾಡಿದಾಗ, ಅದು ಇಂಟರ್‌ನೆಟ್ ಮೂಲಕ ಅಗತ್ಯ ಫೈಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುತ್ತದೆ.

ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಈ ಪ್ರಾಜೆಕ್ಟ್‌ಗೆ ಕೆಲವು ಮಿತಿಗಳಿವೆ. ಪ್ರಸ್ತುತ ಈ ಹೋಸ್ಟ್ ವಿಎಂ ಕೇವಲ x86 ಪ್ರೊಸೆಸರ್ ಆಧಾರಿತ ಕಂಪ್ಯೂಟರ್‌ಗಳಿಗೆ ಮಾತ್ರ ಸೂಕ್ತವಾಗಿದೆ. ಹಾಗಾಗಿ, ಆಪಲ್ ಸಿಲಿಕಾನ್ (M1, M2 ಇತ್ಯಾದಿ) ಅಥವಾ ಎಆರ್‌ಎಮ್ ಪ್ರೊಸೆಸರ್ ಹೊಂದಿರುವ ಆಧುನಿಕ ಲ್ಯಾಪ್‌ಟಾಪ್‌ಗಳಲ್ಲಿ ಇದು ಸ್ವಲ್ಪ ನಿಧಾನವಾಗಿ ಚಲಿಸಬಹುದು. ಅಲ್ಲದೆ ಇದು ಪ್ರಾಥಮಿಕ ಬಿಡುಗಡೆಯಾಗಿರುವುದರಿಂದ, ಕೆಲವು ಓಎಸ್‌ಗಳು ಕೇವಲ ನಿರ್ದಿಷ್ಟ ಎಮ್ಯುಲೇಟರ್ ಬಿಲ್ಡ್‌ಗಳಲ್ಲಿ ಮಾತ್ರ ಕೆಲಸ ಮಾಡುತ್ತವೆ. ಮತ್ತೊಂದು ಮುಖ್ಯ ವಿಷಯವೆಂದರೆ, ಈ ಓಎಸ್‌ಗಳೊಂದಿಗೆ ಅವುಗಳು ಮೂಲತಃ ಬಿಡುಗಡೆಯಾದಾಗ ಇದ್ದ ಕ್ಯಾಲ್ಕುಲೇಟರ್, ಟೆಕ್ಸ್ಟ್ ಎಡಿಟರ್‌ನಂತಹ ಬೇಸಿಕ್ ಆ್ಯಪ್‌ಗಳು ಮಾತ್ರ ಸಿಗುತ್ತವೆ. ಹೆಚ್ಚುವರಿ ಅಪ್ಲಿಕೇಶನ್‌ಗಳು ಬೇಕಿದ್ದರೆ ಅವುಗಳನ್ನು ಹುಡುಕಿ ನಾವೇ ಇನ್‌ಸ್ಟಾಲ್ ಮಾಡಿಕೊಳ್ಳಬೇಕಿರುತ್ತದೆ.

ಕಂಪ್ಯೂಟರ್‌ಲೋಕ ನಡೆದು ಬಂದ ಹಾದಿಯನ್ನು ತಿಳಿಯಲು ಬಯಸುವ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಮತ್ತು ಹಳೆಯ ನೆನಪುಗಳನ್ನು ಮೆಲುಕು ಹಾಕುವ ತಂತ್ರಜ್ಞಾನ ಪ್ರಿಯರಿಗೆ ಈ ‘ವರ್ಚುವಲ್ ಓಎಸ್ ಮ್ಯೂಸಿಯಂ’ ಅತ್ಯಮೂಲ್ಯ ನಿಧಿ.

ಸೂರ್ಯನ ‘ಸಮಯಪ್ರಜ್ಞೆ’

ಭೂಮಿಗೆ ಅಪ್ಪಳಿಸುವ ಸೌರ ಬಿರುಗಾಳಿಯ ತೀವ್ರತೆ ನಿರ್ಧಾರವಾಗುವುದು ಹೇಗೆ?

• ಸುಧೀರ ಎಚ್.ಎಸ್.

ನಾವು ದಾರಿಯನ್ನು ಹುಡುಕಲು ಮೊಬೈಲ್‌ನಲ್ಲಿ ಬಳಸುವ ಜಿಪಿಎಸ್ (GPS) ವ್ಯವಸ್ಥೆ ಇದ್ದಕ್ಕಿದ್ದಂತೆ ಕೈಕೊಟ್ಟರೆ ಅಥವಾ ವಿಮಾನಗಳ ಸಂಪರ್ಕ ಕಡಿತಗೊಂಡರೆ ಏನಾಗಬಹುದು? ಆ ಕ್ಷಣ ಇಡೀ ಜಗತ್ತೇ ಸ್ತಬ್ಧವಾಗಬಹುದು. ಇಂತಹ ಆತಂಕಕಾರಿ ಬದಲಾವಣೆಗೆ ಸೂರ್ಯನಿಂದ ಏಳುವ ಸೌರ ಬಿರುಗಾಳಿಗಳಿಂದ (Solar Storms) ಉಂಟಾಗುತ್ತದೆ. ಆದರೆ, ಈ ಬಿರುಗಾಳಿಗಳು ಭೂಮಿಗೆ ಎಷ್ಟು ಹಾನಿಯನ್ನು ಮಾಡಬಹುದು ಎನ್ನುವುದು ಕೇವಲ ಅದರ ಶಕ್ತಿಯ ಮೇಲಷ್ಟೇ ಅಲ್ಲ; ಅದು ಭೂಮಿಯ ಯಾವ ಭಾಗಕ್ಕೆ, ಯಾವ ಸಮಯದಲ್ಲಿ ಅಪ್ಪಳಿಸುತ್ತದೆ ಎನ್ನುವುದರ ಮೇಲೂ ನಿರ್ಧಾರವಾಗುತ್ತದೆ, ಗೊತ್ತೇ? ಹೌದು, ಭಾರತೀಯ ವಿಜ್ಞಾನಿಗಳು ನಡೆಸಿರುವ ಹೊಸ ಸಂಶೋಧನೆಯೊಂದು ಬಾಹ್ಯಾಕಾಶ ಹವಾಮಾನದ ಈ ರಹಸ್ಯವನ್ನು ಬಯಲಿಗೆಳೆದಿದೆ.

ನಮ್ಮ ಬೆಂಗಳೂರಿನಲ್ಲಿರುವ ಇಸ್ರೊ ಸಂಸ್ಥೆಯಾಗಲಿ ಅಥವಾ ದೇಶದ ಪ್ರಮುಖ ಸಂಶೋಧನಾ ಸಂಸ್ಥೆಗಳಾಗಲಿ, ಬಾಹ್ಯಾಕಾಶದ ಹವಾಮಾನದ ಮೇಲೆ ಸದಾ ಕಣ್ಣಿಟ್ಟಿರುತ್ತವೆ. ಇತ್ತೀಚೆಗೆ ಸಿಎಸ್‌ಐಆರ್-ರಾಷ್ಟ್ರೀಯ ಭೌತಿಕ ಪ್ರಯೋಗಾಲಯ, ಅಕಾಡೆಮಿ ಆಫ್ ಸೈಂಟಿಫಿಕ್ ಅಂಡ್ ಇನ್ನೋವೇಟಿವ್ ರಿಸರ್ಚ್ ಮತ್ತು ತಮಿಳುನಾಡಿನ ಶಾಸ್ತ್ರ ವಿಶ್ವವಿದ್ಯಾಲಯದ ವಿಜ್ಞಾನಿಗಳು ಒಟ್ಟಾಗಿ ಈ ಅಧ್ಯಯನ ನಡೆಸಿದ್ದಾರೆ. ತಮಿಳುನಾಡಿನ ತಂಜಾವೂರಿನಲ್ಲಿ ವಿಶೇಷ ಜಿಪಿಎಸ್ ರಿಸೀವರ್ ಕೇಂದ್ರವನ್ನು ಸ್ಥಾಪಿಸಿ, 2023ರ ಮಾರ್ಚ್‌ನಿಂದ 2024ರ ಮೇ ಅವಧಿಯಲ್ಲಿ ಸಂಭವಿಸಿದ ಮೂರು ಭೀಕರ ಸೌರ ಬಿರುಗಾಳಿಗಳನ್ನು ಇವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಭಾರತದ ದಕ್ಷಿಣ ಭಾಗ, ಅಂದರೆ ನಮ್ಮ ಕರ್ನಾಟಕ, ಕೇರಳ ಮತ್ತು ತಮಿಳುನಾಡು ಪ್ರದೇಶಗಳು ಭೂಮಿಯ ಕಾಂತೀಯ ಸಮಭಾಜಕ ವೃತ್ತಕ್ಕೆ (Magnetic Equator) ಹತ್ತಿರವಾಗಿರುವುದರಿಂದ, ಬಾಹ್ಯಾಕಾಶದ ಈ ಬದಲಾವಣೆಗಳನ್ನು ಅಭ್ಯಸಿಸಲು ಇದು ಅತ್ಯಂತ ಸೂಕ್ತ ಜಾಗವಾಗಿತ್ತು.

ನಮ್ಮ ಭೂಮಿಯ ಮೇಲ್ಭಾಗದಲ್ಲಿ, ಎಂದರೆ ನೆಲದಿಂದ ಸುಮಾರು 60 ಕಿಲೋಮೀಟರ್‌ನಿಂದ ಹಿಡಿದು 1,000 ಕಿಲೋಮೀಟರ್ ಎತ್ತರದವರೆಗೆ ‘ಅಯಾನು ಮಂಡಲ’ (Ionosphere) ಎಂಬ ಅದೃಶ್ಯ ಪದರವಿದೆ. ಇದು ವಿದ್ಯುತ್ ಶಕ್ತಿಯನ್ನು ಹೊಂದಿರುವ ಕಣಗಳಿಂದ (ಪ್ಲಾಸ್ಮಾ) ಕೂಡಿದೆ. ನಾವು ಭೂಮಿಯಿಂದ ಕಳುಹಿಸುವ ರೇಡಿಯೋ ತರಂಗಗಳು ಮತ್ತು ಬಾಹ್ಯಾಕಾಶದ ಉಪಗ್ರಹಗಳು ಕಳುಹಿಸುವ ಜಿಪಿಎಸ್ ಸಂಕೇತಗಳು ಈ ಅಯಾನು ಮಂಡಲದ ಮೂಲಕವೇ ಹಾದುಹೋಗಬೇಕು. ಇದು ಒಂದು ರೀತಿ ನಮ್ಮ ಡಿಜಿಟಲ್ ಸಂಪರ್ಕಕ್ಕೆ ಹೆದ್ದಾರಿ ಇದ್ದಂತೆ. ಸೂರ್ಯನಲ್ಲಿ ಭಾರಿ ಸ್ಫೋಟಗಳಾಗಿ ಅಲ್ಲಿಂದ ಪ್ಲಾಸ್ಮಾದ ದಟ್ಟ ಮೋಡಗಳು (Coronal Mass Ejections) ತೀವ್ರ ವೇಗದಲ್ಲಿ ಭೂಮಿಯ ಕಡೆಗೆ ನುಗ್ಗಿ ಬಂದಾಗ, ಅವು ಭೂಮಿಯ ಕಾಂತೀಯ ರಕ್ಷಣಾ ಕವಚಕ್ಕೆ ಬಡಿದು ಆಕಾಶದಲ್ಲಿ ಭಾರಿ ವಿದ್ಯುತ್ ಪ್ರವಾಹವನ್ನು ಸೃಷ್ಟಿಸುತ್ತವೆ. ಇದನ್ನೇ ಭೂಕಾಂತೀಯ ಬಿರುಗಾಳಿ (Geomagnetic Storms) ಎನ್ನುತ್ತಾರೆ.

ವಿಜ್ಞಾನಿಗಳು ಕಂಡುಕೊಂಡಿರುವ ಪ್ರಕಾರ ಈ ಬಿರುಗಾಳಿ ಅಪ್ಪಳಿಸಿದಾಗ ಅಯಾನು ಮಂಡಲದಲ್ಲಿ ಎರಡು ವಿರುದ್ಧ ಶಕ್ತಿಗಳು ಜಿದ್ದಾಜಿದ್ದಿಗೆ ಇಳಿಯುತ್ತವೆ. ಮೊದಲನೆಯ ಶಕ್ತಿಯು ಭೂಮಿಯ ಸಮಭಾಜಕ ವೃತ್ತದ ಮೇಲಿರುವ ವಿದ್ಯುತ್ ಕಣಗಳನ್ನು ಕಾರಂಜಿಯಂತೆ ಮೇಲಕ್ಕೆ ಚಿಮ್ಮಿಸುತ್ತದೆ, ಇದರಿಂದ ಅಲ್ಲಿ ಕಣಗಳ ದಟ್ಟಣೆ ತಕ್ಷಣ ಹೆಚ್ಚಾಗುತ್ತದೆ. ಆದರೆ ಇದೇ ಸಮಯದಲ್ಲಿ, ವಾತಾವರಣದ ಉಷ್ಣತೆಯಿಂದಾಗಿ ಜಾಗತಿಕ ಮಾರುತದಂತಹ ಮತ್ತೊಂದು ಪರೋಕ್ಷಶಕ್ತಿ ಸೃಷ್ಟಿಯಾಗಿ, ಈ ಕಣಗಳನ್ನು ಕೆಳಮಟ್ಟಕ್ಕೆ ತಳ್ಳಿ ನಾಶಪಡಿಸುತ್ತದೆ. ಇದರಿಂದ ಕಣಗಳ ಸಂಖ್ಯೆ ದಿಢೀರನೆ ಕುಸಿದುಹೋಗುತ್ತದೆ. ಈ ಏರಿಳಿತಗಳನ್ನು ವಿಜ್ಞಾನಿಗಳು ಜಿಪಿಎಸ್ ಸಂಕೇತಗಳ ವೇಗದಲ್ಲಾಗುವ ಸೂಕ್ಷ್ಮ ಬದಲಾವಣೆಗಳನ್ನು ಲೆಕ್ಕಹಾಕಿ ಪತ್ತೆಹಚ್ಚಿದ್ದಾರೆ.

ಈ ಸಂಶೋಧನೆಯಲ್ಲಿ ಅತ್ಯಂತ ರೋಚಕ ಸಂಗತಿ ಎಂದರೆ ಸೌರ ಬಿರುಗಾಳಿಯ ತೀವ್ರತೆಗಿಂತಲೂ ಅದು ನಮಗೆ ತಟ್ಟುವ ‘ಸಮಯ’ ಎಷ್ಟು ಮುಖ್ಯ ಎನ್ನುವುದು ಸಾಬೀತಾಗಿರುವುದು. ಉದಾಹರಣೆಗೆ, ಮೇ 2024ರಲ್ಲಿ ಇತ್ತೀಚಿನ ಇತಿಹಾಸದಲ್ಲೇ ಅತ್ಯಂತ ಶಕ್ತಿಶಾಲಿ ಎನ್ನಲಾದ ಸೌರ ಬಿರುಗಾಳಿಯೊಂದು ಭೂಮಿಗೆ ಅಪ್ಪಳಿಸಿತ್ತು. ಅದು ನಮ್ಮ ಭಾಗದಲ್ಲಿ ಮಧ್ಯರಾತ್ರಿಯ ಅವಧಿಯಲ್ಲಿ ತಟ್ಟಿದ ಕಾರಣ, ಅಯಾನು ಮಂಡಲದ ಕಣಗಳ ದಟ್ಟಣೆಯಲ್ಲಿ ಅತ್ಯಂತ ವೇಗದ ಮತ್ತು ತಲ್ಲಣಗೊಳಿಸುವ ಏರಿಳಿತಗಳು ಕಂಡುಬಂದವು. ಅದೇ ಬಿರುಗಾಳಿ ಮಧ್ಯಾಹ್ನದ ಸಮಯದಲ್ಲಿ ಅಪ್ಪಳಿಸಿದರೆ ವಾತಾವರಣದಲ್ಲಿ ಇಷ್ಟು ತಲ್ಲಣವಾಗದೆ ಕೇವಲ ನಿಧಾನಗತಿಯ ಉಬ್ಬರವಿಳಿತ ಮಾತ್ರ ಕಂಡುಬರುತ್ತದೆ. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಏಪ್ರಿಲ್ 2023ರಲ್ಲಿ ಸಂಭವಿಸಿದ ಸಾಮಾನ್ಯ ತೀವ್ರತೆಯ ಬಿರುಗಾಳಿಯೊಂದು ಸಂಜೆಯ ಸಮಯದಲ್ಲಿ ಅಪ್ಪಳಿಸಿದ ಕಾರಣ ನಮ್ಮ ವಾತಾವರಣದ ಕಣಗಳ ದಟ್ಟಣೆಯನ್ನು ಶೇ 78ಕ್ಕಿಂತಲೂ ಹೆಚ್ಚು ಕುಸಿಯುವಂತೆ ಮಾಡಿತ್ತು. ಅಂದರೆ, ಬಿರುಗಾಳಿ ಎಷ್ಟು ಶಕ್ತಿಯುತವಾಗಿದೆ ಎನ್ನುವುದಕ್ಕಿಂತ, ಅದು ಅಪ್ಪಳಿಸುವ ಹೊತ್ತಿಗೆ ಅಲ್ಲಿನ ಸ್ಥಳೀಯ ವಾತಾವರಣ ಹೇಗಿತ್ತು ಎನ್ನುವುದು ಮುಖ್ಯವಾಗುತ್ತದೆ.

ಭಾರತದ ಪರ್ಯಾಯ ದ್ವೀಪದ (ಹೆಚ್ಚಾಗಿ ದಕ್ಷಿಣ ಭಾರತದ) ವಾತಾವರಣದಲ್ಲಿ ಇಂತಹದ್ದೊಂದು ನೇರ ಮತ್ತು ತುಲನಾತ್ಮಕ ಅಧ್ಯಯನ ನಡೆಸಿರುವುದು ಇದೇ ಮೊದಲು. ಇದುವರೆಗೆ ಜಾಗತಿಕ ಮಟ್ಟದ ಸಾಮಾನ್ಯ ವರದಿಗಳಷ್ಟೇ ಲಭ್ಯವಿದ್ದವು. ಆದರೆ, ಈ ಅಧ್ಯಯನಕ್ಕೆ ಕೇವಲ ತಂಜಾವೂರಿನ ಒಂದು ವೀಕ್ಷಣಾ ಕೇಂದ್ರದ ಮಾಹಿತಿಯನ್ನು ಮಾತ್ರ ಬಳಸಿಕೊಳ್ಳಲಾಗಿರುವುದರಿಂದ, ಇಡೀ ಪ್ರಾದೇಶಿಕ ಹವಾಮಾನವನ್ನು ಸಂಪೂರ್ಣವಾಗಿ ಮುನ್ಸೂಚನೆ ನೀಡುವುದಕ್ಕೆ ಕೆಲವು ಮಿತಿಗಳಿವೆ. ಬಾಹ್ಯಾಕಾಶದ ಈ ಅಲೆಗಳ ಚಲನೆ ಅತ್ಯಂತ ಸಂಕೀರ್ಣವಾಗಿದ್ದು, ಜಾಗತಿಕವಾಗಿ ಇದರ ನಿಖರ ಮುನ್ಸೂಚನೆ ನೀಡುವುದು ವಿಜ್ಞಾನಿಗಳಿಗೆ ದೊಡ್ಡ ಸವಾಲಾಗಿದೆ.

ಮುಂದಿನ ದಿನಗಳಲ್ಲಿ ಸೌರ ಬಿರುಗಾಳಿಗಳ ಮುನ್ಸೂಚನೆ ನೀಡುವ ಅತ್ಯಾಧುನಿಕ ಮಾಡೆಲ್‌ಗಳನ್ನು ನಿರ್ಮಿಸಲು ಮತ್ತು ಆ ಮೂಲಕ ನಮ್ಮ ಉಪಗ್ರಹ ಆಧಾರಿತ ಸಂಪರ್ಕ ವ್ಯವಸ್ಥೆಯನ್ನು ಸುರಕ್ಷಿತವಾಗಿಡಲು ಈ ಅಧ್ಯಯನ ದಾರಿ ದೀಪವಾಗಲಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1) ಶುದ್ಧ ಹಾಲಿನ ಪಿಎಚ್(PH) ಮೌಲ್ಯವು 6 ಇದು ಮೊಸರಾಗಿ ಬದಲಾದಾಗ ಇದರ ಪಿಎಚ್ ಮೌಲ್ಯ ಹೆಚ್ಚುತ್ತದೆಯೇ? ಅಥವಾ ಕಡಿಮೆಯಾಗುತ್ತದೆಯೇ? ಏಕೆ?

ಉತ್ತರ:– ಹಾಲು ಮೊಸರಾಗಿ ಬದಲಾದಾಗ ಅದರ ಪಿಎಚ್ ಮೌಲ್ಯ ಕಡಿಮೆಯಾಗುತ್ತದೆ, ಏಕೆಂದರೆ ಮೊಸರಿನಲ್ಲಿ ಆಮ್ಲವಿದೆ. ಆದ್ದರಿಂದ H^+ ಅಯಾನುಗಳ ಸಂಖ್ಯೆ ಅಧಿಕವಾಗಿರುತ್ತದೆ, ಹೀಗಾಗಿ ಮೊಸರಿನ ಪಿಎಚ್ ಮೌಲ್ಯ ಕಡಿಮೆಯಾಗುತ್ತದೆ.

2) ಆಮ್ಲವನ್ನು ಸಾರರಿಕ್ತಗೊಳಿಸಿದಾಗ ಹೈಡ್ರೋನಿಯಂ ಅಯಾನುಗಳ ಸಾರತೆಯ ಮೇಲೆ ಹೇಗೆ ಪರಿಣಾಮ ಉಂಟಾಗುತ್ತದೆ?

ಉತ್ತರ:– ಆಮ್ಲವನ್ನು ಸಾರಯುಕ್ತಗೊಳಿಸುವಾಗ ಅಂದರೆ ಆಮ್ಲಕ್ಕೆ ನೀರನ್ನು ಸೇರಿಸಿದಾಗ ಏಕಮಾನ ಗಾತ್ರದಲ್ಲಿ H_2O^+ ಅಯಾನುಗಳ ಸಾರತೆ ಕಡಿಮೆಯಾಗುತ್ತದೆ

3) ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ಮಾಡುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆದು ವಿವಿಧಭಾಗಗಳನ್ನು ಗುರುತಿಸಿ

ಉತ್ತರ:–



4) A B ಮತ್ತು C ದ್ರಾವಣಗಳ PH ಮೌಲ್ಯಗಳು ಕ್ರಮವಾಗಿ 5, 6 ಮತ್ತು 7 ಆಗಿವೆ, ಇವುಗಳಲ್ಲಿ ಅತ್ಯಂತ ಹೆಚ್ಚು ಆಮ್ಲೀಯ ಸ್ವಭಾವವನ್ನು ಹೊಂದಿರುವ ದ್ರಾವಣ ಯಾವುದು? ಏಕೆ?

ಉತ್ತರ:– A ದ್ರಾವಣ ಅತ್ಯಂತ ಹೆಚ್ಚು ಆಮ್ಲೀಯ ಸ್ವಭಾವವನ್ನು ಹೊಂದಿದೆ, ಇದು ಹೆಚ್ಚು H^+ ಅಯಾನುಗಳನ್ನು ಹೊಂದಿರುವುದು

4) ಆಮ್ಲಗಳು ರುಚಿ ಯಾವುದು? ಇದು ನೀಲಿ ಲಿಟ್ಮಸ್ ಅನ್ನು ಯಾವ ಬಣ್ಣಕ್ಕೆ ಬದಲಾಯಿಸುತ್ತದೆ?

ಉತ್ತರ:– ಆಮ್ಲಗಳು ಹುಳಿ ರುಚಿ ಹೊಂದಿದ್ದು ನೀಲಿ ಲಿಟ್ಮಸ್‌ಅನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತವೆ,

5) ಪ್ರತ್ಯಾಮ್ಲಗಳ ರುಚಿ ಯಾವುದು? ಇದು ಕೆಂಪು ಲಿಟ್ಮಸ್ ಅನ್ನು ಯಾವ ಬಣ್ಣಕ್ಕೆ ಬದಲಾಯಿಸುತ್ತದೆ?

ಉತ್ತರ:– ಪ್ರತ್ಯಾಮ್ಲಗಳು ಕಹಿ ರುಚಿ ಹೊಂದಿದ್ದು ಇದು ಕೆಂಪು ಲಿಟ್ಮಸ್‌ಅನ್ನು ನೀಲಿ ಬಣ್ಣಕ್ಕೆ ಬದಲಾಯಿಸುತ್ತವೆ

6) ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಪರೀಕ್ಷಿಸಲು ಯಾವ ಸಂಶ್ಲೇಷಿತ ಸೂಚಕಗಳನ್ನು ಬಳಸಬಹುದು?

ಉತ್ತರ:– ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಪರೀಕ್ಷಿಸಲು ಮೀಥೈಲ್ ಆರೆಂಜ್, ಫಿನಾಫ್ತಲೀನ್‌ಗಳಂತಹ ಸಂಶ್ಲೇಷಿತ ಸೂಚಕಗಳನ್ನೂ ಬಳಸಬಹುದು.

7) ಲಿಟ್ಮಸ್ ದ್ರಾವಣದ ಬಗ್ಗೆ ಬರೆಯಿರಿ

ಉತ್ತರ:– ಲಿಟ್ಮಸ್ ದ್ರಾವಣ ಒಂದು ನೇರಳೆ ರಂಗು, ಇದನ್ನು ಥ್ಯಾಲೋಫೈಟಾ ಸಸ್ಯ ವರ್ಗಕ್ಕೆ ಸೇರಿದ ಕಲ್ಲುಹೂವಿನಿಂದ ಪಡೆಯಲಾಗುತ್ತದೆ ಮತ್ತು ಸಾಮಾನ್ಯವಾಗಿ ಸೂಚಕದಂತೆ ಬಳಸಲಾಗುತ್ತದೆ. ಲಿಟ್ಮಸ್ ದ್ರಾವಣ ಆಮ್ಲೀಯವೂ ಅಥವಾ ಪ್ರತ್ಯಾಮ್ಲೀಯವೂ ಅಲ್ಲದಿದ್ದಾಗ, ಅದರ ಬಣ್ಣ ನೇರಳೆಯಾಗಿರುತ್ತದೆ.

ಕೆಂಪು ಕ್ಯಾಬೇಜ್ ಎಲೆಗಳು, ಅರಿಷಿಣ, ಹೈಡ್ರಾಂಜಿಯಾ , ಪೆಟುನಿಯಾ ಮತ್ತು ಜೆರೇನಿಯಂನಂತಹ ಕೆಲವು ಹೂವಿನ ಬಣ್ಣದ ದಳಗಳಂತಹ ಅನೇಕ ನೈಸರ್ಗಿಕ ವಸ್ತುಗಳಿವೆ. ಇವುಗಳು ದ್ರಾವಣದಲ್ಲಿ ಆಮ್ಲ ಅಥವಾ ಪ್ರತ್ಯಾಮ್ಲದ ಅಸ್ತಿತ್ವವನ್ನು ಸೂಚಿಸುತ್ತವೆ. ಇವುಗಳನ್ನು ಆಮ್ಲ – ಪ್ರತ್ಯಾಮ್ಲ ಸೂಚಕಗಳು ಅಥವಾ ಸರಳವಾಗಿ ಸೂಚಕಗಳು ಎನ್ನುತ್ತೇವೆ.

8) ಯಾವುದನ್ನು ಘ್ರಾಣ (olfactory) ಸೂಚಕಗಳು ಎನ್ನುತ್ತಾರೆ?

ಉತ್ತರ:– ಕೆಲವು ವಸ್ತುಗಳ ವಾಸನೆ ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಮಾಧ್ಯಮಗಳಲ್ಲಿ ಬದಲಾಗುತ್ತದೆ. ಇವುಗಳನ್ನು ಘ್ರಾಣ (olfactory) ಸೂಚಕಗಳು ಎನ್ನುತ್ತಾರೆ

9) ನೀರಿನಲ್ಲಿ ಆಮ್ಲೀಯ ದ್ರಾವಣ ವಿದ್ಯುತ್‌ಅನ್ನು ಪ್ರವಹಿಸುತ್ತಿರುವುದು. ತೋರಿಸುವ ಚಿತ್ರ ಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



(ಮುಂದುವರಿಯುವುದು.........)

ELECTROCHEMISTRY

13. What is corrosion?

Ans:- The loss of the metal in the form of its compounds due to chemical attack by the constituents of the environment on a metal is called corrosion. **(or)** a redox reaction which occurs duringa natural atmospheric cganges like oxygen and moisture like water.

14. Give some examples for corrosion.

Ans:- Rusting of iron, tarnishing of silver, tailing of mercury are some examples for corrosion.

15. What is rusting?

Ans:- The phenomenon wherein the iron exposed to moist air for a long time develops a brown coating of hydrated ferric oxide (Fe_2O_3. $3H_2O$) on its surface is called as rusting.

16. Mention some of the methods of preventing corrosion.

Ans:- The different methods of prevention of corrosion are –

(1) Barrier protection
(2) Sacrificial protection
(3) Cathode protection

17. Give the chemical formula of rust.

Ans:- The chemical formula of rust is $Fe_2O_3 . xH_2O$

18. How does the salt water accelerate corrosion?

Ans:- The salt water increases the electrical conduction of the electrolyte solution formed on the metal surface, hence it accelerates corrosion.

19. Write a brief note on the Barrier protection method of preventing corrosion.

Ans:- Barrier protection method – A thin barrier is developed between the metal like iron to be protected and the environment by painting the surface or by coating the surface with a thin film of oil or grease or by developing a thin layer of some non– corrosive metals like nickel, chromium, copper etc., by electroplating.

20. Write a brief note on the Sacrificial protection method of preventing corrosion.

Ans:- Sacrificial protection method is the method in which the metal to be protected say iron is coated with more electropositive metal like zinc which loses electrons easily than iron and hence, protects it from corroding. The process of coating zinc to iron is called galvanisation. (The zinc gradually gets lost as basic zinc carbonate $Zn(OH)_2$. $ZnCO_3$).



21. Mention the factors, which affect corrosion.

Ans:- Some factors which affect corrosion are –

(a) Position of metals in the emf series
(b) Presence of impurities in the metals
(c) Presence of the electrolytes
(d) Presence of CO_2 in water and
(e) Presence of protective coatings.

22. How can we prevent corrosion using the anti- rust solutions?

Ans:- The solutions of the alkaline phosphates and alkaline chromates are generally used as anti- rust solutions. Due to the alkaline nature of these solutions, the H^+ ions are removed from the solutions, and rusting is prevented. ***Eg:-*** Iron articles are dipped in the alkaline sodium phosphate solutions and a protective insoluble film of iron phosphate is formed.

23. What is Standard Electrode Potential?

Ans:- The Standard Electrode Potential is the potential developed between the metal and the solution containing its own ions, when the metal is in equilibrium with its ions of unit concentration at 25^0 C

24. What is Standard Hydrogen Electrode Potential?

Ans:- Standard Hydrogen Electrode Potential is the potential developed when hydrogen gas at one atmospheric pressure is passed through a solution containing hydrogen ions of unit activity.

25. Write a brief note on Sacrificial Protection method of preventing corrosion.

Ans:- Sacrificial Protection - In this method, the surface of the metal to be protected (Eg: iron) is coated with a more reactive metal i.e., metal which occupies a position lower in the electrochemical series than the metal to be protected. Being more reactive, it will take part in the redox reaction and will save the other metal. In other words, it will sacrifice itself for the sake of the metal to be protected. Eg:- iron is generally coated with zinc and this process is called galvanization. Zinc is more reactive than iron as it evident from the E° values.

$$Zn^{2+}(aq) + 2e^- \rightleftharpoons Zn(s); E^\circ = -0.76\,V$$

$$Fe^{2+}(aq) + 2e^- \rightleftharpoons Fe(s); E^\circ = -0.44\,V$$

In case iron has been galvanized, then zinc will be corroded instead of iron because it is more reactive than iron. It will change to the basic zinc carbonate $ZnCO_3.Zn(OH)_2$, a compound which is formed in the same way as hydrated ferric oxide. Sometimes scratches appear on the surface of iron galvanized with zinc. Even then, zinc will be corroded in preference to iron because there will be a competition between both these metals to take part in oxidation half reaction or in competitive oxidation



Protection of rusting of iron by zinc

(Contd….)

ಪರಿಷತ್: ರೆಸಾರ್ಟ್‌ನಲ್ಲಿ 'ಕೈ' ಕಾರ್ಯತಂತ್ರ

ಪಕ್ಷದ ಐದೂ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಇದೇ 18ರಂದು ನಡೆಯಲಿರುವ ಚುನಾವಣೆಯಲ್ಲಿ ಪಕ್ಷದ ಐದೂ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ರಣತಂತ್ರವನ್ನು ಬಿಡದಿಯ 'ವಂಡರ್ ಲಾ ರೆಸಾರ್ಟ್'ನಲ್ಲಿ ಮಂಗಳವಾರ ರಾತ್ರಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಕಾಂಗ್ರೆಸ್ ನಾಯಕರು ರೂಪಿಸಿದ್ದಾರೆ.

ಐದೂ ಅಭ್ಯರ್ಥಿಗಳ ಪರವಾಗಿಯೂ ಪ್ರತ್ಯೇಕವಾಗಿ ಏಜೆಂಟರನ್ನು ನೇಮಕ ಮಾಡಲಾಗಿದ್ದು, ಯಾವ ಶಾಸಕರು ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬ ಬಗ್ಗೆ ಸಭೆಯಲ್ಲಿ ಸ್ಪಷ್ಟ ಸೂಚನೆ ನೀಡಲಾಗಿದೆ ಎಂದು ಗೊತ್ತಾಗಿದೆ.

ಜತೆಗೆ ಯಾವ ಅಭ್ಯರ್ಥಿಗೆ ಎಷ್ಟು ಹೆಚ್ಚುವರಿ ಮತ ಹಾಕಬೇಕು. ಆ ಮತ ಯಾರದ್ದಾಗಿರಬೇಕು ಎಂಬ ಬಗ್ಗೆಯೂ ನಿರ್ದೇಶನ ನೀಡಲಾಗಿದೆ. ಹಾಗೆಯೇ, ದ್ವಿತೀಯ ಪ್ರಾಶಸ್ತ್ಯದ ಮತವನ್ನು ಹೇಗೆ ಚಲಾಯಿಸಬೇಕು ಎಂಬ ಕುರಿತು ಸಭೆಯಲ್ಲಿ ಪ್ರಾತ್ಯಕ್ಷಿಕೆ ನೀಡಲಾಯಿತು. ಬುಧವಾರವೂ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಲಿರುವ ಶಾಸಕರು, ಅಲ್ಲಿಂದ ನೇರವಾಗಿ ವಿಧಾನಸೌಧಕ್ಕೆ ಬಂದು ಮತ ಚಲಾಯಿಸಲಿದ್ದಾರೆ.

ಪ್ರಸ್ತುತ ವಿಧಾನಸಭೆಯ ಸಂಖ್ಯಾಬಲ 222 ಇದ್ದು, ವಿಧಾನಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿರುವುದರಿಂದ ಪ್ರತಿ ಅಭ್ಯರ್ಥಿ ಗೆಲ್ಲಲು 28 ಶಾಸಕರ ಮತಗಳ ಅಗತ್ಯವಿದೆ. ಕಾಂಗ್ರೆಸ್ ಬಳಿ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಮತ ಸೇರಿದಂತೆ 135 ಮತಗಳು ಇವೆ. ಜತೆಗೆ ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ್, ಕೆ.ಎಚ್. ಪುಟ್ಟಸ್ವಾಮಿಗೌಡ ಅವರ ಬೆಂಬಲ ಸೇರಿ 138 ಮತಗಳು ಇವೆ.

ಕಾಂಗ್ರೆಸ್ ಪಕ್ಷ ಕಣಕ್ಕಿಳಿಸಿರುವ 5 ಅಭ್ಯರ್ಥಿಗಳೂ ಗೆಲ್ಲಬೇಕಾದರೆ 140 ಮತ ಬೇಕು. ಕಾಂಗ್ರೆಸ್ ಬಳಿ ಪ್ರಸ್ತುತ ಇರುವ 138 ಸ್ಥಾನಗಳ ಜತೆಗೆ ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಿವರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್ ಕಾಂಗ್ರೆಸ್‌ಗೆ ಮತ ಹಾಕುವ ಸಾಧ್ಯತೆಯಿದೆ. ಹೀಗಾದರೆ, ಕಾಂಗ್ರೆಸ್‌ನ 5ನೇ ಅಭ್ಯರ್ಥಿಯೂ ನಿರಾಯಾಸವಾಗಿ ಗೆಲುವು ಸಾಧಿಸಬಹುದು. ಆದರೆ, ಪರಿಷತ್‌ಗೆ ಗೌಪ್ಯ ಮತದಾನ ನಡೆಯುವುದರಿಂದಾಗಿ, ಕಾಂಗ್ರೆಸ್‌ನ ಮೊದಲ ನಾಲ್ಕು ಅಭ್ಯರ್ಥಿಗಳಿಗೆ ಪ್ರತಿ ಅಭ್ಯರ್ಥಿಗೆ 28 ಮತಗಳ ಜತೆಗೆ ಹೆಚ್ಚುವರಿಯಾಗಿ ಒಂದು ಮತ ಹಾಕಿಸಲಿದ್ದಾರೆ. ಉಳಿದ ಮತಗಳ ಜತೆಗೆ ಎರಡನೇ ಪ್ರಾಶಸ್ತ್ಯ ಮತಗಳು 5ನೇ ಅಭ್ಯರ್ಥಿಗೆ ಚಲಾವಣೆ ಮಾಡಿ ಐದೂ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಉದ್ದೇಶದಲ್ಲಿ ಕಾಂಗ್ರೆಸ್ ಇದೆ ಎಂದು ಮೂಲಗಳು ತಿಳಿಸಿವೆ.

ವೇದಿಕೆಯಲ್ಲಿ ಕಾಣಿಸಿಕೊಂಡ ಯತೀಂದ್ರ

ಶಾಸಕಾಂಗ ಪಕ್ಷದ ಸಭೆಯ ವೇದಿಕೆಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರ ಜೊತೆ ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಆಸೀನರಾಗಿದ್ದರು.

ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಮತ್ತು ಬಿ.ಕೆ ಹರಿಪ್ರಸಾದ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಶಾಸಕಾಂಗ ಪಕ್ಷ ಸಭೆ ನಡೆಯಿತು. ಶಿವಕುಮಾರ್ ಮತ್ತು ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರ ಅಕ್ಕ-ಪಕ್ಕದಲ್ಲಿ ಸಿದ್ದರಾಮಯ್ಯ ಮತ್ತು ಬಿ.ಕೆ. ಹರಿಪ್ರಸಾದ್ ಕುಳಿತಿದ್ದರು. ಉಳಿದಂತೆ, ವೇದಿಕೆಯಲ್ಲಿ ಕೆ.ಜೆ ಜಾರ್ಜ್, ಕೆ.ಎಚ್. ಮುನಿಯಪ್ಪ, ಆರ್.ವಿ. ದೇಶಪಾಂಡೆ, ಯು.ಟಿ. ಖಾದರ್, ಗೋಪಿನಾಥ್ ಪಳನಿಸ್ವಾಮಿ, ಎಂ.ಬಿ. ಪಾಟೀಲ ಇದ್ದರು.

ಗೆಲುವಿಗೆ ಜೆಡಿಎಸ್ ಕಸರತ್ತು

ವಿಧಾನಪರಿಷತ್‌ನ ಏಳನೇ ಸ್ಥಾನಕ್ಕೆ ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ಮತ್ತು ಜೆಡಿಎಸ್‌ನ ಗೋವಿಂದರಾಜ್ ಅವರ ನಡುವೆ ತೀವ್ರ ಪೈಪೋಟಿ ನಡೆಯುತ್ತಿದ್ದು, ಅಗತ್ಯ ಮತಗಳ ಸಂಗ್ರಹಕ್ಕೆ 'ದಳಪತಿ'ಗಳು ಕಸರತ್ತು ಆರಂಭಿಸಿದ್ದಾರೆ. ಶಾಸಕರ ಸಂಖ್ಯಾ ಬಲದ ಆಧಾರದಲ್ಲಿ ಕಾಂಗ್ರೆಸ್ ನಾಲ್ಕು ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಲಿವೆ. ಉಳಿದ ಒಂದು ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಗೆಲ್ಲುವ ಮತಕ್ಕಾಗಿ ಅನ್ಯ ಪಕ್ಷಗಳ ಶಾಸಕರನ್ನು ಸೆಳೆಯಲು 'ಆತ್ಮಸಾಕ್ಷಿ' ಹೆಸರಿನಲ್ಲಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ.

ತಿಮರೋಡಿ ವಿರುದ್ಧದ ತನಿಖೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಪುತ್ತೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಜೀವ ಬೆದರಿಕೆ ಅಪರಾಧದ ತನಿಖೆಯ ಮುಂದುವರಿಕೆಗೆ ಅನುಮತಿ ನೀಡಿರುವ ಹೈಕೋರ್ಟ್, ಇದೇ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನೀಡುವಂತೆ ಒತ್ತಾಯಿಸಿದ ಆರೋಪದ ಕುರಿತ ತನಿಖೆಗೆ ತಡೆ ನೀಡಿದೆ.

'ಜೀವ ಬೆದರಿಕೆ ಹಾಕಿದ ಮತ್ತು ಸುಳ್ಳು ಸಾಕ್ಷ್ಯ ನೀಡಲು ಬಲವಂತಪಡಿಸಿದ ಆರೋಪದಡಿ ಪುತ್ತೂರು ಗ್ರಾಮೀಣ ಠಾಣಾ ಪೊಲೀಸರು ನನ್ನ ವಿರುದ್ಧ ದಾಖಲಿಸಿರುವ ಎಫ್ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಚಿಟಿಕೆ ಸುದ್ದಿ

ನಟ ಸಿದ್ದಾರ್ಥ ಶಂಕಾಸ್ಪದ ಸಾವು

ಹುಮನಾಬಾದ್ (ಬೀದರ್ ಜಿಲ್ಲೆ): ಹಾಸ್ಯ ನಟ ಸಿದ್ದಾರ್ಥ ಪರಸನೋರ್ (42) ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಪಟ್ಟಣದ ಹಣಕುಣಿ ರಸ್ತೆ ಪಕ್ಕದ ಅರಣ್ಯ ಪ್ರದೇಶದಲ್ಲಿ ಅವರ ಶವ ಪತ್ತೆಯಾಗಿದೆ.

ಸಿದ್ದಾರ್ಥ

ಪಟ್ಟಣದ ಟೀಚರ್ಸ್ ಕಾಲೊನಿ ನಿವಾಸಿಯಾಗಿದ್ದ ಸಿದ್ದಾರ್ಥ ಅವರಿಗೆ ಪತ್ನಿ ಹಾಗೂ ಮಗಳು ಇದ್ದಾರೆ.

'ಸಿದ್ದಾರ್ಥ ಅವರು ಜೂನ್ 13ರಂದು ಮನೆಯಿಂದ ಹೋದವರು ವಾಪಸ್ ಬಂದಿರಲಿಲ್ಲ. ಎರಡು ದಿನಗಳಾದರೂ ಮನೆಗೆ ಬಾರದ ಕಾರಣ ಕುಟುಂಬದವರು ಹುಮನಾಬಾದ್ ಠಾಣೆಗೆ ದೂರು ನೀಡಿದ್ದರು. ಸೋಮವಾರ ಸಂಜೆ ಅವರ ಶವ ಪತ್ತೆಯಾಗಿದೆ. ಅವರ ಸಾವಿಗೆ ಇನ್ನೂ ಕಾರಣ ತಿಳಿದು ಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸಿದ್ದಾರ್ಥ ಅವರು ರಿಯಾಲಿಟಿ ಶೋಗಳಾದ 'ಕಾಮಿಡಿ ಕಿಲಾಡಿ', 'ಮಜಾಭಾರತ' ಹಾಗೂ 'ಬ್ರಹ್ಮಗಂಟು' ಸೇರಿ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದರು.

ಎಸ್ಐಟಿ ಅಧಿಕಾರಿಗಳಿದ್ದ ಕಾರು ಪಲ್ಟಿ

ಎಸ್ಐಟಿ ಅಧಿಕಾರಿಗಳಿದ್ದ ಕಾರು ಬೆಳ್ತಂಗಡಿ ತಾಲ್ಲೂಕಿನ ಚಾರ್ಮಾಡಿ ಬಳಿ ಮಂಗಳವಾರ ಪಲ್ಟಿಯಾಗಿರುವುದು

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಕೊಲೆ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಇನ್ನೋವಾ ಕಾರು ಬೆಳ್ತಂಗಡಿ ತಾಲ್ಲೂಕಿನ ಚಾರ್ಮಾಡಿಯಲ್ಲಿ ಮಂಗಳವಾರ ಪಲ್ಟಿಯಾಗಿದೆ.

ಚಾಲಕ ಬೈರೇಗೌಡ ಚಲಾಯಿಸುತ್ತಿದ್ದ ಕಾರಿನಲ್ಲಿ ಎಸ್ಐಟಿ ಎಸ್.ಪಿ ಸಿ.ಎ. ಸೈಮನ್, ಇನ್‌ಸ್ಪೆಕ್ಟರ್ ಕುಸುಮಾಧರ್, ಸಿಬ್ಬಂದಿ ಮಂಜುನಾಥ್ ಇದ್ದರು. ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆಗೆ ಮಗುಚಿ ಬಿದ್ದ ಪರಿಣಾಮ ಕಾರು ಜಖಂಗೊಂಡಿದ್ದು, ಯಾರಿಗೂ ಗಾಯಗಳಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಸ್ಐಟಿ ತಂಡದ ತನಿಖಾಧಿಕಾರಿಯಾಗಿರುವ ಜಿತೇಂದ್ರ ಕುಮಾರ್ ದಯಾಮ ಅವರು ಚಿಕ್ಕಮಗಳೂರು ಎಸ್‌ಪಿಯಾಗಿದ್ದಾರೆ. ಅವರನ್ನು ಭೇಟಿ ಮಾಡಿ, ತನಿಖೆಗೆ ಸಂಬಂಧಿಸಿದ ಮಾಹಿತಿ ಹಂಚಿಕೊಳ್ಳಲು ಸೈಮನ್ ಅಧಿಕಾರಿಗಳೊಂದಿಗೆ ಚಿಕ್ಕಮಗಳೂರಿಗೆ ತೆರಳುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಶಿಕ್ಷಕನ ವಶ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಪ್ರೌಢಶಾಲೆಯೊಂದರ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಶಿಕ್ಷಕ ಶ್ರೀಶೈಲ ಕುಂಬಾರ ಎಂಬುವರನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

'ಎಸ್ಎಸ್ಎಲ್‌ಸಿ ವಿದ್ಯಾರ್ಥಿನಿಗೆ ಕನ್ನಡ ವಿಷಯದಲ್ಲಿ ಉತ್ತೀರ್ಣಗೊಳಿಸುವ ಆಮಿಷ ತೋರಿಸಿ, ಕಿರುಕುಳ ನೀಡಿದ್ದಾರೆ. ಮಂಗಳವಾರ ಶೌಚಾಲಯಕ್ಕೆ ಕರೆದೊಯ್ದು ಅಸಭ್ಯವಾಗಿ ವರ್ತಿಸಿದ್ದಾರೆ' ಎಂದು ವಿದ್ಯಾರ್ಥಿನಿಯ ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ. 'ಶಿಕ್ಷಕನನ್ನು ಅಮಾನತು ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No. 75, M. G. Road, Bangalore - 560001

OLD SCRAPPED MACHINERY FOR SALE

The below mentioned scrap items are available at our Dharwad, Gulbarga, Kumbalgudu and Mangalore plants.

Sl. No.	Manufacturer	Type of Machinery	Technical Specification	Quality
Dharwad Plant				
1	Manugraph	NL45 Print Unit H type	560 cut off	1 No.
2	Polygraph	Coroset Print Unit Y type	546 cut off	1 No.
3	Polygraph	Coroset Print Unit H type	546 cut off	1 No.
Gulbarga Plant				
1	Manugraph	NL45 Print Unit H type	546 cut off	1 No.
Kumbalagodu Plant				
1	Manugraph	NL45 Print Unit H type	560 cut off	2 Nos.
2	Afga CTP	Advantage Xs		1 NO.
3	AGFA VPP 68 Processor	VPP 68		1 No.
Mangalore Plant				
1	Manugraph 2000 Model	NL45 Print Unit H type	560 cut off	2 Nos.

For clarification, Contact the Procurement Head at babu.v@printersmysore.co.in, venu.tl@printersmysore.co.in 25880340 / 9900042650. Sealed Tenders/e-mail may be addressed within 7 days from the date of this advertisement.

TAMIL NADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.

NOTICE INVITING TENDER

Tender No.	Material Description	Due date
262723 000991	Debarked Eucalyptus Pulpwood from open market sources of Karnataka to TNPL Unit-II.	03.07.2026

Corrigendum if any will be issued in TNPL Website only. Detailed Terms & conditions are available in tender document at our website: www.tnpl.com

DIPR/2072/Tender/2026 — TNPL - Maker of bagasse based eco-friendly Paper

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516, 26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್:sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ–ಟೆಂಡರ್/ಡ್ರಗ್ಸ್(02)/Anaesth(09)/2026–27 ದಿನಾಂಕ:16–06–2026

ಮರು–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಬೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಿದೆ.

Sl. No.	Description
1	Drugs, Surgicals, Disposables, Consumables and Other Items
2	Supply of General Anaesthesia Machine - 3 Nos.

ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ದಿನಾಂಕ:17–06–2026ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ: 01–07–2026ರ ಸಂಜೆ 4:00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.
ಸಹಿ/– ನಿರ್ದೇಶಕರು, ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಸಿಪಿ/1184/ಸಿಸಿಎಲ್/2026–27

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553, ಫ್ಯಾಕ್ಸ್: 080–22340139, ಇ–ಮೇಲ್: directorayush.eproc@gmail.com
ಸಂಖ್ಯೆ: AYUSH/13/PROC/2026 ದಿನಾಂಕ: 16.06.2026

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ರಾಜ್ಯವಲಯದ ಯೋಜನೆಯಡಿಯಲ್ಲಿ ಆಯುಷ್ ನಿರ್ದೇಶನಾಲಯ ಹಾಗೂ ಅಧೀನ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಟೆಂಡರ್ ಮೂಲಕ ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ,ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.

ಇ–ಟೆಂಡರ್ ಪ್ರಕ್ರಿಯೆ

1.	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ	16.06.2026
2.	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	24.06.2026 ಸಂಜೆ 4:30 ಗಂಟೆಗೆ
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ	25.06.2026ರ ಸಂಜೆ 5:00 ಗಂಟೆಗೆ
4.	ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	29.06.2026ರ ಬೆಳಿಗ್ಗೆ 11:30 ಗಂಟೆಗೆ

ಸಹಿ/– ಲೆಕ್ಕಾಧಿಕಾರಿ/ಅಧ್ಯಕ್ಷರು
DIPR/CP/RO1182/AAPL/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026–27/1633 ದಿನಾಂಕ:15.06.2026

–:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ನಲ್ಲಿ):–

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1,2,3 & 4 ರಲ್ಲಿ ಲೆಕ್ಕ ಶೀರ್ಷಿಕೆ:5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 5054 ಜಿಲ್ಲಾ ಮುಖ್ಯ ರಸ್ತೆಗಳು ಸುಧಾರಣೆ, 5054 ರಾಜ್ಯ ಹೆದ್ದಾರಿ ಸುಧಾರಣೆ, 8443 ಠೇವಣಿ ವಂತಿಕೆ, 4059 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ, ಅಡಿಯಲ್ಲಿ ಸೇರಿ ಒಟ್ಟು 30 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 4.83 ಲಕ್ಷಗಳು ಹಾಗೂ ರೂ.388.64 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 6,100/– ಹಾಗೂ ರೂ. 5,83,300 ಇರುತ್ತದೆ. ಭಾಗ–1:ಟೆಂಡರ ಸ್ವೀಕರಿಸುವ ದಿನಾಂಕ 23.06.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 24.06.2026 ರ ಸಂಜೆ 4.45 ಘಂಟೆ ನಂತರ. ಭಾಗ–2 : ಟೆಂಡರ ಸ್ವೀಕರಿಸುವ ದಿನಾಂಕ 03.07.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 04.07.2026 ರ ಸಂಜೆ 4.45 ಘಂಟೆ ನಂತರ, ಭಾಗ–3: ಟೆಂಡರ ಸ್ವೀಕರಿಸುವ ದಿನಾಂಕ 09.07.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 10.07.2026 ರ ಸಂಜೆ 4.45 ಘಂಟೆ ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ:15.06.2026 ರ ನಂತರ ಪಡೆಯಬಹುದು.
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-431/KSMCA/2026-27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.
ಸಂಖ್ಯೆ : ವಿ.ತಾ.ವಿ./ಬೆ/ಎಸ್.ಎ.ಪಿ./ಸಿ.ಡಬ್ಲ್ಯೂ–1/ಟಿ–754/2026–27/1221
ದಿನಾಂಕ : 16–06–2026

ಟೆಂಡರ್ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು : Tender for Supply of Comcolour Inkjet Printers to VTU Examination Section, Belagavi. ಟೆಂಡರಿಗಿಟ್ಟ ಮೊತ್ತ : ರೂ. 79,82,936/– ಮುಂಗಡ ಠೇವಣಿ : ರೂ. 1,60,000/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 30–06–2026 ರ ಮಧ್ಯಾಹ್ನ 2.30 ರವರೆಗೆ. ಟೆಂಡರ್ ತೆರೆಯುವ ದಿನಾಂಕ : 01–07–2026 ರ ಸಂಜೆ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.
ಸಹಿ/– ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/438/ಮಣಿಪಾಲ್/2026–27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಾಜಾಜಿನಗರ ವಿಭಾಗ, ಬೆಂಪನಪಾ ಕಟ್ಟಡ, #161, ಮೊದಲನೇ ಮಹಡಿ, 19ನೇ ಮುಖ್ಯರಸ್ತೆ, 2ನೇ ಹಂತ ಹಳೆ ನವರಂಗ್ ಬಸ್ ನಿಲ್ದಾಣ ಹತ್ತಿರ, ರಾಜಾಜಿನಗರ, ಬೆಂಗಳೂರು – 10
ಸಂಖ್ಯೆ: ಕಾಪಾಅ(ರಾನವಿ)/ಕೆಪಿಪಿ/ಟೆಂಡರ್/02/2026–27 ದಿನಾಂಕ: 15–06–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೆಂ.ಪ.ನ.ಪಾಲಿಕೆ ಇವರು, ಆಯುಕ್ತರು ಬೆಂ.ಪ.ನ.ಪಾಲಿಕೆ ಬೆಂಗಳೂರು ಇವರ ಪರವಾಗಿ, ಬೃ.ಬೆಂ.ಮ.ಪಾಲಿಕೆ ತತ್ಸಮಾನವಾಗಿ ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ–4ರಂತೆ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅನುದಾನಗಳ (ಸಿಎಂಐಡಿಪಿ) ಅಡಿಯಲ್ಲಿ ರಾಜಾಜಿನಗರ ಕ್ಷೇತ್ರದ ಆಟದ ಮೈದಾನ, ವಾರ್ಡ್ ಕಚೇರಿ ಕಟ್ಟಡ, ರಸ್ತೆಗಳು ಮತ್ತು ಚರಂಡಿಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು (11 ಕಾಮಗಾರಿಗಳನ್ನು ಒಳಗೊಂಡಂತೆ ಸರ್ಕಾರಿ ಆದೇಶ ಬೆಂಪನಪಾ ಕ್ರಮಸಂಖ್ಯೆ. 22,23,24,25,26,27,28,29,30,31 & 32) ಪ್ಯಾಕೇಜ್ ಸಂಖ್ಯೆ–01–ಆರ್‌ಎನ್‌ಆರ್–2025–26 **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : ₹.1985.00 ಲಕ್ಷಗಳು ಇಎಂಡಿ ಮೊತ್ತ: ₹.20,00,000.00**
2.	ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅನುದಾನಗಳ (ಸಿಎಸ್‌ಎಸ್‌ಐಪಿ) ಅಡಿಯಲ್ಲಿ ರಾಜಾಜಿನಗರ ಕ್ಷೇತ್ರದ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಆಯ್ದ ಪ್ರಧಾನ ಮತ್ತು ಉಪ ಪ್ರಧಾನ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಒದಗಿಸುವುದು. ಪ್ಯಾಕೇಜ್ ಸಂಖ್ಯೆ–02–ಆರ್‌ಎನ್‌ಆರ್–2025–26 **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : ₹.1412.00 ಲಕ್ಷಗಳು ಇಎಂಡಿ ಮೊತ್ತ: ₹.15,00,000.00**

ಟೆಂಡರ್ ವೇಳಾಪಟ್ಟಿ: (1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ದಿನಾಂಕ 15–06–2026ರ ಸಂಜೆ 5:30 ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಆಕ್ಷೇಪಣೆ/ವಿವರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 22–06–2026ರ ಸಂಜೆ 5:30 ಗಂಟೆಯವರೆಗೆ (3) ಬಿಡ್ ಪೂರ್ವಬಾವಿ ಸಭೆಯನ್ನು ದಿನಾಂಕ 24–06–2026ರ ಸಂಜೆ 4:00 ಗಂಟೆಗೆ ನಡೆಸಲಾಗುವುದು (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 02–07–2026ರ ಸಂಜೆ 4:00 ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 04–07–2026ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಮಲ್ಲೇಶ್ವರಂ ವಲಯ, ಬೆಂಪನಪಾ

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65
ಟೆಂಡರ್ ಪ್ರಕಟಣೆ ಸಂಖ್ಯೆ.ಆಅ/ಟಿ.ಎನ್/ಎಂ.ಪಿ. ಬೇಸಾಯ ವೆಚ್ಚ ಅಧ್ಯಯನ/3/2026–27 ದಿನಾಂಕ : 14–06–2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕರ್ನಾಟಕ ರಾಜ್ಯದ ಪ್ರಮುಖ ಬೆಳೆಗಳ ಬೇಸಾಯ ವೆಚ್ಚ ಅಧ್ಯಯನ ಯೋಜನೆ, ಕೃಷಿ ಅರ್ಥಶಾಸ್ತ್ರ ವಿಭಾಗಕ್ಕೆ ಮಾನವ ಸಂಪನ್ಮೂಲ ಪೂರೈಕೆ ಮಾಡಲು ಅರ್ಹ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ದ್ವಿಲಕೋಟೆಯ ನಿಯಮಗಳು, ಷೆಡ್ಯೂಲ್ ಮತ್ತಿತರ ವಿವರಗಳು ವೆಬ್‌ಸೈಟ್: www.kppp.karnataka.gov.in.ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಕ್ರಮ ಸಂಖ್ಯೆ.	ವಿವರಗಳು	ಟೆಂಡರ್‌ಗೆ ಇಟ್ಟಿರುವ ಮೊತ್ತ (ಲಕ್ಷಗಳಲ್ಲಿ)	ಭದ್ರತಾ ಠೇವಣಿ	ಕಾಲಾವಧಿ
1	ಕೃಷಿ ವಿಶ್ವವಿದ್ಯಾನಿಲಯದ ಕರ್ನಾಟಕ ರಾಜ್ಯದ ಪ್ರಮುಖ ಬೆಳೆಗಳ ಬೇಸಾಯ ವೆಚ್ಚ ಅಧ್ಯಯನ ಯೋಜನೆ, ಕೃಷಿ ಅರ್ಥಶಾಸ್ತ್ರ ವಿಭಾಗಕ್ಕೆ ಮಾನವ ಸಂಪನ್ಮೂಲವನ್ನು ಒದಗಿಸುವ ಕೆಲಸ.	268.00	4,02,000.00	11 ತಿಂಗಳು

ಈ ಟೆಂಡರ್ ದ್ವಿಲಕೋಟೆ ಟೆಂಡರಾಗಿದ್ದು, ನಿಯಮಗಳನ್ನು ಇ–ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

1.	ಪ್ರಿಬಿಡ್ ಮೀಟಿಂಗ್ ಬೆಳಗ್ಗೆ 10.30 ಗಂಟೆಗೆ	30–06–2026
2.	ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ (ಸಾಯಂಕಾಲ 4.00 ಗಂಟೆಗೆ)	02–07–2026
3.	ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ಬೆಳಗ್ಗೆ 10.30 ಗಂಟೆಗೆ)	06–07–2026
4.	ಹಣಕಾಸಿನ ಬಿಡ್ಡನ್ನು ತೆರೆಯುವ ದಿನಾಂಕ (ಬೆಳಗ್ಗೆ 10.30 ಗಂಟೆಗೆ)	09–07–2026

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ – support@eprochelpdesk.com ಮತ್ತು 8046010000/ 8068948777.
ಸಹಿ/– ಆಸ್ತಿ ಅಧಿಕಾರಿ
ವಾ.ಸಾ.ಸಂ.ಇ/ವಾಪ್ರ/1179/ಆಕಾರ್/2026–27

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN :U70100KA2015SGC081817
ಕರ್ನಾಟಕ — ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ
ನಂ.54, 5ನೇ ಮಹಡಿ, ಇಂಧನಭವನ, ರೇಸ್ ಕೋರ್ಸ್ ರಸ್ತೆ, ರಿನೇಸನ್ಸ್ ಹೋಟೆಲ್ ಎದುರು, ಬೆಂಗಳೂರು–560001. ದೂರವಾಣಿ : 080–22352525, ಇ–ಮೇಲ್– eepmudot@gmail.com
ಸಂಖ್ಯೆ: ಕೆ.ಟಿ.ಐ.ಎಲ್/ಯೋ–1/ ಆಯವ್ಯಯ ಘೋಷಣೆ/ಗ.ಜಿ/01/2026–27 ದಿನಾಂಕ: 16.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಇ–ಸಂಗ್ರಹಣೆ (ಕೆ.ಪಿ.ಪಿ.ಪಿ) ವೇದಿಕೆಯಲ್ಲಿ ಲಭ್ಯವಿರುತ್ತದೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರ್ ಅಧಿಸೂಚನೆ ಸಂಖ್ಯೆ
1.	ಗದಗ ಜಿಲ್ಲೆಯ ಲಕ್ಕುಂಡಿ ಹಾಗೂ ಡಂಬಳ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ.	KTIL/2026-27/BD/WORK_INDENT46
2.	ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸ್ವದೇಶ್ ದರ್ಶನ್ 2.0ರ ಉಪ–ಯೋಜನೆಯಡಿಯಲ್ಲಿ Development of Bidar as a cultural and heritage tourist destination under the Challenge Based Destination Development (CBDD) –(ಪ್ಯಾಕೇಜ್ 5&6).	KTIL/2026-27/SE0060

ಟೆಂಡರ್ ವಿವರಗಳು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿದ್ದು, (https://www.kppp.karnataka.gov.in) ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (https://www.kppp.karnataka.gov.in) ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್ ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.
DIPR/CP/1183/NR/2026-27

ಕರ್ನಾಟಕ ಗೃಹ ಮಂಡಳಿ
3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಬೇ.ಸ.ಪ್ರ/2025–26 ದಿನಾಂಕ: 06.06.2026

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ದೊಣ್ಣೆಹಳ್ಳಿ ಗ್ರಾಮದ ಸರ್ವೆ ನಂ. 147/1ಬಿ9 ಮತ್ತು 147/1ಎ ಜಮೀನುಗಳಲ್ಲಿ 18 ಎಕರೆ 18 ಗುಂಟೆ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಶೇ. 60:40 ಅನುಪಾತದ ಪಾಲುದಾರಿಕೆ ಅಡಿಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಅರಂಭಿಕ ಠೇವಣಿ ಹಣವನ್ನು ಪಾವತಿ ಮಾಡಲು ದಿನಾಂಕ: 19.06.2026 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.07.2026 ಅಗಿರುತ್ತದೆ.

ಉದ್ದೇಶಿತ ಬಡಾವಣೆಯ ಸ್ಥಳ	ವರ್ಗ	ನಿವೇಶನದ ಅಳತೆ (ಮೀಟರ್‌ಗಳಲ್ಲಿ)	ನೋಂದಣಿ ಶುಲ್ಕ (ರೂ)	ಆರಂಭಿಕ ಠೇವಣಿ (ರೂ)	ತಾತ್ಕಾಲಿಕ ಬೆಲೆ (ಪ್ರತಿ ಚ.ಅಡಿಗೆ)
ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ದೊಣ್ಣೆಹಳ್ಳಿ ಗ್ರಾಮ	EWS	6X9	300/-	10,000/-	ರೂ. 900/-
	LIG	9 X 12	500/-	20,000/-	
	MIG	9 X 15	1000/-	30,000/-	
	HIG	12 X 18	1500/-	50,000/-	

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ಗೃ.ಮಂ. ಶಿವಮೊಗ್ಗ ಮೊಬೈಲ್ ಸಂಖ್ಯೆ: 9743733696 ಮತ್ತು ಅಧೀಕ್ಷಕರು ಮೊಬೈಲ್ ಸಂಖ್ಯೆ: 9964132200 ಪ್ರ.ದ.ಸ., ಮೊಬೈಲ್ ಸಂಖ್ಯೆ: 7760062595 ಅಥವಾ ಕಂದಾಯ ಅಧಿಕಾರಿಗಳು ಹಂಚಿಕೆ ಶಾಖೆ, ಬೆಂಗಳೂರು ಮೊಬೈಲ್ ಸಂಖ್ಯೆ: 9481688845 ಹಾಗೂ ಕಛೇರಿ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ:333/307 ಬೆಂಗಳೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/1180/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಇಲಾಖೆ)
ದೂರವಾಣಿ: 77606 86172 (COSP), 77609 92029 (S.O)
ಸಂ.ಕಕರಸಾ/ಕೇಕ/ಉ&ಮಖನಿ/03/2026–27 ದಿನಾಂಕ:16.06.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No.	Tender Nomenclature	Estimate Value(Rs.)	Last date for submission of tender
1.	KKRTC/2024-25/ IND0103/CALL-4	Procurement of Engine Valves and Guides and Inserts	1.70 Crore	29.06.2026 at 15.00 hrs
2.	KKRTC/2025-26/ IND0150/CALL-5	Procurement of Chassis Spares	0.42 Crore	29.06.2026 at 15.00 hrs
3.	KKRTC/2025-26/ IND0159/CALL-4	Procurement of Minor Garage Equipments	0.29 Core	29.06.2026 at 15.00 hrs
4.	KKRTC/2025-26/ IND0166/CALL-3	Procurement of Steering Assembly and Components	1.72 Crore	29.06.2026 at 15.00 hrs
5.	KKRTC/2026-27 IND0214	Procurement of U bolts and Centre Bolts	0.34 Crore	29.06.2026 at 15.00 hrs
6.	KKRTC/2026-27/ IND0215	Procurement of Spring Clamps	0.38 Crore	29.06.2026 at 15.00 hrs
7.	KKRTC/2026-27/ IND0218	Procurement of ERW GI Tubes and CR ERW MS Tubes.	0.69 Crore	29.06.2026 at 15.00 hrs
8.	KKRTC/2024-25/ IND0111/CALL-5	Procurement of NRC Engine Spares	2.82 Crore	16.07.2026 at 15.00 hrs
9.	KKRTC/2026-27/ IND0216	Procurement of Brake & Brake Parts	8..81 Crore	16.07.2026 at 15.00 hrs
10.	KKRTC/2026-27/ IND0217	Procurement of Automotive Glasses.	3.27 Crore	16.07.2026 at 15.00 hrs

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/#/portal/portal-home ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಬಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ.ಕಲಬುರಗಿ/219/ದೇಶಪಾಂಡೆ ಪಬ್ಲಿಸಿಟಿ/2026–27/

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಯಾವುದೇ ಸಮಾಜವು ಜಾಗರೂಕ, ಸುರಕ್ಷಿತ ಹಾಗೂ ಸ್ವಾಭಿಮಾನಿಯಾಗಿದ್ದರೆ ಮಾತ್ರ ಅದರ ಸಾಮರ್ಥ್ಯ ಹೆಚ್ಚಬಲ್ಲದು.
–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ಸರ್ಕಾರಿ ಸಿಬ್ಬಂದಿಗೆ ಇ-ಹಾಜರಾತಿ 'ಕರ್ತವ್ಯ'ದಲ್ಲಿ ಆದೀತೆ ಸುಧಾರಣೆ?

ರಾಜ್ಯ ಸರ್ಕಾರಿ ನೌಕರರ ಚಲನವಲನ ದಾಖಲಿಸುವ ಜಿಯೊ ಟ್ಯಾಗ್, ಮುಖಚಹರೆ ಒಳಗೊಂಡ ಇ-ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ, ಆಡಳಿತದಲ್ಲಿ ಶಿಸ್ತು ಹಾಗೂ ದಕ್ಷತೆಯನ್ನು ತರಲು ಸರ್ಕಾರ ಮುಂದಾಗಿದೆ. 'ಕರ್ತವ್ಯ' ಹೆಸರಿನ, ಮೊಬೈಲ್ ಆ್ಯಪ್ ಆಧಾರಿತ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು (ಕಾಮ್ಸ್) ತಕ್ಷಣದಿಂದಲೇ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಎಲ್ಲ ಇಲಾಖೆಗಳು, ನಿಗಮ–ಮಂಡಳಿಗಳಿಗೆ ಸರ್ಕಾರ ಸೂಚನೆ ನೀಡಿದೆ. ಐಎಎಸ್, ಕೆಎಎಸ್ ಶ್ರೇಣಿಯ ಅಧಿಕಾರಿಗಳೂ ಸೇರಿದಂತೆ ಸರ್ಕಾರಿ ನೌಕರರು ನಿಜ ಹೇಳಿ ಕಚೇರಿಗಳಿಗೆ ಹೋಗುವುದನ್ನು ಪತ್ತೆಹಚ್ಚುವುದಕ್ಕೆ 'ಕಾಮ್ಸ್' ಕಡಿವಾಣ ಹಾಕಲಿದೆ ಎಂದು ಹೇಳಲಾಗಿದೆ. ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವುದು, ಸಮಯಪಾಲನೆ ಖಚಿತಪಡಿಸುವುದು ಮತ್ತು ಸಾರ್ವಜನಿಕ ಸೇವೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರ ಉತ್ತರದಾಯಿತ್ವವನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ. ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿ ಅಧಿಕಾರಿಗಳು ಇರುವರೋ ಇಲ್ಲವೋ ಎನ್ನುವ ಪ್ರತಿ ದಿನದ ಸಂಪೂರ್ಣ ಮಾಹಿತಿ ಲಭ್ಯವಾಗುವುದರಿಂದ, ಆಡಳಿತ ಮೇಲೆ ನಿಗಾ ವಹಿಸಲು ಸರ್ಕಾರಕ್ಕೆ ಸಾಧ್ಯವಾಗಲಿದೆ. ಸರ್ಕಾರಿ ಕಚೇರಿಗಳಲ್ಲಿ ಬೆಳಗ್ಗೆ ಶೇ 100ರಷ್ಟು ಹಾಜರಾತಿ ಇರಬೇಕು; ಹೊರಗೆ ಹೋಗುವ ಅಗತ್ಯವಿದ್ದಾಗ ಆಯಾ ದಿನದ ಪ್ರವಾಸದ ವಿವರಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ (ಸಿಇಒ) ಸಭೆಯಲ್ಲಿ ತಾಕೀತು ಮಾಡಿದ್ದರು. ಅವರ ಒತ್ತಾಸೆಯ ಮೇರೆಗೆ 'ಕಾಮ್ಸ್' ಅನುಷ್ಠಾನ ತ್ವರಿತವಾಗಿ ನಡೆಯುತ್ತಿದೆ. ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಿಂದಲೇ ಶಿಕ್ಷಣ ಇಲಾಖೆಯ ನೌಕರರು 'ಕಾಮ್ಸ್' ಬಳಸುತ್ತಿದ್ದಾರೆ. ರಾಜ್ಯ ಸರ್ಕಾರದ 42 ಇಲಾಖೆಗಳ 4.78 ಲಕ್ಷ ನೌಕರರಲ್ಲಿ ಈಗಾಗಲೇ 3.01 ಲಕ್ಷ ಸಿಬ್ಬಂದಿ 'ಕಾಮ್ಸ್' ವ್ಯಾಪ್ತಿಗೆ ಬಂದಿದ್ದಾರೆ.



ಸರ್ಕಾರಿ ನೌಕರರಿಗೆ ಡಿಜಿಟಲ್ ಹಾಜರಾತಿ ವ್ಯವಸ್ಥೆಯನ್ನು ಸರ್ಕಾರ ಪರಿಚಯಿಸಿದೆ. ಈ ಮೂಲಕ ಆಡಳಿತದಲ್ಲಿ ಶಿಸ್ತು–ಪಾರದರ್ಶಕತೆ ತರುವ ಸರ್ಕಾರದ ಉದ್ದೇಶ ಈಡೇರುವುದೆ?

ಸರ್ಕಾರಿ ಕಚೇರಿಗಳಲ್ಲಿನ ಹಾಜರಾತಿ ನಿರ್ವಹಣೆ ವ್ಯವಸ್ಥೆ ಬಹುಕಾಲದಿಂದಲೂ ಸಾರ್ವಜನಿಕ ಚರ್ಚೆಯ ವಿಷಯವಾಗಿದೆ. ಕರ್ತವ್ಯಕ್ಕೆ ಸಮಯಕ್ಕೆ ಸರಿಯಾಗಿ ಹಾಜರಾಗದಿರುವುದು, ಅನಧಿಕೃತ ಗೈರು ಹಾಜರಿ ಹಾಗೂ ಹಾಜರಾತಿ ವಂಚನೆಯು ಸರ್ಕಾರಿ ಕಚೇರಿಗಳಲ್ಲಿ ಸಾಮಾನ್ಯ ಎನ್ನುವ ಪರಿಸ್ಥಿತಿಯಿದೆ. ಸಾರ್ವಜನಿಕರು ಅಧಿಕಾರಿಗಳಿಗಾಗಿ ಗಂಟೆಗಟ್ಟಲೆ ಕಾಯುವ, ಪ್ರತಿ ದಿನವೂ ಅಲೆಯುವ ಪರಿಸ್ಥಿತಿ ಕೆಲವು ಇಲಾಖೆಗಳಲ್ಲಿದೆ. ಇಂಥ ಅಶಿಸ್ತು ಹಾಗೂ ಅಪ್ರಾಮಾಣಿಕತೆಯ ನಡವಳಿಕೆಗೆ ತಂತ್ರಜ್ಞಾನ ಆಧಾರಿತ ಇ–ಹಾಜರಾತಿ ವ್ಯವಸ್ಥೆ ಕಡಿವಾಣ ಹಾಕಲಿದೆ ಎಂದು ಭಾವಿಸಲಾಗಿದೆ. ಸಿಬ್ಬಂದಿಯ ಹೊಣೆಗಾರಿಕೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಹಾಗೂ ಸಾರ್ವಜನಿಕರ ಕೆಲಸಗಳಿಗೆ ವೇಗ ನೀಡಲು ಹೊಸ ವ್ಯವಸ್ಥೆ ಸಹಕಾರಿ ಆಗಲಿದೆ ಎಂದು ಹೇಳಲಾಗುತ್ತಿದೆ. ಆದರೆ, ಆಡಳಿತದಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಪ್ರಯತ್ನದ ರೂಪದಲ್ಲಿ ನೋಡಬಹುದಾದ 'ಇ–ಹಾಜರಾತಿ' ವ್ಯವಸ್ಥೆಯಿಂದ ಆಡಳಿತಯಂತ್ರದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಸಾಧ್ಯವಾಗುತ್ತದೆಂದು ನಿರೀಕ್ಷಿಸುವುದು ಕಷ್ಟ. ಸರ್ಕಾರಿ ವ್ಯವಸ್ಥೆಯಲ್ಲಿ ತಂತ್ರಜ್ಞಾನವನ್ನು ಕೂಡ ಭ್ರಷ್ಟಾಚಾರಕ್ಕೆ ಅನುಕೂಲಕರವಾಗಿ ಬಳಸಿಕೊಳ್ಳುತ್ತಿರುವ ಉದಾಹರಣೆಗಳು ಸಾಕಷ್ಟಿವೆ.

ನೌಕರರ ಜೈವಿಕ ಮಾಹಿತಿಯನ್ನು ಸಂಗ್ರಹಿಸುವ ವ್ಯವಸ್ಥೆಯಲ್ಲಿ ಖಾಸಗಿ ವಿವರಗಳು ಎಷ್ಟು ಸುರಕ್ಷಿತ ಎನ್ನುವ ಅನುಮಾನ ಹಾಗೂ ಸಂಗ್ರಹಿಸಿದ ಮಾಹಿತಿ ಅನ್ಯ ಉದ್ದೇಶಗಳಿಗೆ ಬಳಕೆಯಾದರೆ ಅದರ ಹೊಣೆಗಾರಿಕೆ ಯಾರದ್ದು ಎನ್ನುವ ಪ್ರಶ್ನೆ ಇದ್ದೇ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಕಾರ್ಯನಿರ್ವಹಣೆ ದುರ್ಬಲವಾಗಿರುವುದರಿಂದ, ನೌಕರರ ಪಾಲಿಗೆ ಹಾಜರಾತಿ ವ್ಯವಸ್ಥೆಯೇ ದಿನನಿತ್ಯದ ಕಸರತ್ತಾಗುವ ಸಾಧ್ಯತೆಯೂ ಇದೆ. ಶಾಲೆಯಲ್ಲಿ ಕಾರ್ಯ ನಿರ್ವಹಿಸುವಷ್ಟೇ ಶಾಲೆಯ ಹೊರಗೂ ಶಿಕ್ಷಕರನ್ನು ದುಡಿಸಿಕೊಳ್ಳಲಾಗುತ್ತಿದೆ. ಕಚೇರಿಯೊಳಗೆ ಮಾತ್ರವಲ್ಲದೆ, ಕಚೇರಿ ಆಚೆಗೂ ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯತೆ ಕೆಲವು ನೌಕರರಿಗೆ ಇದೆ. ಇಂಥ ನೌಕರರ ಕಾರ್ಯದಕ್ಷತೆಯನ್ನು ಹಾಜರಾತಿಯ ಮಾನದಂಡದಲ್ಲಿ ಅಳೆಯುವುದು ಹೇಗೆ? ಹೊಸ ಹಾಜರಾತಿ ವ್ಯವಸ್ಥೆ ಯಶಸ್ವಿಯಾಗುವ ನಿಟ್ಟಿನಲ್ಲಿ ಸರ್ಕಾರವು ಸ್ಪಷ್ಟವಾದ ಗೋಪ್ಯತಾನೀತಿ, ದತ್ತಾಂಶ ಸಂರಕ್ಷಣೆ ಕ್ರಮಗಳು, ಸ್ವತಂತ್ರ ಮೇಲ್ವಿಚಾರಣಾ ವ್ಯವಸ್ಥೆ ಹಾಗೂ ದೂರು ಪರಿಹಾರ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯ. ಹಾಗೆಯೇ, ಹಾಜರಾತಿ ವ್ಯವಸ್ಥೆಯಿಂದಾಗಿ ಸರ್ಕಾರಿ ನೌಕರರು ಭಯ ಅಥವಾ ಗೊಂದಲದ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುವಂತಾಗಬಾರದು. ಡಿಜಿಟಲ್ ಹಾಜರಾತಿ ಶಿಸ್ತಿನ ಒಂದು ರೂಪವೇ ಹೊರತು ದಕ್ಷತೆಯನ್ನು ಹೆಚ್ಚಿಸುವ ಮಾಯಾದಂಡವಲ್ಲ. ನೌಕರರ ವಿಶ್ವಾಸ ಗಳಿಸುವ ಮೂಲಕ ಹಾಗೂ ಅವರಿಗೆ ಅಗತ್ಯ ಸವಲತ್ತುಗಳನ್ನು ಒದಗಿಸಿ ಹೊಣೆಗಾರಿಕೆಗೆ ಉತ್ತರದಾಯಿಗಳಾಗಿಸುವ ಮೂಲಕ ಆಡಳಿತದಲ್ಲಿ ಸಕಾರಾತ್ಮಕ ಬದಲಾವಣೆ ತರಬಹುದೇ ಹೊರತು, ತಂತ್ರಜ್ಞಾನ ಪರಿವರ್ತನೆ ತರುವ ಮಾಯಾದಂಡ ಆಗಲಾರದು.

ಚಾಟಿ

ಆ ಹಣಕ್ಕೆ ಹೆಸರೇನು?

ಸ್ವಿಸ್ ಬ್ಯಾಂಕ್‌ನಲ್ಲಿ ಕಾನೂನುಬಾಹಿರವಾಗಿ, ಲೆಕ್ಕ ಕೊಡದೆ ಇಟ್ಟ ಹಣವನ್ನು ಕಾಳಧನವೆಂದು ಪರಿಗಣಿಸುತ್ತಾರೆ ಎಂದಾದರೆ, ಲೆಕ್ಕ ಕೊಡದ ಗುರುದಕ್ಷಿಣೆ ಹಣವನ್ನು ಏನೆಂದು ಪರಿಗಣಿಸಬೇಕು?

ಗಿರಿಧರ ಕಾರ್ಕಳ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜ್ಯದಲ್ಲಿ ವಾಸವಾಗಿರುವ ಅನ್ಯ ರಾಜ್ಯದವರಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ವಿಸ್ತರಿಸುವುದಿಲ್ಲ ಎಂದರೆ ಏನರ್ಥ? ಇಲ್ಲಿ ಉದ್ಯೋಗ ಮಾಡುತ್ತಿರುವ ಹೊರರಾಜ್ಯದ ಜನರು ಕಟ್ಟುವ ತೆರಿಗೆ ಬೇಕು, ಅವರಿಗೆ ಸರ್ಕಾರದ ಸೌಲಭ್ಯಗಳನ್ನು ಕೊಡುವುದಿಲ್ಲ ಎನ್ನುವುದು ಹೇಗೆ ನ್ಯಾಯೋಚಿತ?

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಭಾನುವಾರ, 17-6-2001

● ನಿಂದನೆ ಕ್ರಮ ಬದಲು: ಕೋರ್ಟ್‌ಗೆ ಮೊರೆ

ನವದೆಹಲಿ, ಜೂನ್ 16– ಬಚಾವತ್ ಐತೀರ್ಪನ್ನು ಉಲ್ಲಂಘಿಸಿ ಆಂಧ್ರ ಪ್ರಾರಂಭಿಸಿರುವ ಐದು ನೀರಾವರಿ ಯೋಜನೆಗಳ ವಿರುದ್ಧ ನ್ಯಾಯಾಲಯ ನಿಂದನೆ ಮೊಕದ್ದಮೆಯ ಬದಲಿಗೆ ಯೋಜನೆ ನಿಲ್ಲಿಸುವಂತೆ ನಿರ್ದೇಶನ ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರ ಆಲೋಚನೆ ಮಾಡುತ್ತಿದೆ.

ಹಿರಿಯ ವಕೀಲ ಎಫ್.ಎಸ್. ನಾರಿಮನ್ ನೇತೃತ್ವದ ವಕೀಲರ ತಂಡ ನಡೆಸಿದ ಸಮಾಲೋಚನಾ ಸಭೆ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.

● ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ

ನವದೆಹಲಿ, ಜೂನ್ 16 (ಪಿಟಿಐ–ಯುಎನ್‌ಐ) ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂಬುದಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಜಸ್ವಂತ್ ಸಿಂಗ್ ಅವರು ಕೆಲ ದಿನಗಳ ಹಿಂದೆ ನೀಡಿದ ಹೇಳಿಕೆಯನ್ನು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ.

ಅದು ಅವರ ವೈಯಕ್ತಿಕ ಅಭಿಪ್ರಾಯವಲ್ಲ. ಭಾರತದ ಸಂವಿಧಾನದಲ್ಲಿ ಇರುವ ವಿಷಯವನ್ನೇ ಅವರು ಪುನರುಚ್ಚರಿಸಿದ್ದಾರೆ ಎಂದು ಸ್ಪಷ್ಟನೆ ನೀಡಿದೆ.

75 ವರ್ಷಗಳ ಹಿಂದೆ

ಭಾನುವಾರ, 17-6-1951

● 'ನೇಪಾಳದ ಸ್ವಾತಂತ್ರ್ಯಕ್ಕೆ ಭಾರತ ಧಕ್ಕೆ ತರದು'

ಖಟ್ಮಂಡು, ಜೂನ್ 16– ನೇಪಾಳದ ಸ್ವಾತಂತ್ರ್ಯ ನೇಪಾಳಕ್ಕೆ ಮಾತ್ರವಲ್ಲದೆ ಭಾರತ ಹಾಗೂ ಇಡೀ ವಿಶ್ವದ ಒಳಿತಿಗೆ ಅಗತ್ಯ ಎಂದು ಪ್ರಧಾನಿ ನೆಹರೂ ಅವರು ಇಂದು ತಿಳಿಸಿದರು.

'ಈ ಪುರಾತನ ನಾಡಿನ ವಿಷಯದಲ್ಲಿ ಭಾರತ ಕೈಹಾಕಿ, ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿಚ್ಛಿಸಿದೆ ಎಂದು ಆಲೋಚಿಸಿದರದು ಶುದ್ಧ ತಪ್ಪು' ಎಂದು ಪ್ರಧಾನಿ ನೆಹರೂ, ಸುಮಾರು ಎರಡು ಲಕ್ಷ ಜನರು ಸೇರಿದ್ದ ಪ್ರಚಂಡ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಭಾರತದ ನೀತಿಯನ್ನು ಘೋಷಿಸಿದರು.

ರಾಜಾ ತ್ರಿಭುವ ಅವರು ಅಧ್ಯಕ್ಷತೆ ವಹಿಸಿದ್ದರು.

'ಭಾರತ, ನೇಪಾಳ ರಾಷ್ಟ್ರಗಳು ಐತಿಹಾಸಿಕ ರೀತ್ಯಾ ಸಂಪ್ರದಾಯಬದ್ಧ ಸ್ನೇಹ ರಾಷ್ಟ್ರಗಳು. ಭೌಗೋಳಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳು ಬಹಳವಿದೆ' ಎಂದು ಪ್ರಧಾನಿ ನೆಹರೂ ಅವರು ತಿಳಿಸಿದರು.

ಎಸ್‌ಐಆರ್ ಬಲೆಯಲ್ಲಿ ಮಹಿಳೆ

ವಿಶ್ಲೇಷಣೆ

ಸಿ.ಜಿ. ಮಂಜುಳಾ

> ಮತದಾರರ ಪಟ್ಟಿಯಲ್ಲಿ ಮಹಿಳೆಯರ ಹೆಸರು ಸೇರ್ಪಡೆಯು ಸ್ವತಂತ್ರ ಭಾರತದ ಆರಂಭದ ದಿನಗಳಲ್ಲಿ ಸವಾಲಿನದಾಗಿತ್ತು. ಈಗ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳುವುದು ಕಷ್ಟದ ಸ್ಥಿತಿ ಎಂಬಂಥ ವಿಪರ್ಯಾಸ. ಎಸ್‌ಐಆರ್ ನಡೆದಲ್ಲೆಲ್ಲ ಮಹಿಳಾ ಮತದಾರರ ಸಂಖ್ಯೆ ಕುಸಿದಿದೆ, ಲಿಂಗಾನುಪಾತದಲ್ಲಿ ವ್ಯತ್ಯಾಸ ಉಂಟಾಗಿದೆ.

ಕಳೆದ ಹಲವು ದಶಕಗಳಿಂದ ಚುನಾವಣೆಗಳಲ್ಲಿ ಮಹಿಳಾ ಮತದಾರರ ಪಾಲ್ಗೊಳ್ಳುವಿಕೆಯ ಪ್ರಗತಿಯನ್ನು ಹಿಮ್ಮುಖವಾಗಿಸುವ ರೀತಿಯಲ್ಲಿ ಮಹಿಳಾ ಮತದಾರರ ಹಕ್ಕು ನಿರಾಕರಣೆ ಆಗುತ್ತಿದೆಯೇ ಎಂಬುದು ಸದ್ಯದ ಪ್ರಶ್ನೆ. ಈಗಾಗಲೇ, ಹಲವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದಿರುವ ಮೊದಲ ಮತ್ತು ಎರಡನೇ ಹಂತದ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'ಯ (ಎಸ್‌ಐಆರ್) ನಂತರ, ಮತದಾರರ ಪಟ್ಟಿಗಳಲ್ಲಿ ಲಿಂಗಾನುಪಾತ ಕುಸಿತವನ್ನು ಆರು ಪ್ರಮುಖ ರಾಜ್ಯಗಳ ದತ್ತಾಂಶಗಳು ಖಚಿತಪಡಿಸಿವೆ. ಮೊದಲ ಹಂತದಲ್ಲಿ ಮೊದಲ ಬಾರಿಗೆ ಬಿಹಾರದಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯಲ್ಲೇ, ಆ ರಾಜ್ಯದ ಮತದಾರರ ಲಿಂಗಾನುಪಾತ 1,000 ಪುರುಷರಿಗೆ 907 ಮಹಿಳೆಯರಿಂದ 892ಕ್ಕೆ ಕುಸಿದಿತ್ತು. ಈಗ ಮೂರನೇ ಹಂತದಲ್ಲಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ದೊರೆತಿರುವ ಸಂದರ್ಭದಲ್ಲಿ ಕಾಣೆಯಾಗಬಹುದಾದ ಮಹಿಳಾ ಮತದಾರರ ಕುರಿತಾಗಿ ಕಳವಳ ವ್ಯಕ್ತವಾಗುತ್ತಿವೆ.

ಕಾಯಂ ಆಗಿ ಬೇರೆಡೆ ಸ್ಥಳಾಂತರಗೊಂಡಿರುವ ಮತದಾರರ ಹೆಸರುಗಳು ಮತದಾರರ ಪಟ್ಟಿ ಗಳಲ್ಲಿ ರದ್ದಾಗುವುದು ನಿರೀಕ್ಷಿತ. ಆದರೆ, ಬಹಳಷ್ಟು ಸಂದರ್ಭಗಳಲ್ಲಿ ವಿವಾಹದ ನಂತರ ಸ್ಥಳಾಂತರಗೊಳ್ಳುವ, ವೈಯಕ್ತಿಕ ವಿವರಗಳು ಬದಲಾಗುವಂತಹ ಮಹಿಳಾ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಮ್ಯಾಪಿಂಗ್ ಮಾಡುವುದು ಕ್ಲಿಷ್ಟಕರ. ಚುನಾವಣಾ ಆಯೋಗ ನಿಗದಿಪಡಿಸಿರುವ 11 ದಾಖಲೆಗಳನ್ನು ಹೊಂದಿರದಂತಹವರು, ಆರ್ಥಿಕವಾಗಿ ಅವಲಂಬಿತರು, ಅನಕ್ಷರಸ್ಥರು, ಔಪಚಾರಿಕ ಶಿಕ್ಷಣ ವಂಚಿತರು ಎಸ್‌ಐಆರ್‌ಗೆ ಪುರಾವೆ ನೀಡಬೇಕೆಂದರೆ, ಅದು ಸವಾಲಾಗಬಹುದು. ಇಂತಹ ಸಂದರ್ಭದಲ್ಲಿ ಆಕೆಯ ಗುರುತು ಹಾಗೂ ರಾಜಕೀಯದ ಆಯ್ಕೆಗೆ ಅಗತ್ಯವಾದ ಶಕ್ತಿಯನ್ನು ಬಿಂಬಿಸುವ 'ಮತದಾರರ ಗುರುತಿನ ಚೀಟಿ'ಯನ್ನು ಎಸ್‌ಐಆರ್‌ನಂತಹ ಪ್ರಕ್ರಿಯೆ ಕಿತ್ತುಕೊಳ್ಳುತ್ತದೆ. ಇತ್ತೀಚೆಗೆ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದ ಹೆಸರು ರದ್ದಾದ ಅಥವಾ ನ್ಯಾಯಮಂಡಳಿಗಳ ಪರಿಶೀಲನೆಗೆ ಒಳಪಟ್ಟ ಶೇ 61.8ರಷ್ಟು ಮತದಾರರು ಮಹಿಳೆಯರು ಎಂಬುದು ಕೋಲ್ಕತ್ತ ಮೂಲದ ಸರ್ಕಾರೇತರ ಸಂಸ್ಥೆ 'ಸಬರ್ ಇನ್‌ಸ್ಟಿಟ್ಯೂಟ್' ಬಿಡುಗಡೆ ಮಾಡಿರುವ ದತ್ತಾಂಶದಲ್ಲಿ ವ್ಯಕ್ತವಾಗಿದೆ.

ಪರರ ಸೊತ್ತಾಗಿಯೇ ಹೆಣ್ಣನ್ನು ಕಾಣುವ ಸಮಾಜದ ರೀತಿನೀತಿಗಳು ಆಕೆಯ ಗುರುತನ್ನೇ ಅಳಿಸಿಹಾಕಲು ನೆಪವಾಗುತ್ತಿರುವುದು ವಿಪರ್ಯಾಸ. ವಿವಾಹವಾದ ನಂತರ ಹೆಣ್ಣು ಗಂಡನ ಮನೆಗೆ ಹೋಗುವ ಸಂಸ್ಕೃತಿ ನಮ್ಮದು. ವಿವಾಹದ ನಂತರ ಹಲವು ಸಮುದಾಯಗಳಲ್ಲಿ ಆಕೆಯ ಹೆಸರೇ ಬದಲಾಗಿ ಹೋಗುತ್ತದೆ ಅಥವಾ ಉಪನಾಮ (ಸರ್‌ನೇಮ್) ಬದಲಾಗುತ್ತದೆ. ಬ್ಯಾಂಕ್ ಸೇರಿದಂತೆ ಹಲವು ಅಧಿಕೃತ ದಾಖಲೆಗಳಲ್ಲಿ ವಿವಾಹಿತೆ ಎಂದು ನಮೂದಿಸಿದ ತಕ್ಷಣ 'ವೈಫ್ ಆಫ್...' (ಇಂತಹವರ ಪತ್ನಿ) ಎಂದು ಸುಶಿಕ್ಷಿತ ಮಹಿಳೆಯರಿಗೂ ಅವರಿಗೆ ಬೇಕೋ ಬೇಡವೋ ಅವರ ಅರಿವಿಗೇ ಬಾರದೆಯೇ ಅನೇಕ ಸಲ ಬದಲಾಗಿಹೋಗಿರುತ್ತದೆ. ವಿವಾಹಿತ ಪುರುಷನಿಗೆ ಮಾತ್ರ 'ಸನ್ ಆಫ್' (ಇಂತಹವರ ಮಗ) ಎಂಬಂಥ ಗುರುತಿಸುವಿಕೆಯೇ ಇರುತ್ತದೆ. ಇಂತಹ ತಾರತಮ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡನ ಮನೆಯಲ್ಲಿ ಆಕೆಯ ಅಸ್ತಿತ್ವಕ್ಕೆ ಬೆಲೆ ಇಲ್ಲದ, ಬೇರುಗಳಿಲ್ಲದ, ಅತಂತ್ರ ಸ್ಥಿತಿಯನ್ನು ಮತದಾರರ ಪಟ್ಟಿ ಪ್ರತಿಫಲಿಸುವುದು ಅಸಹನೀಯ. ವಿವಾಹಿತ ಮಹಿಳೆಯರು ತವರಿಗೆ ಹೋಗಿ, ಹಿಂದಿನ ಮತದಾರರ ಪಟ್ಟಿಯಲ್ಲಿ ತಂದೆ–ತಾಯಿ ಹೆಸರಿದ್ದ ಬಗ್ಗೆ ಪರಿಶೀಲಿಸಿ, ಪುರಾವೆ ಸಂಗ್ರಹಿಸಿ ತಂದು ಸಾಬೀತು ಪಡಿಸಬೇಕಾಗುತ್ತದೆ. ಈ ಪ್ರಕ್ರಿಯೆ ಶ್ರಮ, ಸಮಯ ಹಾಗೂ ಹಣ ಬಯಸುವಂತಹದ್ದು; ಅಂತರ್ಜಾತಿ, ಅಂತರಧರ್ಮೀಯ ವಿವಾಹಿತ ಮಹಿಳೆಯರಿಗಂತೂ ಈ ಪ್ರಕ್ರಿಯೆ ಇನ್ನೂ ಕಷ್ಟ ಎಂಬುದು ಈಗಾಗಲೇ ಎಸ್‌ಐಆರ್ ನಡೆದಿರುವ ರಾಜ್ಯಗಳಲ್ಲಿ ಸಾಬೀತಾಗಿದೆ. ವಿಚಿತ್ರವೆಂದರೆ, ಎಲ್ಲರ ಬಳಿಯೂ ಸಾಮಾನ್ಯವಾಗಿ ಇರುವ 'ಆಧಾರ್', ಈಗ ಬರೀ ಗುರುತಿನ ಚೀಟಿ ಅಷ್ಟೆ. ಅದು, ಎಸ್‌ಐಆರ್‌ಗೆ ನಾಗರಿಕತ್ವ ಸಾಬೀತುಪಡಿಸುವ ದಾಖಲೆಯಾಗದು.

ತವರಿನಲ್ಲಿ ವಿವಾಹಿತಳ ಹೆಸರು ತೆಗೆದುಹಾಕುವಂತಹದ್ದು, ಹಾಗೆಯೇ ಗಂಡನ ಮನೆಯಲ್ಲಿ ಸೇರ್ಪಡೆಯಾಗದೇ ಇರುವಂತಹ ಅತಂತ್ರ ಸ್ಥಿತಿಗಳಿಂದಾಗಿ ಎಸ್‌ಐಆರ್‌ಗೆ ಮುಂಚೆಯೂ ಅನೇಕ ಮಹಿಳೆಯರು ಮತದಾನದ ಅವಕಾಶದಿಂದ ವಂಚಿತರಾದುದು ಇದೆ. 'ಎನ್ಯುಮರೇಷನ್ ಫಾರ್ಮ್' ತುಂಬುವ ಅಗತ್ಯ ಹಾಗೂ ಇಂತಹದ್ದೇ ದಿನಾಂಕದೊಳಗೆ ಸಲ್ಲಿಸಬೇಕು ಎಂಬಂಥ ಕಟ್ಟುನಿಟ್ಟಾದ ಗಡುವುಗಳನ್ನು ನಿಭಾಯಿಸುವುದು ಸಾಕಷ್ಟು ಮಹಿಳೆಯರಿಗೆ ಅನನುಕೂಲಕರ. ಅದರಲ್ಲೂ ಅಲೆಮಾರಿ ಸಮುದಾಯಗಳು ಅಥವಾ ಇನ್ನಿತರ ತಳಸಮುದಾಯಗಳ ಮಹಿಳೆಯರಲ್ಲಿ ಪೂರ್ವಿಕರ ಅಥವಾ ವಂಶದ ಇತಿಹಾಸ ಹೇಳುವ ದಾಖಲೆ ಸಿಗುವುದು ಕಷ್ಟ. ವಿಶೇಷ ವಾಗಿ ಒಂಟಿ ಮಹಿಳೆಯರು, ಎಲ್‌ಜಿಬಿಟಿಕ್ಯು ಸಮುದಾಯ ಹಾಗೂ ಲೈಂಗಿಕ ವೃತ್ತಿನಿರತ ಸಮುದಾಯಗಳಿಗೂ ಕ್ಲಿಷ್ಟಕರ. ಬರ್ತ್ ಸರ್ಟಿಫಿಕೇಟ್, ಪಾಸ್‌ಪೋರ್ಟ್‌ನಂತಹ ವಂಶದ ಸಂಪರ್ಕ ದಾಖಲೆಗಳ ಮಂಡನೆಯನ್ನು ಅವಲಂಬಿಸಿದ ಎಸ್‌ಐಆರ್ ನಂತಹ ಕಸರತ್ತುಗಳು ಮಹಿಳೆಯ ಮೇಲೆ ಅಸಮಾನ ರೀತಿಯ ಪರಿಣಾಮ ಬೀರುತ್ತವೆ. ಬಿಹಾರದಲ್ಲಿ ಆದದ್ದು ಇದೇ. ಹೀಗಿದ್ದೂ, ಕಳೆದ 75 ವರ್ಷಗಳಿಂದ ಚುನಾವಣೆಗಳನ್ನು ನಡೆಸಿಕೊಂಡು ಬರುತ್ತಾ, ಮಹಿಳಾ ಮತದಾನಕ್ಕೆ ಉತ್ತೇಜನ ನೀಡಿಕೊಂಡು ಬಂದಿರುವ ಇತಿಹಾಸ ಹೊಂದಿರುವ ಚುನಾವಣಾ ಆಯೋಗವು, ಪ್ರಸ್ತುತ ಮಹಿಳೆಯರು ಎದುರಿಸುವ ಇಂತಹ ರಚನಾತ್ಮಕ ಸವಾಲುಗಳಿಗೆ ಏಕೆ ಸ್ಪಂದಿಸುತ್ತಿಲ್ಲ?

ಎಸ್‌ಐಆರ್ ಪರಿಶೀಲನೆಗಾಗಿ 'ಲಾಜಿಕಲ್ ಡಿಸ್‌ಕ್ರೆಪೆನ್ಸಿ' (ತಾರ್ಕಿಕ ಭಿನ್ನತೆ) ಎಂಬಂಥ ಹೊಸತೊಂದು ಮಾನದಂಡವಂತೂ ಇನ್ನೂ ಹೆಚ್ಚಿನ ಆತಂಕ ಸೃಷ್ಟಿಸಿದೆ. ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಇದನ್ನು ಅಳವಡಿಸಲಾಯಿತು. ಹೆಸರು ಹೊಂದಾಣಿಕೆ ಆಗದ ಸಮಸ್ಯೆ, ಸ್ಪೆಲ್ಲಿಂಗ್ ಸಮಸ್ಯೆ, ತಂದೆ–ತಾಯಿ ಹೆಸರಿಗೆ ಹೊಂದಾಣಿಕೆ ಆಗದಿರುವುದು, ತಂದೆ–ತಾಯಿಗೆ ಆರಕ್ಕಿಂತ ಹೆಚ್ಚು ಮಕ್ಕಳಿರುವುದು, ತಾಯಿ ಮತ್ತು ವ್ಯಕ್ತಿಯ ಅಂತರ 15 ವರ್ಷಕ್ಕಿಂತ ಕಡಿಮೆ ಇರುವುದು, ಇವೆಲ್ಲವೂ 'ತಾರ್ಕಿಕ ಭಿನ್ನತೆ' ವ್ಯಾಪ್ತಿಗೆ ಬರುತ್ತವೆ. ಈ ಮಾನದಂಡ ಬೇಕಾಬಿಟ್ಟಿ ಪರಿಶೀಲನೆಗಳಿಗೆ ಆಸ್ಪದ ಕಲ್ಪಿಸಬಹುದು ಎನ್ನುವ ಆತಂಕವಿದೆ. ಪಶ್ಚಿಮ ಬಂಗಾಳದ ಒಂದು ಉದಾಹರಣೆ ಹೀಗಿದೆ: ಅಮೃತ ಪ್ರಿಯದರ್ಶಿನಿ ಎಂಬ ಯುವತಿಗೆ ವೆರಿಫಿಕೇಷನ್ ನೋಟಿಸ್ ನೀಡಲಾಗಿದೆ. ಅದಕ್ಕೆ ಕಾರಣ, ಆಕೆಯ ತಂದೆ–ತಾಯಿಯ ಹೆಸರು ಅಬ್ದುಲ್ ಘನಿ ಹಾಗೂ ಮೊಹುವಾ ಇಸ್ಲಾಂ ಎಂದಿರುವುದು. 26 ವರ್ಷದ ಜೀವಭೌತಶಾಸ್ತ್ರಜ್ಞೆ ಅಮೃತ ಪ್ರಿಯದರ್ಶಿನಿ ಈಗಾಗಲೇ ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಮತ ಹಾಕಿದ್ದಾರೆ. ಹೀಗಿದ್ದೂ, ಹಿಂದೂ ಹೆಸರಿರುವ ಮಗಳಿಗೆ ಪೋಷಕರ ಸರ್‌ನೇಮ್ ಇಲ್ಲ ಎಂಬ ಕಾರಣಕ್ಕಾಗಿ, ಎಸ್‌ಐಆರ್‌ಗೆ ಬಳಕೆಯಾಗುತ್ತಿರುವ ಡಿಜಿಟಲ್ ತಂತ್ರಜ್ಞಾನ ಆಕೆಯನ್ನು 'ಶಂಕಾಸ್ಪದ' ಎಂದು ಎತ್ತಿ ತೋರಿದೆ. ಆಕೆಯ ಪ್ರಕರಣವೀಗ ನ್ಯಾಯ ಮಂಡಳಿಯಲ್ಲಿ ಇತ್ಯರ್ಥವಾಗಬೇಕಿದೆ. ಮತದಾರರ ಪಟ್ಟಿಗಳಲ್ಲಿ ಡಿಜಿಟಲ್ ತಂತ್ರಜ್ಞಾನ ಸೃಷ್ಟಿಸಿರುವ ಸಮಸ್ಯೆಗಳೂ ಅಸಂಖ್ಯ. ಹಾಗೆಯೇ ಮತದಾರರ ಪಟ್ಟಿಯಿಂದ ಹೊರಗುಳಿದಲ್ಲಿ ಸರ್ಕಾರದ ಕ್ಷೇಮಾಭಿವೃದ್ಧಿ ಯೋಜನೆಗಳ ಸೌಲಭ್ಯ ಸಿಗದು ಎಂಬುದೂ ಪಶ್ಚಿಮ ಬಂಗಾಳದಲ್ಲಿ ಆತಂಕ ಸೃಷ್ಟಿಸಿದೆ.

ಇಷ್ಟೆಲ್ಲ ಸಮಸ್ಯೆಗಳು ಚರ್ಚೆಯಾಗುತ್ತಿದ್ದರೂ 'ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳತ್ತ ಪ್ರಗತಿ' ಎಂದು ಎಸ್‌ಐಆರ್ ಅನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಆದರೆ, ಈ ಎಸ್‌ಐಆರ್ ಪ್ರಕ್ರಿಯೆಯನ್ನು 'ಮತದಾನದ ಹಕ್ಕುಗಳ ಮೇಲಿನ ಆಕ್ರಮಣ' ಮತ್ತು 'ವೋಟ್ ಚೋರಿ' ಎಂದು ವಿರೋಧ ಪಕ್ಷಗಳು ಬಣ್ಣಿಸುತ್ತಿವೆ. ಈ ಹಿಂದೆ ಮತದಾರರ ಪಟ್ಟಿ ಸರ್ಕಾರದ ಹೊಣೆಯಾಗಿತ್ತು, ಅಧಿಕಾರಿಗಳು ಮನೆ ಮನೆಗೆ ಬಂದು ಪರಿಶೀಲಿಸುತ್ತಿದ್ದರು. ಈಗ ಈ ಹೊಣೆಗಾರಿಕೆ ಎಸ್‌ಐಆರ್ ಮೂಲಕ ಸ್ವತಃ ನಾಗರಿಕರಿಗೇ ವರ್ಗಾವಣೆಯಾಗಿದೆ.

1951–52ರಲ್ಲಿ ಸ್ವತಂತ್ರ ಭಾರತದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸುಮಾರು 28 ಲಕ್ಷ ಮಹಿಳೆಯರು ಮತ ಹಾಕಲಾಗಲಿಲ್ಲ. ಕಾರಣ, ಆ ಮಹಿಳೆಯರು ತಮ್ಮ ನಿಜ ಹೆಸರು ಹೇಳಲು ನಿರಾಕರಿಸಿ, 'ಯಾರದೋ ಅಮ್ಮ, ಯಾರದೋ ಪತ್ನಿ' ಎಂದಷ್ಟೇ ಮತದಾರರ ಪಟ್ಟಿಯಲ್ಲಿ ನೋಂದಾಯಿಸ ಬೇಕೆಂದು ಪಟ್ಟು ಹಿಡಿದಿದ್ದರು. ಇಂತಹ ಪ್ರಕರಣಗಳು ಹೆಚ್ಚು ವರದಿಯಾಗಿದ್ದುದು ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ. ಆದರೆ, 'ಹೆಸರು ಸೇರಿದಂತೆ ಸಾಕಷ್ಟು ಮಾಹಿತಿ ನೀಡಲಾಗದಿದ್ದರೆ ಅಂತಹವರನ್ನು ಮತದಾರರ ಪಟ್ಟಿಗೆ ಸೇರಿಸಲಾಗದು' ಎಂದು ಸ್ವತಂತ್ರ ಭಾರತದ ಮೊದಲ ಚುನಾವಣಾ ಆಯುಕ್ತರಾಗಿದ್ದ ಸುಕುಮಾರ್ ಸೇನ್ ನಿರ್ದೇಶಿಸಿದ್ದರು. ಜೊತೆಗೆ, ಸಾರ್ವಜನಿಕ ಮನವಿಗಳನ್ನು ಮಾಡುವು ದಲ್ಲದೆ, ಮತದಾರರ ಪಟ್ಟಿಗಳಲ್ಲಿ ಹೆಚ್ಚಿನ ಮಹಿಳೆ ಯರು ನೋಂದಾಯಿಸಿಕೊಳ್ಳಲು ಅನುವು ಮಾಡಿಕೊಡುವುದಕ್ಕಾಗಿ ಬಿಹಾರ ಹಾಗೂ ರಾಜಸ್ಥಾನಗಳಲ್ಲಿ ಗಡುವು ವಿಸ್ತರಿಸಿದ್ದರು. ಹೀಗಿದ್ದೂ 'ಎಂಟು ಕೋಟಿ ಮಹಿಳಾ ಮತದಾರರಲ್ಲಿ ಸುಮಾರು 28 ಲಕ್ಷ ಮತದಾರರು ತಮ್ಮ ನಿಜವಾದ ಹೆಸರು ಹೇಳಲು ಹಿಂಜರಿದುದರಿಂದ ಅವರನ್ನು ಮತದಾರರ ಪಟ್ಟಿಗಳಿಂದ ಕಿತ್ತುಹಾಕಬೇಕಾಯಿತು' ಎಂದು ಸುಕುಮಾರ್ ಸೇನ್ ದಾಖಲಿಸಿದ್ದಾರೆ. ಆದರೆ, 1957ರಲ್ಲಿ ಎರಡನೇ ಸಾರ್ವತ್ರಿಕ ಚುನಾವಣೆ ನಡೆಸುವ ವೇಳೆಗೆ ಮಹಿಳೆಯರಲ್ಲಿ ಚುನಾವಣಾ ಆಯೋಗವು ಜಾಗೃತಿ ಮೂಡಿಸಿದ ಫಲವಾಗಿ 92,141,597 ಮಹಿಳಾ ಮತದಾರರು ನೋಂದಾವಣೆಗೊಂಡಿದ್ದರು.

ಇತಿಹಾಸ ಚಕ್ರದಲ್ಲಿ ಮಹಿಳಾ ಮತದಾರರ ಅನುಪಾತ ಕುಸಿಯುತ್ತಿರುವ ಸ್ಥಿತಿ ಇಂದಿನದು. ಎಸ್‌ಐಆರ್‌ನಿಂದಾಗಿ ಮಹಿಳೆಯರು ಸೇರಿದಂತೆ ನಿರ್ಲಕ್ಷಿತ ಸಮುದಾಯಗಳು ಮತದಾರರ ಪಟ್ಟಿಗಳಿಂದ ಹೊರಗೆ ಉಳಿಯದಂತೆ ಮಾಡಲು ನಾಗರಿಕ ಸಮಾಜದ ಪ್ರತಿನಿಧಿಗಳ ಸಹಯೋಗದೊಂದಿಗೆ ಸುರಕ್ಷಾ ಕ್ರಮಗಳನ್ನು ಕೈಗೊಳ್ಳುವುದು ಈಗ ನಮ್ಮ ರಾಜ್ಯ ಸರ್ಕಾರದ ಆದ್ಯತೆಯಾಗಬೇಕಿದೆ.

ವಾಚಕರ ವಾಣಿ

ಬಿಡದಿ: ಸಿಂಗೂರು-ನಂದಿಗ್ರಾಮ ಆಗದಿರಲಿ

ಟೌನ್‌ಶಿಪ್ ನಿರ್ಮಾಣದ ಹೆಸರಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಬಳಿ ವ್ಯವಸಾಯಯೋಗ್ಯ ಭೂಮಿ ವಶಪಡಿಸಿಕೊಳ್ಳಲು ಸರ್ಕಾರ ಹೊರಟಿದೆ. ಇದಕ್ಕೆ ರೈತರು, ಸಂಘ–ಸಂಸ್ಥೆಗಳ ತೀವ್ರ ವಿರೋಧವಿದೆ. ಆದರೂ, ಸರ್ಕಾರ ತನ್ನ ಪ್ರಯತ್ನ ಮುಂದುವರಿಸಿದೆ. ಹಲವು ವರ್ಷಗಳ ಹಿಂದೆ ಇದೇ ರೀತಿ ಭೂಮಿ ವಶಪಡಿಸಿಕೊಂಡು ಕಾರ್ಖಾನೆ ಸ್ಥಾಪಿಸಲು ಹೊರಟಿದ್ದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಅಧಿಕಾರ ಕಳೆದುಕೊಂಡಿತ್ತು. ಇಂದಿಗೂ ಅಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗಿಲ್ಲ. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸಲು ಹೊರಟಿದ್ದಾರೆ; ಹಲವು ವಿರೋಧಗಳನ್ನೂ ಎದುರಿಸುತ್ತಿದ್ದಾರೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಬಿಡದಿ ರೈತರ ಜಮೀನು ವಶಪಡಿಸಿಕೊಳ್ಳಲು ಹೊರಟಿರುವುದು ಅವರ ಅಧಿಕಾರಕ್ಕೆ ಮುಳುವಾದರೂ ಅಚ್ಚರಿ ಇಲ್ಲ. ಕೂಡಲೇ, ಭೂಸ್ವಾಧೀನ ನಿಲ್ಲಿಸಿ ರೈತರಿಗೆ ಅನುಕೂಲ ಕಲ್ಪಿಸಲಿ.

ಈ. ಬಸವರಾಜು, ಬೆಂಗಳೂರು

ಸಂಘದ ನೋಂದಣಿ: ಅತಾರ್ಕಿಕ ಉತ್ತರ

'ಆರ್‌ಎಸ್‌ಎಸ್‌ನ ಕಾನೂನು ಬದ್ಧತೆ ಏನು?' ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರಶ್ನೆಗೆ, ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ನೀಡಿದ ಉತ್ತರ ಸಮಂಜಸವಾಗಿಲ್ಲ. 'ಆರ್‌ಎಸ್‌ಎಸ್ ಏಕೆ ಇಂದಿಗೂ ನೋಂದಣಿಯಾಗಿಲ್ಲ?' ಎಂಬುದಕ್ಕೆ 'ಹಿಂದೂ ಧರ್ಮವೂ ನೋಂದಣಿಯಾಗಿಲ್ಲ' ಎಂಬ ಅವರ ಉತ್ತರ ತರ್ಕಸಮ್ಮತವಲ್ಲ. 'ರಹಸ್ಯವಾಗಿ ಇಡುವಂಥದ್ದು ಏನೂ ಇಲ್ಲ'ದಿದ್ದರೆ ನೋಂದಣಿ ಮಾಡಿಸಿಕೊಂಡು ದೇಣಿಗೆ, ಗುರುದಕ್ಷಿಣೆ ಮತ್ತಿತರ ವಿಷಯ ಕುರಿತಂತೆ ದೇಶದ ಜನರಲ್ಲಿ ಉಂಟಾಗುತ್ತಿರುವ ಅನುಮಾನಕ್ಕೆ ತೆರೆ ಎಳೆಯಬೇಕಲ್ಲವೆ?

ಶಿವಕುಮಾರ ಬಂಡೋಳಿ, ಯಾದಗಿರಿ

ಕೆನೆಪದರ: ಆದಾಯಮಿತಿ ಹೆಚ್ಚಾಗಲಿ

2018ರಲ್ಲಿ ಹಿಂದುಳಿದ ವರ್ಗಗಳ 'ಕೆನೆಪದರ'ದ ಆದಾಯಮಿತಿಯನ್ನು ₹6 ಲಕ್ಷದಿಂದ ₹8 ಲಕ್ಷಕ್ಕೆ ಹೆಚ್ಚಿಸಲಾಗಿತ್ತು. ಆದರೆ, ಇಲ್ಲಿಯತನಕ ಇದರ ಪರಿಷ್ಕರಣೆಯಾಗಿಲ್ಲ. ಪ್ರಸ್ತುತ ಮೀಸಲಾತಿಗೆ ಪರಿಗಣಿಸುತ್ತಿರುವ ₹8 ಲಕ್ಷ ಮಿತಿಯು ಸಂಪೂರ್ಣ ಅವೈಜ್ಞಾನಿಕ ಮತ್ತು ಅಪ್ರಸ್ತುತವಾಗಿದೆ. ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅನ್ಯಾಯವಾಗುತ್ತಿದೆ. ಇದರ ನಡುವೆಯೇ ರಾಜ್ಯ ಸರ್ಕಾರವು 56,432 ಹುದ್ದೆಗಳ ನೇರನೇಮಕಾತಿಗೆ ಮುಂದಾಗಿದೆ. ಹಾಗಾಗಿ, ಒಬಿಸಿ ಅಭ್ಯರ್ಥಿಗಳಿಗೆ ಸಮರ್ಪಕವಾಗಿ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆನೆಪದರದ ಆದಾಯದ ಮಿತಿ ಹೆಚ್ಚಿಸಿ ಆದೇಶ ಹೊರಡಿಸಬೇಕಿದೆ.

ದರ್ಶನ್ ಬಿ., ಚಿಕ್ಕನಾಯಕನಹಳ್ಳಿ

ಪೊಲೀಸ್ ನೇಮಕ: ಸುಲಭ ದಾರಿಯಿಲ್ಲ

ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಸುಮಾರು ಮೂರು ವರ್ಷಗಳ ಬಳಿಕ ಪೊಲೀಸ್ ನೌಕರಿಯ ಆಕಾಂಕ್ಷಿಗಳ ಕನಸುಗಳಿಗೆ ರೆಕ್ಕೆ ಬಂದಿದೆ. ಇದರ ಲಾಭ ಪಡೆಯಲು ಕೋಚಿಂಗ್ ಸೆಂಟರ್‌ಗಳು ಮತ್ತು ಕೆಲ ಬೋಧಕರು ಯತ್ನಿಸುತ್ತಿದ್ದಾರೆ. '45 ದಿನಗಳಲ್ಲಿ, 50 ದಿನಗಳಲ್ಲಿ ಕೋಚಿಂಗ್ ನೀಡಿ ಪೊಲೀಸ್ ಕನಸನ್ನು ನನಸು ಮಾಡಲಾಗುವುದು' ಎಂಬಂತಹ ಜಾಹೀರಾತು ನೀಡುತ್ತಿದ್ದಾರೆ. ಆ ಮೂಲಕ ಮುಗ್ಧ ಸ್ಪರ್ಧಾರ್ಥಿಗಳಿಗೆ ಆಸೆ ತೋರಿಸುತ್ತಿದ್ದಾರೆ. ಸುಮಾರು ಎರಡು ಅಥವಾ ಮೂರು ವರ್ಷದಿಂದ ಓದಿದವರ ಜ್ಞಾನವೇ ಬೇರೆ; ಒಂದು ತಿಂಗಳ ಅಧ್ಯಯನದ ಜ್ಞಾನವೇ ಬೇರೆ ಇರುತ್ತದೆ. ಸ್ಪರ್ಧಾರ್ಥಿಗಳು ಕೋಚಿಂಗ್ ಸೆಂಟರ್‌ಗಳ ಭರವಸೆ ನಂಬಿ ಮೋಸ ಹೋಗಬಾರದು. ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆ ಬಿಡಿಸಬೇಕು. ಬೌದ್ಧಿಕ ಸಾಮರ್ಥ್ಯ ಹಾಗೂ ಪ್ರಚಲಿತ ಘಟನೆಗಳ ಬಗ್ಗೆ ಓದುವುದು ಪರೀಕ್ಷೆಗೆ ಅನುಕೂಲ.

ಬಸನಗೌಡ ಪಾಟೀಲ, ಧಾರವಾಡ

ಗ್ಯಾರಂಟಿ ಪರಾಮರ್ಶೆ: ಅರ್ಹರಿಗೆ ಬರೆ ಬೇಡ

'ಗ್ಯಾರಂಟಿ' ಯೋಜನೆಗಳ ಪರಾಮರ್ಶೆಯ ಘೋಷಣೆ ಹೊರಬಿದ್ದಿದೆ. ಇದರ ಪರ, ವಿರೋಧ ಹಾಗೂ ವಿರೋಧಾಭಾಸದ ಚರ್ಚೆಯೂ ನಡೆದಿದೆ. ಆರಂಭದಲ್ಲಿ ಗ್ಯಾರಂಟಿಗಳ ಬಗ್ಗೆ ಬಿಜೆಪಿ ನಾಯಕರು ಟೀಕಿಸಿದ್ದರು; ಕರ್ನಾಟಕ ದಿವಾಳಿ ಆಗಲಿದೆ ಎಂದಿದ್ದರು. ಆದರೆ, ವಿವಿಧ ರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿಯು ಗ್ಯಾರಂಟಿಗಳನ್ನು ಘೋಷಿಸಿ ಅನುಷ್ಠಾನಗೊಳಿಸಿದೆ. ರಾಜ್ಯ ಸರ್ಕಾರದ ಪರಾಮರ್ಶೆಯ ನಿರ್ಧಾರ ಸರಿಯಿದೆ. ಗೃಹಲಕ್ಷ್ಮಿ ಹಣ ಬಹಳಷ್ಟು ಬಾರಿ ಅಪಾತ್ರರ ಖಾತೆ ಸೇರುತ್ತಿದೆ. ಸತ್ತವರ ಹೆಸರಲ್ಲಿರುವ ಖಾತೆಯಿಂದ ಎಟಿಎಂ ಮೂಲಕ ಹಣ ಡ್ರಾ ಮಾಡುತ್ತಿರುವ ಉದಾಹರಣೆಗಳಿವೆ. ಒಂದೇ ಮನೆಯಲ್ಲಿ ಮೂರ್ನಾಲ್ಕು ಯಜಮಾನಿಯರು ಸೃಷ್ಟಿ ಆಗಿದ್ದಾರೆ. 'ಶಕ್ತಿ' ಯೋಜನೆಯಡಿ ಲಕ್ಷಾಂತರ ಸಂಬಳ ಪಡೆಯುವ ಮಹಿಳಾ ಅಧಿಕಾರಿಗಳು ಪ್ರಯಾಣಿಸುತ್ತಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆ ಆಗಲಿದೆ. ಅರ್ಹ ಫಲಾನುಭವಿಗಳಿಗೆ ಧಕ್ಕೆ ಆಗದಂತೆ ಪರಾಮರ್ಶೆ ನಡೆಸಬೇಕಿದೆ

ಮೋದೂರು ಮಹೇಶಾರಾಧ್ಯ, ಹುಣಸೂರು

ಶೌಚಗುಂಡಿ ಕಾರ್ಮಿಕರ ನೋವಿಗೆ ಸ್ಪಂದಿಸಿ

'ರಾಜ್ಯದಲ್ಲಿ ಶೌಚಗುಂಡಿ ಕಾರ್ಮಿಕರ ಸ್ಥಿತಿ ಅತಂತ್ರ' ವರದಿ (ಪ್ರ.ವಾ., ಜೂನ್ 16) ಓದಿದಾಗ, ಈ ಸಾಮಾಜಿಕ ಪರಿಸ್ಥಿತಿ ನಮಗೆ ನಾವೇ ಮಾಡಿಕೊಳ್ಳುತ್ತಿರುವ ಅವಮಾನ ಅನ್ನಿಸಿತು. ಮಲಹೊರುವ ಮತ್ತು ಬಾಚುವ ಪದ್ಧತಿ ನಿಷೇಧಿಸಿ ಐದು ದಶಕ ಕಳೆದರೂ ಪುನರ್‌ವಸತಿ ಕಲ್ಪಿಸಿಲ್ಲ ಎಂದರೆ ಅಧಿಕಾರ ನಡೆಸುವವರ ಮನಸ್ಸು ಎಷ್ಟು ಒಳ್ಳೆಯದಾಗಿರಬೇಡ! ನಾಡಿನ ಹೆಮ್ಮೆಯ ರಾಜಕಾರಣಿಗಳಲ್ಲಿ ಒಬ್ಬರಾದ ಬಿ. ಬಸವಲಿಂಗಪ್ಪ ಅವರು ಮಾಡಿದ ಕೆಲಸ, ಚಿಂತನೆ, ಪ್ರೇರಣೆಯಿಂದ ಶೋಷಿತ ದೊಡ್ಡ ಸಮುದಾಯವು ಜಾಗೃತಗೊಂಡಿದೆ. ಐಪಿಡಿ ಸಾಲಪ್ಪ ಸಮಿತಿಯ ಶಿಫಾರಸುಗಳುಳ್ಳ ವರದಿ ಅನುಷ್ಠಾನವಾಗಿಲ್ಲ ಎನ್ನುವುದಾದರೆ ಅದು ಸಮಾಜ ಕಲ್ಯಾಣವೋ ಮಾನವ ಕಲ್ಯಾಣವೋ? ಹಿಮ್ಮುಖವಾದರೆ ಸಮಾಜದ ಅಭಿವೃದ್ಧಿ ಹೇಗೆ ಸಾಧ್ಯ? ನೊಂದವರಿಗೆ ನೆರವು ಕಲ್ಪಿಸಲು ಸರ್ಕಾರ ಮುಂದಾಗಲಿ.

ಸುಬ್ಬು ಹೊಲೆಯಾರ್, ಬೆಂಗಳೂರು

ಚುರುಮುರಿ

ಮಂತ್ರಿಯ ಮಾಡೆನ್ನ...

● ಮಣ್ಣೆ ರಾಜು

ಪಕ್ಷದ ಕಾರ್ಯಕರ್ತರು ಬಂದು ಗುರೂಜಿಗೆ ಅಡ್ಡಬಿದ್ದರು. 'ಗುರೂಜಿ, ತಮ್ಮ ತಪೋಶಕ್ತಿಯಿಂದ ನಮ್ಮ ಶಾಸಕರಿಗೆ ಮಂತ್ರಿ ಭಾಗ್ಯ ಕೊಡಿಸಬೇಕು' ಎಂದು ಕೈ ಮುಗಿದರು.

ಗುರೂಜಿ ನಕ್ಕರು. 'ನಾನು ನೆಪಮಾತ್ರ, ಮಂತ್ರಿ ಮಾಡೋದು ಹೈಕಮಾಂಡ್' ಅಂದರು.

'ಹಾಗನ್ನಬೇಡಿ, ಎಷ್ಟೋ ಜನರಿಗೆ ಮಂತ್ರಿ, ಮುಖ್ಯಮಂತ್ರಿ ಸ್ಥಾನ ತಮ್ಮ ಕೃಪೆಯಿಂದ ಸಾಧ್ಯವಾಗಿದೆ'.

'ದೆಹಲಿಗೆ ಹೋಗಿ ಹೈಕಮಾಂಡ್ ಮನೆ ಬಾಗಿಲು ಬಡಿಯಲು ನಿಮ್ಮ ಶಾಸಕರಿಗೆ ಹೇಳಿ'.

'ಶಾಸಕರು ದೆಹಲಿಯಲ್ಲಿ ಬೀಡುಬಿಟ್ಟು ವಾರದಿಂದ ವರಿಷ್ಠರ ಬಾಗಿಲು ಬಡಿಯುತ್ತಿದ್ದಾರೆ, ಇನ್ನೆಷ್ಟು ಬಡಿಯಬೇಕೋ ಗೊತ್ತಾಗುತ್ತಿಲ್ಲ... ದೆಹಲಿಯ ಊಟತಿಂಡಿ, ನೀರು, ವಾತಾವರಣ ಹೇಗಿದೆಯೊ, ಶಾಸಕರ ಆರೋಗ್ಯದ ಗತಿ ಏನಾಯ್ತೊ?' ಎಂದ ಒಬ್ಬ.

'ಪಕ್ಷದಲ್ಲಿ ಸೀನಿಯಾರಿಟಿ, ಸಿನ್ಸಿಯಾರಿಟಿ ಇದ್ದರೂ ನಮ್ಮ ಶಾಸಕರಿಗೆ ಮಂತ್ರಿ ಯೋಗ ಕೂಡಿಬರುತ್ತಿಲ್ಲ. ಶಾಸಕರ ಗ್ರಹಗತಿ ಏರುಗತಿಯಲ್ಲಿದೆಯೋ ಅಧೋಗತಿಯಲ್ಲಿದೆಯೋ ನೋಡಿ ಹೇಳಿ' ಎಂದು ಜಾತಕ ಕೊಟ್ಟ.

'ಶಾಸಕರು ಮಂತ್ರಿಯಾಗಲೆಂದು ಅವರ ಪತ್ನಿ ಕಂಡ ಕಂಡ ದೇವರಿಗೆಲ್ಲಾ ಹರಕೆ ಹೊತ್ತಿದ್ದಾರೆ. ಮಂತ್ರಿ ಆಗುವವರೆಗೂ ಜೀವ ಬಿಡುವುದಿಲ್ಲ ಎಂದು ಶಾಸಕರ ತಂದೆ ಹಾಸಿಗೆಯಲ್ಲಿ ಉಸಿರು ಹಿಡಿದು ಮಲಗಿದ್ದಾರೆ...'

ಜಾತಕದ ಮೇಲೆ ಕಣ್ಣಾಡಿಸಿ ಗುರೂಜಿ ಬೆರಳುಗಳಲ್ಲಿ ಎಣಿಸಿ, ಗುಣಿಸಿದರು. ತಲೆಯಾಡಿಸಿ ನಿಟ್ಟುಸಿರುಬಿಟ್ಟರು.

'ಗ್ರಹದೋಷವಿದ್ದರೆ ಏನು ಪರಿಹಾರ ಮಾಡಬೇಕು ಹೇಳಿ, ಮಾಡ್ತೀವಿ' ಎಂದು ಕೈ ಮುಗಿದರು.

'ಮಂತ್ರಿ ಆಗದೆ ಶಾಸಕರು ಕ್ಷೇತ್ರದ ಕಡೆ ತಲೆ ಹಾಕಲಾಗುವುದಿಲ್ಲ...'

'ತಲೆಹಾಕದಂತಹ ಕೆಲ್ಸ ಏನು ಮಾಡಿದ್ದಾರೆ?'

'ಯಾವ ಕೆಲಸವನ್ನೂ ಮಾಡಿಲ್ಲ, ಅನುದಾನವಿಲ್ಲವೆಂದು ರಸ್ತೆಗಳ ಗುಂಡಿಗೆ ಹಿಡಿ ಮಣ್ಣೂ ಹಾಕಿಸಿಲ್ಲ, ಜನ ಸಿಟ್ಟಿಗೆದ್ದಿದ್ದಾರೆ. ಮಂತ್ರಿಯಾದರೆ ಅಭಿವೃದ್ಧಿ ಮಾಡ್ತಾರೆ ಅಂತ ಜನ ನಂಬುತ್ತಾರೆ, ನಾವು ನಂಬಿಸ್ತೀವಿ. ಇಲ್ಲಾಂದ್ರೆ ಶಾಸಕರನ್ನು ನಂಬಿಕೊಂಡ ನಮ್ಮ ರಾಜಕೀಯ ಅಸ್ತಿತ್ವವೂ ಹೋಗಿಬಿಡುತ್ತದೆ ಗುರೂಜಿ!' ಕಾರ್ಯಕರ್ತರು ಕಳವಳಗೊಂಡರು.

ಸಂಗತ

ಮಕ್ಕಳ ಮಿದುಳಿಗೆ 'ಪರದೆ'ಗಳ ಪ್ರಹಾರ!

ಮೊಬೈಲ್ ಫೋನ್ ಅಥವಾ ಕಂಪ್ಯೂಟರ್ ಪರದೆಗಳಿಗೆ ಮಕ್ಕಳು ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಿರುವುದು ಅವರ ಆರೋಗ್ಯಕ್ಕೆ ಮಾತ್ರವಲ್ಲ, ಕಲಿಕೆಗೂ ಹಾನಿಕರ.

● ನಡಹಳ್ಳಿ ವಸಂತ್

ಕೊರೊನಾ ಸಮಯದಲ್ಲಿ ಅನಿವಾರ್ಯವಾಗಿ ಪ್ರಾರಂಭವಾದ 'ಆನ್‌ಲೈನ್ ಕಲಿಕೆ' ಮಕ್ಕಳ ಮಿದುಳಿನ ಮೇಲೆ ಮಾಡಿರಬಹುದಾದ ಹಾನಿಯ ಕುರಿತು ನಮ್ಮ ದೇಶದಲ್ಲಿ ಅಧ್ಯಯನಗಳು ನಡೆದಿಲ್ಲ. ಈಗ ಕಲಿಕೆಯಲ್ಲಿ ತಂತ್ರಜ್ಞಾನ ಬಳಸುವುದು ದೊಡ್ಡ ಮಟ್ಟದಲ್ಲಿ ಪ್ರಾರಂಭವಾಗಿದೆ. ಸ್ಮಾರ್ಟ್ ತರಗತಿಗಳನ್ನು ಹೊಂದಿರುವ ಶಾಲೆಗಳಿಗೆ ಪೋಷಕರು ಹೆಚ್ಚು ಹೆಚ್ಚು ಹಣ ಕೊಟ್ಟು ಮಕ್ಕಳನ್ನು ಕಳಿಸಲು ಸಿದ್ಧರಾಗಿದ್ದಾರೆ. ತಂತ್ರಜ್ಞಾನ ಎಳೆಯ ಮಿದುಳುಗಳನ್ನು ಹೇಗೆ ಅಪಾಯಕ್ಕೆ ಒಡ್ಡುತ್ತಿದೆ ಎನ್ನುವ ಅರಿವು ಸರ್ಕಾರಗಳಿಗೆ ಮತ್ತು ತಜ್ಞರಿಗೆ ಇರುವಂತೆ ಕಾಣಿಸುವುದಿಲ್ಲ.

ಅಮೆರಿಕದಲ್ಲಿ ವ್ಯಾಲ್‌ಡಾರ್ಫ್ ಗುಂಪಿನ ಶಾಲೆಗಳಲ್ಲಿ ಕಂಪ್ಯೂಟರ್ ಬಳಕೆಯ ಮೇಲೆ ನಿರ್ಬಂಧವಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಂತೂ ಅವುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸಿಲಿಕಾನ್ ಕಣಿವೆಯ ವ್ಯಾಲ್‌ಡಾರ್ಫ್ ಶಾಲೆಗಳಲ್ಲಿನ ಶೇ 75ರಷ್ಟು ವಿದ್ಯಾರ್ಥಿಗಳು ತಂತ್ರಜ್ಞಾನ ಕಂಪನಿಗಳ ಮುಖಂಡರ ಮಕ್ಕಳು! ತಾವು ತಯಾರಿಸಿದ ಡಿಜಿಟಲ್ ಉತ್ಪನ್ನಗಳನ್ನು ಪ್ರಪಂಚದ ಎಲ್ಲೆಡೆ ಮಾರಾಟ ಮಾಡಿ ಹಣ ಬಾಚಿರುವ ಈ ಟೆಕ್ ಮುಖಂಡರು, ತಮ್ಮದೇ ಮಕ್ಕಳಿಗೆ ಆ ತಂತ್ರಜ್ಞಾನದ ಬಳಕೆಯ ಲಾಭ ಪಡೆಯಲು ಏಕೆ ಬಿಡುತ್ತಿಲ್ಲ? ಉತ್ತರ ಸುಲಭ. ಇವರ ತಂತ್ರಜ್ಞಾನ ಮಕ್ಕಳ ಬೆಳೆಯುತ್ತಿರುವ ಮಿದುಳಿಗೆ ತೀವ್ರವಾದ ಹಾನಿ ಉಂಟು ಮಾಡುತ್ತಿದೆ ಎನ್ನುವ ಒಳಗುಟ್ಟು ಇವರಿಗೆಲ್ಲ ತಿಳಿದಿದೆ.

ಜಾರೆಡ್ ಹೋವರ್ತ್ ಎನ್ನುವ ನರವಿಜ್ಞಾನಿಯ ಮಾತುಗಳು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು. 1800ನೇ ಇಸವಿಯ ನಂತರದ ಎಲ್ಲಾ ತಲೆಮಾರಿನ ಮಕ್ಕಳನ್ನು ಅಧ್ಯಯನ ಮಾಡಿದಾಗ ತಿಳಿದ ಅಂಶವೆಂದರೆ, ಪ್ರತಿ ತಲೆಮಾರಿನ ಮಕ್ಕಳು ಅವರ ಹಿಂದಿನ ತಲೆಮಾರಿನವರಿಗಿಂತ ಹೆಚ್ಚು ಬುದ್ಧಿವಂತರು ಮತ್ತು ಸಕ್ಷಮರಾಗುತ್ತಾ ಬರುತ್ತಿದ್ದಾರೆ. ಇದಕ್ಕೆ ಕಾರಣ, ಮಕ್ಕಳಿಗೆ ಸಿಗುತ್ತಿರುವ ವ್ಯವಸ್ಥಿತ ಶಿಕ್ಷಣ. ಆದರೆ, 2000 ಇಸವಿಯ ನಂತರ ಹುಟ್ಟಿದ ಮಕ್ಕಳು ಮಾತ್ರ ಕಲಿಕೆಯ ವಿಚಾರದಲ್ಲಿ ಹಿಂದಿನ ತಲೆಮಾರಿಗಿಂತ ಕೆಳಕ್ಕೆ ಇಳಿದಿದ್ದಾರೆ. ಕಳೆದ 25 ವರ್ಷಗಳಲ್ಲಿ ಮಾನವನ ವಂಶವಾಹಿಗಳಲ್ಲಿ, ದೇಹರಚನೆಯಲ್ಲಿ ಮತ್ತು ಜೀವರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆಗಳೇನೂ ಆಗಿಲ್ಲ. ಬದಲಾವಣೆ ಆಗಿರುವುದೆಂದರೆ, ಕಲಿಕೆಯಲ್ಲಿ ಹೆಚ್ಚುತ್ತಿರುವ ತಂತ್ರಜ್ಞಾನದ ಬಳಕೆ ಮಾತ್ರ.

ಟಿ.ವಿ, ಕಂಪ್ಯೂಟರ್ ಮತ್ತು ಮೊಬೈಲ್ ಪರದೆಗಳ ಬಳಕೆ ಮಕ್ಕಳ ಮಿದುಳಿಗೆ ಹೇಗೆ ಅಪಾಯಕಾರಿ ಎನ್ನುವುದರ ಬಗ್ಗೆ ಅಮೆರಿಕದಲ್ಲಿ ನರವಿಜ್ಞಾನಿಗಳು ಕೆಲವು ಪ್ರಯೋಗಗಳನ್ನು ನಡೆಸಿದ್ದಾರೆ. 3ರಿಂದ 5 ವರ್ಷದ 60 ಮಕ್ಕಳಿಗೆ ಮೊಬೈಲ್ ಬಳಸಲು ಕೊಟ್ಟು, ಅವರ ಮಿದುಳನ್ನು ದೀರ್ಘ ಕಾಲದವರೆಗೆ ಎಂಆರ್‌ಐ ಯಂತ್ರಗಳಿಂದ ಸ್ಕ್ಯಾನ್ ಮಾಡಲಾಯಿತು. ಪರದೆಯ ಒಡನಾಟ ಮಕ್ಕಳ ಮಿದುಳಿನ ಬಿಳಿಯ ಜೀವಕೋಶಗಳ ಬೆಳವಣಿಗೆಯನ್ನು ಕುಂದಿಸುತ್ತಿತ್ತು. ಇದರಿಂದಾಗಿ ಮಿದುಳಿನ ಸಂಪರ್ಕ ಜಾಲಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ.

ಆಸ್ಟ್ರೇಲಿಯಾದ ಸನ್‌ಶೈನ್ ವಿಶ್ವವಿದ್ಯಾಲಯದ ಮೈಕ್ ನಿಗೆಲ್ ಎನ್ನುವ ನರವಿಜ್ಞಾನಿ ಹೇಳುವಂತೆ, ದಿನಕ್ಕೆ ಸುಮಾರು ಎರಡು ಗಂಟೆಯ ಪರದೆ ಸಮಯದಿಂದ ಭಾಷೆಯ ಕಲಿಕೆ, ಸಂವಹನ ಮುಂತಾದ ಪ್ರಾಥಮಿಕ ಅಂಶಗಳಲ್ಲಿ ಮಕ್ಕಳು ಹಿಂದುಳಿಯುತ್ತಾರೆ. ಇನ್ನೂ ಕೆಲವು ಪ್ರಯೋಗಗಳಲ್ಲಿ, ಪರದೆಯ ಬಳಕೆಯು ಮಿದುಳಿನ ಬೂದು ಬಣ್ಣದ ಜೀವಕೋಶಗಳಿಗೂ ಹಾನಿ ಉಂಟು ಮಾಡುತ್ತಿದೆ ಎನ್ನುವುದು ತಿಳಿದುಬಂದಿದೆ. ಇದರಿಂದಾಗಿ ಮಕ್ಕಳ ಸ್ವಯಂ ನಿಯಂತ್ರಣ, ಸಹಾನುಭೂತಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಕ್ಷಮತೆ ಕುಗ್ಗುತ್ತದೆ. ವಿವೇಚನೆ, ತಾರ್ಕಿಕ ಚಿಂತನೆ, ಏಕಾಗ್ರತೆ ಮುಂತಾದವನ್ನು ನಿರ್ವಹಿಸುವ ಮಾನವರಲ್ಲಿ ಮಾತ್ರ ಇರುವ ಮುಮ್ಮೆದುಳಿನ ಬೆಳವಣಿಗೆ ನಿಧಾನವಾಗುತ್ತದೆ ಎಂದು ಕೂಡ ತಜ್ಞರು ಹೇಳುತ್ತಿದ್ದಾರೆ.

21ನೇ ಶತಮಾನದಲ್ಲಿ ಅಮೆರಿಕದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ 746 ಪಟ್ಟು ಹೆಚ್ಚಾಗಿದೆ ಎಂದು ಅಮೆರಿಕದ ಪ್ರಸಿದ್ಧ ಮನೋವೈದ್ಯ ಮತ್ತು ಲೇಖಕ ಡಾ. ಡ್ಯಾನಿಯಲ್ ಅಮೆನ್ ಹೇಳುತ್ತಾರೆ. ಜೊತೆಗೆ, ಮನೋರೋಗಗಳ ಔಷಧಗಳ ಬಳಕೆಯೂ ಮಕ್ಕಳಲ್ಲಿ ಗಮನಾರ್ಹವಾಗಿ ಹೆಚ್ಚುತ್ತಿದೆ. ಹಿಂಸಾತ್ಮಕ ಪ್ರವೃತ್ತಿ ಮತ್ತು ದೇಹ–ಮನಸ್ಸುಗಳು ಪ್ರಬುದ್ಧವಾಗುವ ಮೊದಲೇ ನಡೆಸುವ ಲೈಂಗಿಕ ಚಟುವಟಿಕೆ ಕೂಡ ಏರುಗತಿಯಲ್ಲಿದೆ. ಇವೆಲ್ಲವೂ ಅಮೆರಿಕದಂತಹ ಮುಂದುವರಿದ ದೇಶಗಳಲ್ಲಿ ಮಾತ್ರ, ನಮ್ಮ ಮಕ್ಕಳಿಗೆ ಅಂತಹ ತೊಂದರೆಯಿಲ್ಲ ಎನ್ನುವ ಭಾವನೆ ಪೋಷಕರಲ್ಲಿದ್ದರೆ ಅವರ ಭ್ರಮೆಯ ಬಲೂನು ಒಡೆಯಲು ಬಹಳ ಸಮಯ ಬೇಕಾಗಿಲ್ಲ.

ನಮ್ಮ ದೇಶದಲ್ಲಿ ಹಳ್ಳಿಗಾಡಿನ ಮಕ್ಕಳು ಕೂಡ ದಿನಕ್ಕೆ ಕಡಿಮೆ ಎಂದರೆ 2–3 ಗಂಟೆ ಪರದೆಯ ಮುಂದೆ ಕಳೆಯುತ್ತಾರೆ. ನಗರದ ಮಕ್ಕಳಲ್ಲಿ ಈ ಅವಧಿ ಇನ್ನೂ ಹೆಚ್ಚಾಗಿರುತ್ತದೆ. ನಮ್ಮ ದೇಹ, ಮಿದುಳು ಹಾಗೂ ನರಮಂಡಲ ಮತ್ತೊಂದು ಮಾನವಜೀವಿಯಿಂದ ಮಾತ್ರ ಕಲಿಕೆಯನ್ನು ಸಮರ್ಥವಾಗಿ ಗ್ರಹಿಸಲು ರೂಪುಗೊಂಡಿವೆ ಎಂದು ವಿಜ್ಞಾನಿಗಳು ಮತ್ತೆ ಮತ್ತೆ ನಿರೂಪಿಸಿದ್ದಾರೆ. ಆದಷ್ಟು ಬೇಗ ಶಿಕ್ಷಣ ತಜ್ಞರು, ಸರ್ಕಾರ ಮತ್ತು ಪೋಷಕರು ಎಚ್ಚತ್ತುಕೊಂಡು, ಕನಿಷ್ಠ 15 ವರ್ಷಗಳವರೆಗೂ ಮಕ್ಕಳಿಗೆ ಪರದೆ ಕಲಿಕೆ ಮತ್ತು ಬಳಕೆಯನ್ನು ನಿರ್ಬಂಧಿಸದಿದ್ದರೆ ಮುಂದಿನ ತಲೆಮಾರುಗಳ ಭವಿಷ್ಯ ತೀವ್ರ ಅಪಾಯಕ್ಕೆ ಸಿಲುಕುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಕ್ಕಟ್ಟು ಅಂತ್ಯಗೊಳಿಸಲು ಅಮೆರಿಕ-ಇರಾನ್ ಸಮ್ಮತಿ
19ರಂದು ಮಹತ್ವದ ಮಾತುಕತೆ

ಒಪ್ಪಂದದ ನಂತರ ಕರಗೀತೇ ಕಗ್ಗಂಟು?

ಪ್ರಜಾವಾಣಿ ವಾರ್ತೆ

ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳು ಪಶ್ಚಿಮ ಏಷ್ಯಾದ ಬಿಕ್ಕಟ್ಟು ಯಾವಾಗ ಶಮನವಾಗುವುದೋ ಎಂದು ಕಾತರದಿಂದ ಎದುರುನೋಡುತ್ತಿದ್ದವು. ಕೊನೆಗೂ ಅಂಥ ಗಳಿಗೆ ಹತ್ತಿರವಾಗಿದೆ. ಯುದ್ಧ ಅಂತ್ಯಗೊಳಿಸುವ ಸಂಬಂಧ ಒಪ್ಪಂದ ಅಂತಿಮವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದರು. ಮಧ್ಯಸ್ಥಿಕೆದಾರ ಎಂದು ಗುರುತಿಸಿಕೊಂಡಿದ್ದ ಪಾಕಿಸ್ತಾನ ಕೂಡ ಇದನ್ನು ದೃಢಪಡಿಸಿತ್ತು. ಅದರ ಬೆನ್ನಲ್ಲೇ, ಸೋಮವಾರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಒಪ್ಪಂದಕ್ಕೆ ಸಹಿ ಬಿದ್ದಿದೆ, ಅದರ ವಿವರಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು' ಎಂದಿದ್ದಾರೆ. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಕೂಡ ಇದನ್ನು ಖಚಿತಪಡಿಸಿದ್ದು, ಒಪ್ಪಂದಕ್ಕೆ ಈಗಾಗಲೇ ಎಲೆಕ್ಟ್ರಾನಿಕ್ ಸಹಿ ಬಿದ್ದಿದೆ ಎಂದಿದ್ದಾರೆ. ಆದರೆ, ಇದರಲ್ಲಿ ಅತ್ಯಂತ ಸಾಮಾನ್ಯ ಅಂಶಗಳು ಮಾತ್ರ ಇದ್ದು, ಶುಕ್ರವಾರ (ಜೂನ್ 19) ಸ್ವಿಟ್ಜರ್ಲೆಂಡ್‌ನಲ್ಲಿ ಅಧಿಕೃತವಾದ, ವಿಸ್ತೃತವಾದ ಒಪ್ಪಂದ ಏರ್ಪಡಲಿದೆ ಎಂದಿದ್ದಾರೆ. ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕೂಡ ಇದನ್ನು ಖಚಿತಪಡಿಸಿದ್ದಾರೆ.

ಯುದ್ಧ ನಿಲ್ಲಿಸುವ ಬಗ್ಗೆ ಎರಡೂ ದೇಶಗಳ ಮುಖಂಡರಲ್ಲಿ ಸಮ್ಮತಿ ಇದೆ ಎನ್ನುವುದು ಸ್ಪಷ್ಟವಾಗಿದೆ. ಮಧ್ಯಂತರ ಒಪ್ಪಂದಕ್ಕೆ ಎರಡೂ ದೇಶಗಳು ಸಮ್ಮತಿಸಿವೆ ಎನ್ನುವುದೂ ಸ್ಪಷ್ಟ. ಆದರೆ ಒಪ್ಪಂದದಲ್ಲಿ ಎರಡೂ ದೇಶಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ಮಹತ್ವದ ವಿಚಾರಗಳ ಬಗ್ಗೆ ಒಮ್ಮತಕ್ಕೆ ಬರಲಾಗಿದೆಯೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ.

ಮುಕ್ತವಾಗುವುದೇ ಹೊರ್ಮುಜ್?: ಶಾಂತಿಒಪ್ಪಂದದ ಕೇಂದ್ರದಲ್ಲಿರುವುದು ಹೊರ್ಮುಜ್ ಜಲಸಂಧಿ. ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಿರುವ ಡೊನಾಲ್ಡ್ ಟ್ರಂಪ್ ಅವರು, ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಜಲಸಂಧಿ ಈಗಾಗಲೇ ಭಾಗಶಃ ಮುಕ್ತವಾಗಿದ್ದು, ಶುಕ್ರವಾರದಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ ಎಂದಿದ್ದಾರೆ. ಹೊರ್ಮುಜ್ ಮೂಲಕ ಹಡಗುಗಳ ಸಂಚಾರವು 60 ದಿನಗಳವರೆಗೆ ಉಚಿತವಾಗಿರಲಿದೆ ಮತ್ತು ಮುಂದೆಯೂ ಅದು ಹಾಗೆಯೇ ಮುಂದುವರಿಯಲಿದೆ, ಜತೆಗೆ ತಕ್ಷಣದಿಂದಲೇ ಅಮೆರಿಕವು ಬಂದರುಗಳ ಮೇಲಿನ ನಿರ್ಬಂಧವನ್ನು ತೆಗೆದುಹಾಕಲಿದೆ ಎಂದೂ ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ, ಹೊರ್ಮುಜ್ ಅನ್ನು ಮುಕ್ತಗೊಳಿಸುವ ಬಗ್ಗೆ ಇರಾನ್ ಸ್ಪಷ್ಟನೆ ನೀಡಿಲ್ಲ. ಹೊರ್ಮುಜ್ ಮೂಲಕ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅಗತ್ಯವಾದ ಕ್ರಮಗಳನ್ನು ಒಮಾನ್ ಮತ್ತು ಇರಾನ್ ಕೈಗೊಳ್ಳಲಿವೆ ಎಂದಷ್ಟೇ ಇರಾನ್‌ನ ವಿದೇಶಾಂಗ ಇಲಾಖೆಯ ವಕ್ತಾರ ಇಸ್ಮಾಯಿಲ್ ಬಘೈ ಹೇಳಿದ್ದಾರೆ.

ಹೊರ್ಮುಜ್ ಮೂಲಕ ಹಡಗುಗಳ ಸಂಚಾರವು ಹಿಂದಿನಂತೆಯೇ ಉಚಿತವಾಗಿರಲಿದೆಯೇ ಎನ್ನುವ ಬಗ್ಗೆ ಕೂಡ ಸ್ಪಷ್ಟತೆ ಇಲ್ಲ. ಹಡಗುಗಳಿಗೆ ಸುಂಕ ವಿಧಿಸುವ ಬಗ್ಗೆ ಚಿಂತಿಸುತ್ತಿರುವುದಾಗಿ ಇರಾನ್ ಯುದ್ಧದ ಸಮಯದಲ್ಲಿ ಹೇಳಿತ್ತು. ಹೊರ್ಮುಜ್ ಮೂಲಕ ಸಾಗುವ ಹಡಗುಗಳಿಗೆ ಸೇವಾ ಶುಲ್ಕ ವಿಧಿಸುವ ಅಂಶವನ್ನೂ ಇರಾನ್ ಶಾಂತಿ ಒಪ್ಪಂದದಲ್ಲಿ ಸೇರಿಸಿದ್ದು, ಅದರ ಬಗ್ಗೆಯೂ ಚರ್ಚೆಯಾಗಲಿದೆ ಎಂದು ಇರಾನ್‌ನ ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ. ಹೊರ್ಮುಜ್ ಮೂಲಕ ಪೂರ್ಣಪ್ರಮಾಣದಲ್ಲಿ ಹಡಗು ಸಂಚಾರಕ್ಕೆ ಇರಾನ್ ಸಮ್ಮತಿಸಿದರೂ, ಜಲಸಂಧಿಯಲ್ಲಿ ಇರಾನ್ ಇರಿಸಿರುವ ಸ್ಫೋಟಕಗಳನ್ನು ಹುಡುಕಿ ತೆರವುಗೊಳಿಸಲು ತಿಂಗಳುಗಳೇ ಆಗಬಹುದು ಎನ್ನಲಾಗುತ್ತಿದೆ.

ಅಣ್ವಸ್ತ್ರ ಕಾರ್ಯಕ್ರಮ ನಿಲ್ಲುವುದೇ?: ಇರಾನ್ ಅಣ್ವಸ್ತ್ರಗಳನ್ನು ಹೊಂದಬಾರದು ಎನ್ನುವುದನ್ನು ಅಮೆರಿಕ ಮೊದಲಿನಿಂದಲೂ ಪ್ರತಿಪಾದಿಸುತ್ತಲೇ ಬಂದಿದೆ. ಇರಾನ್ ಮೇಲಿನ ದಾಳಿಗೆ ಅದೂ ಪ್ರಮುಖ ಕಾರಣ ಎಂದು ಅಮೆರಿಕ ಹೇಳಿತ್ತು. ಆದರೆ, ಶಾಂತಿ ಒಪ್ಪಂದದಲ್ಲಿ ಈ ಬಗ್ಗೆ ಚರ್ಚೆಯಾಗಿದೆಯೇ ಎನ್ನುವ ಬಗ್ಗೆ ಯಾವುದೇ ಮಾಹಿತಿ ನೀಡಲಾಗಿಲ್ಲ. ಇರಾನ್ ತನ್ನ ಗುರಿನಿರ್ದೇಶಿತ ಕ್ಷಿಪಣಿ ಕಾರ್ಯಕ್ರಮವನ್ನು ಕೈಬಿಡಬೇಕು ಮತ್ತು ಬಂಡುಕೋರ ಗುಂಪುಗಳಿಗೆ ನೆರವು ನೀಡುವುದನ್ನು ನಿಲ್ಲಿಸಬೇಕು ಎನ್ನುವುದು ಅಮೆರಿಕದ ಪ್ರಮುಖ ಬೇಡಿಕೆ.

ಅಮೆರಿಕವು ಇರಾನ್ ಮೇಲೆ ವಿಧಿಸಿರುವ ಆರ್ಥಿಕ ನಿರ್ಬಂಧಗಳನ್ನು ತೆಗೆದು ಹಾಕಲಿದೆ, ವಿದೇಶಗಳಲ್ಲಿರುವ ಹಣವನ್ನು ಪಡೆಯಲು ಇರಾನ್‌ಗೆ ನೆರವಾಗಲಿದೆ. ಇದಕ್ಕಾಗಿ ಇರಾನ್ ಅಣ್ವಸ್ತ್ರ ಕಾರ್ಯಕ್ರಮವನ್ನು ಕೈಬಿಡಬೇಕು ಮತ್ತು ಲೆಬನಾನ್‌ನಲ್ಲಿ ಹುಥಿಗಳಿಗೆ ನೆರವು ನೀಡುತ್ತಿರುವುದನ್ನೂ ನಿಲ್ಲಿಸಬೇಕು ಎನ್ನುವುದು ಅಮೆರಿಕದ ವಾದ. ಹಾನಿಯನ್ನು ಸರಿಪಡಿಸಲು ಅಮೆರಿಕ 3,000 ಕೋಟಿ ಡಾಲರ್ ಹಣವನ್ನು ಇರಾನ್‌ಗೆ ನೀಡಲಿದೆ ಎಂದು ಹೇಳಲಾಗಿತ್ತು. ಆದರೆ, ಟ್ರಂಪ್ ಇದನ್ನು ತಳ್ಳಿ ಹಾಕಿದ್ದಾರೆ. ಒಪ್ಪಂದದ ಭಾಗವಾಗಿ ಅಣ್ವಸ್ತ್ರ ಕಾರ್ಯಕ್ರಮದ ಬಗ್ಗೆ ಮಾತುಕತೆ ನಡೆಯುವುದೇ ಎನ್ನುವುದು ಖಚಿತವಿಲ್ಲ.

ಲೆಬನಾನ್ ಕಗ್ಗಂಟು: ಲೆಬನಾನ್‌ನಿಂದ ಇಸ್ರೇಲ್ ಸೈನ್ಯವನ್ನು ಹೊರಹೋಗುವಂತೆ ಮಾಡುವುದು, ಸಂಘರ್ಷ ನಿಲ್ಲಿಸುವುದು ಕೂಡ ಒಪ್ಪಂದದ ಪ್ರಮುಖ ಅಂಶವಾಗಿದೆ, ಇಸ್ರೇಲ್ ಅನ್ನು ಶಾಂತಿ ಒಪ್ಪಂದಕ್ಕೆ ಒಪ್ಪುವಂತೆ ಮಾಡುವುದು ಅಮೆರಿಕದ ಕೆಲಸ ಎಂದು ಇರಾನ್ ವಿದೇಶಾಂಗ ಇಲಾಖೆ ವಕ್ತಾರ ಇಸ್ಮಾಯಿಲ್ ಬಘೈ ಹೇಳಿದ್ದಾರೆ. ಆದರೆ, ಲೆಬನಾನ್ ವಿಚಾರವು ಒಪ್ಪಂದದ ಭಾಗವಲ್ಲ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ಕೂಡ ಇದನ್ನು ಒಪ್ಪಿಲ್ಲ. ದಾಳಿ ನಿಲ್ಲಿಸಿದರೂ, ತನ್ನ ಸೇನೆಯನ್ನು ಲೆಬನಾನ್‌ನಿಂದ ವಾಪಸ್ ಕರೆಸಿಕೊಳ್ಳುವುದಿಲ್ಲ ಎಂದು ಹೇಳಿದೆ. ಇದು ಒಪ್ಪಂದ ಏರ್ಪಡುವ ದಿಸೆಯಲ್ಲಿ ತೊಡಕಾಗುವ ಸಾಧ್ಯತೆ ಇದೆ.

ಆಧಾರ: ರಾಯಿಟರ್ಸ್, ದಿ ಗಾರ್ಡಿಯನ್, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್

ಅಂಕಿ ಅಂಶಗಳಲ್ಲಿ ಯುದ್ಧ



107 ದಿನ
ಯುದ್ಧ ನಡೆದ ಅವಧಿ (ಕದನವಿರಾಮದ ದಿನಗಳನ್ನೂ ಸೇರಿಸಿ)

3,300-3,500
ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಮೃತಪಟ್ಟ ಇರಾನಿಯನ್ನರು

26,000ಕ್ಕೂ ಹೆಚ್ಚು
ಗಾಯಗೊಂಡ ಇರಾನಿಯನ್ನರು

32 ಲಕ್ಷಕ್ಕೂ ಹೆಚ್ಚು
ಯುದ್ಧದಿಂದಾಗಿ ಇರಾನ್‌ನಲ್ಲಿ ನಿರಾಶ್ರಿತರಾದವರು

3,700
ಇಸ್ರೇಲ್ ಲೆಬನಾನ್ ಮೇಲೆ ನಡೆಸಿದ ದಾಳಿಯಲ್ಲಿ ಮೃತಪಟ್ಟವರು

30ಕ್ಕೂ ಹೆಚ್ಚು
ಯುದ್ಧದಲ್ಲಿ ಮೃತಪಟ್ಟ ಇಸ್ರೇಲಿಗರು (ಸೈನಿಕರೂ ಸೇರಿ)

8,000ಕ್ಕೂ ಹೆಚ್ಚು
ಯುದ್ಧದಲ್ಲಿ ಗಾಯಗೊಂಡ ಇಸ್ರೇಲ್ ನಾಗರಿಕರು

15 ಇರಾನ್ ದಾಳಿಯಲ್ಲಿ ಮೃತಪಟ್ಟ ಅಮೆರಿಕದ ಸೇನಾ ಸಿಬ್ಬಂದಿ

409
ಯುದ್ಧದಲ್ಲಿ ಗಾಯಗೊಂಡ ಅಮೆರಿಕದ ಸೈನಿಕರು

20 ಇರಾನ್ ದಾಳಿಯಲ್ಲಿ ಹಾನಿಗೀಡಾದ ಅಮೆರಿಕದ ಸೇನಾ ನೆಲೆಗಳು

50 ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಹಾನಿಗೊಳಗಾದ ಇರಾನ್ ಸೇನಾ ನೆಲೆಗಳು

13 ಸಾವಿರ
ಅಮೆರಿಕ ಇರಾನಿನಲ್ಲಿ ದಾಳಿ ನಡೆಸಿದ ಗುರಿಗಳು (ಸ್ಥಳಗಳು)

200 ಕೋಟಿ ಡಾಲರ್
ವಿಶ್ವಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ ಪ್ರತಿ ದಿನ ಯುದ್ಧಕ್ಕೆ ಆದ ವೆಚ್ಚ

3,000 ಕೋಟಿ
ಡಾಲರ್‌ಗೂ ಹೆಚ್ಚು
ಯುದ್ಧದಿಂದಾಗಿ ಅಮೆರಿಕಕ್ಕೆ ಆದ ಅಂದಾಜು ನಷ್ಟ

30,000 ಕೋಟಿ
ಡಾಲರ್‌ಗೂ ಹೆಚ್ಚು
ಯುದ್ಧದಿಂದಾಗಿ ಇರಾನ್‌ಗೆ ಆದ ಅಂದಾಜು ನಷ್ಟ

20,000 ಕೋಟಿ
ಡಾಲರ್‌ಗೂ ಹೆಚ್ಚು
ಯುದ್ಧದಿಂದಾಗಿ ಅರಬ್ ರಾಷ್ಟ್ರಗಳಿಗೆ ಆದ ಅಂದಾಜು ಆರ್ಥಿಕ ನಷ್ಟ

ಈಡೇರಿತೇ ಟ್ರಂಪ್ ಉದ್ದೇಶ?

ಫೆ.28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಆರಂಭಿಸಿದ ನಂತರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕನಿಷ್ಠ ಎಂದರೂ 38 ಬಾರಿ, 'ಯುದ್ಧ ಮುಗಿಯಿತು. ಅಮೆರಿಕವು ಗೆದ್ದಿತು' ಎಂದು ಹೇಳಿದ್ದರು. ಇರಾನಿನ ವಾಯು ಪಡೆ, ನೌಕಾ ಪಡೆಯನ್ನು ಸಂಪೂರ್ಣವಾಗಿ ಧ್ವಂಸ ಮಾಡಿದ್ದೇವೆ ಎಂದೂ ಹಲವು ಬಾರಿ ಘೋಷಿಸಿದ್ದರು. ಆದರೆ, ವಾಸ್ತವದಲ್ಲಿ ಏನೂ ಆಗಿರಲಿಲ್ಲ. ದಾಳಿ-ಪ್ರತಿದಾಳಿ ಮುಂದುವರಿದಿತ್ತು. ಇರಾನ್, ಅರಬ್ ದೇಶಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುತ್ತಲೇ ಇತ್ತು. ಅದರ ವಿಮಾನಗಳು, ಡ್ರೋನ್‌ಗಳನ್ನು ಹೊಡೆದುರುಳಿಸಿತ್ತು. ಅಷ್ಟೇ ಏಕೆ, ಅಮೆರಿಕದ ಯುದ್ಧನೌಕೆಗಳ ಮೇಲೂ ದಾಳಿ ನಡೆಸಲು ಯತ್ನಿಸಿತ್ತು.

'ಭಯೋತ್ಪಾದಕ ರಾಷ್ಟ್ರವಾಗಿರುವ ಇರಾನ್, ಯಾವುದೇ ಕಾರಣಕ್ಕೂ ಅಣ್ವಸ್ತ್ರ ಹೊಂದುವುದಕ್ಕೆ ಅವಕಾಶ ಕೊಡುವುದಿಲ್ಲ' ಎಂದು ಪ್ರತಿಪಾದಿಸುತ್ತಲೇ ಬಂದ ಟ್ರಂಪ್, ಅದೇ ಕಾರಣಕ್ಕೆ ಈ ಯುದ್ಧ ನಡೆಯುತ್ತಿದೆ ಎಂದು ಹೇಳಿದ್ದರು. ಜೊತೆಗೆ ಅದರ ಸೇನಾ ಸಾಮರ್ಥ್ಯವನ್ನು ನಾಶಗೊಳಿಸುವುದು ಮತ್ತು ಇರಾನ್‌ನಲ್ಲಿರುವ ಧಾರ್ಮಿಕ ಪ್ರಭುತ್ವವನ್ನು ಕೊನೆಗೊಳಿಸುವುದಾಗಿಯೂ ಹೇಳಿದ್ದರು. ಆದರೆ, ಯುದ್ಧವು ಕೊನೆಗೊಂಡ ಹೊತ್ತಿನಲ್ಲಿ ಅವರ ಉದ್ದೇಶ ಈಡೇರಿತೇ ಎಂಬ ಪ್ರಶ್ನೆ ಉದ್ಭವವಾಗಿದೆ.



ಇರಾನ್ ಮೇಲಿನ ದಾಳಿ ಮತ್ತು ಅದನ್ನು ನಿರ್ವಹಿಸಿದ ರೀತಿಗೆ ಸ್ವದೇಶದಲ್ಲೂ ಟೀಕೆ ಎದುರಿಸುತ್ತಿರುವ ಡೊನಾಲ್ಡ್ ಟ್ರಂಪ್ ಅವರು, ಭವಿಷ್ಯದಲ್ಲಿ ಇರಾನ್ ಅಣ್ವಸ್ತ್ರ ಹೊಂದುವುದಿಲ್ಲ. ಈ ಷರತ್ತಿಗೆ ಅದು ಒಪ್ಪಿಕೊಂಡಿದೆ ಎಂದು ಹೇಳಿದ್ದಾರೆ. ತಮ್ಮ ಶ್ರಮದಿಂದಾಗಿ ಇಸ್ರೇಲ್ ಅಣ್ವಸ್ತ್ರದಿಂದ ನಿರ್ನಾಮ ಆಗುವುದು ತಪ್ಪಿದೆ. ಪಶ್ಚಿಮ ಏಷ್ಯಾ ಇನ್ನು ಮುಂದೆ ಸುರಕ್ಷಿತವಾಗಿರಲಿದೆ ಎಂದೂ ಹೇಳಿಕೊಂಡಿದ್ದಾರೆ.

ಆದರೆ, ಅಣ್ವಸ್ತ್ರಕ್ಕೆ ಸಂಬಂಧಿಸಿದಂತೆ ಅಮೆರಿಕ ಹಾಕಿರುವ ಷರತ್ತನ್ನು ಇರಾನ್ ಇನ್ನೂ ಒಪ್ಪಿಕೊಂಡಿಲ್ಲ ಎನ್ನಲಾಗಿದೆ. ಇತ್ತೀಚೆಗೆ ಅಮೆರಿಕದೊಂದಿಗೆ ನಡೆದ ಮಾತುಕತೆಯಲ್ಲಿ ಯುರೇನಿಯಂ ಅನ್ನು ಸಂವರ್ಧಿಸುವುದು ಮತ್ತು ಅಣ್ವಸ್ತ್ರವನ್ನು ಹೊಂದುವ ಹಕ್ಕು ತನಗಿದೆ ಎಂದು ಅದು ಬಲವಾಗಿ ಪ್ರತಿಪಾದಿಸಿದೆ ಎನ್ನಲಾಗುತ್ತಿದೆ.

19ರಂದು ನಡೆಯಲಿರುವ ಒಪ್ಪಂದದ 14 ಅಂಶಗಳಲ್ಲಿ ಇರಾನ್ ಪರಮಾಣು ಕಾರ್ಯಕ್ರಮ ಸೇರಿದಂತೆ ಬಗೆಹರಿಯದ ಬಿಕ್ಕಟ್ಟುಗಳ ಬಗ್ಗೆ ಮಾತುಕತೆ ನಡೆಸಲು 60 ದಿನಗಳ ಅವಕಾಶ ನೀಡಲಾಗಿದೆ. ಅದರ ಬಳಿಕವೇ ಅಂತಿಮ ನಿರ್ಧಾರ ಹೊರಬೀಳಲಿದೆ. ಅಲ್ಲಿಯವರೆಗೂ ಕಾಯಬೇಕಾಗಿದೆ.

ಜಾಗತಿಕ ತೈಲ, ಅನಿಲ ಸಾಗಣೆಯವ ಮೇಲೆ ಪರಿಣಾಮ ಬೀರಿದ್ದ ಹೊರ್ಮುಜ್ ಜಲಸಂಧಿಯನ್ನು ಯುದ್ಧದ ಅವಧಿಯಲ್ಲಿ ಬಲವಂತವಾಗಿ ತೆರೆಯುವ ಅಮೆರಿಕದ ಯತ್ನವೂ ಸಫಲವಾಗಿರಲಿಲ್ಲ. ಅಮೆರಿಕ ತನ್ನ ಬಂದರು, ನೌಕೆಗಳ ಸಾಗಣೆ ಮೇಲೆ ನಿರ್ಬಂಧ ವಿಧಿಸಿದ್ದರೂ, ಇರಾನ್ ಹೊರ್ಮುಜ್ ಜಲಸಂಧಿಯ ಮೇಲಿನ ತನ್ನ ಬಿಗಿ ಹಿಡಿತವನ್ನು ಸಡಿಲಿಸಿರಲಿಲ್ಲ. ಈಗಲೂ ಅಷ್ಟೇ, ಜಲಸಂಧಿಯಲ್ಲಿ ಸಂಚಾರ ಶುಲ್ಕರಹಿತವಾಗಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಆದರೆ, ಇರಾನ್ ಈ ಬಗ್ಗೆ ಸ್ಪಷ್ಟವಾಗಿ ಏನೂ ಹೇಳಿಲ್ಲ. ಇರಾನಿನ ಆಡಳಿತವನ್ನು ಬದಲಿಸಲೂ ಟ್ರಂಪ್ ಅವರಿಗೆ ಸಾಧ್ಯವಾಗಿಲ್ಲ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಒಪ್ಪಂದದಲ್ಲಿ ಏನಿರಲಿದೆ?

ಯುದ್ಧ ಕೊನೆಗೊಳಿಸುವ ಸಂಬಂಧ 14 ಅಂಶಗಳ ಒಪ್ಪಂದಕ್ಕೆ ಅಮೆರಿಕ ಮತ್ತು ಇರಾನ್ ಶುಕ್ರವಾರ ಸಹಿ ಹಾಕಲಿವೆ. ಆದರೆ, ಒಪ್ಪಂದದಲ್ಲಿರುವ ಅಂಶಗಳು ಏನೇನು ಎಂಬುದು ನಿಖರವಾಗಿ ತಿಳಿದಿಲ್ಲ. ಅಮೆರಿಕವಾಗಲಿ, ಇರಾನ್ ಆಗಲಿ 14 ಅಂಶಗಳನ್ನು ಬಹಿರಂಗ ಪಡಿಸಿಲ್ಲ. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಎರಡೂ ದೇಶಗಳ ಮುಖಂಡರು ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

ಅವುಗಳಲ್ಲಿ ಪ್ರಮುಖವಾದುದು

- ಎಲ್ಲಾ ಕಡೆಗಳಲ್ಲೂ ದಾಳಿ-ಪ್ರತಿದಾಳಿಯನ್ನು ತಕ್ಷಣದಿಂದಲೇ ನಿಲ್ಲಿಸುವುದು. ಲೆಬನಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯೂ ಇದರಲ್ಲಿ ಸೇರಿದೆ
- ಇರಾನ್‌ನ ಬಂದರುಗಳು ಮತ್ತು ಹಡಗುಗಳ ಸಂಚಾರದ ಮೇಲೆ ಅಮೆರಿಕ ಹೇರಿರುವ ನಿರ್ಬಂಧವನ್ನು ತೆರವುಗೊಳಿಸುವುದು
- ಕಚ್ಚಾ ತೈಲ ಮತ್ತು ಅನಿಲಗಳ ಸಾಗಣೆಯ ಪ್ರಮುಖ ಜಲಮಾರ್ಗವಾದ ಹೊರ್ಮುಜ್ ಜಲಸಂಧಿಯನ್ನು ತೆರೆಯುವುದು. ಆದರೆ, ತಕ್ಷಣಕ್ಕೆ ನೀರಿನಲ್ಲಿ ಹುದುಗಿಸಿರುವ ಸ್ಫೋಟಕಗಳನ್ನು ತೆರವುಗೊಳಿಸಲು ಆದ್ಯತೆ ನೀಡುವುದು
- ಇರಾನಿನ ಪರಮಾಣು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 60 ದಿನಗಳಲ್ಲಿ ಅಂತಿಮ ನಿರ್ಧಾರಕ್ಕೆ ಬರುವುದು
- ಅಮೆರಿಕ ಮುಟ್ಟುಗೋಲು ಹಾಕಿಕೊಂಡ ಇರಾನ್‌ನ 2500 ಕೋಟಿ ಡಾಲರ್ ಮೌಲ್ಯದ ಆಸ್ತಿಗಳನ್ನು ಬಿಡುಗಡೆ ಮಾಡುವುದು
- ಇರಾನ್ ತೈಲ ಮಾರಾಟದ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ತೆರವುಗೊಳಿಸುವುದು

ತೈಲ ಮಾರುಕಟ್ಟೆ ಕೊಂಚ ನಿರಾಳ

ಯುದ್ಧ ಸದ್ಯದ ಮಟ್ಟಿಗೆ ನಿಂತಿರುವುದರಿಂದ ಜಾಗತಿಕ ತೈಲ ಮಾರುಕಟ್ಟೆ ಕೊಂಚ ನಿರಾಳವಾಗಿದೆ. ಭಾರತ ಸೇರಿದಂತೆ ತೈಲ ಗ್ರಾಹಕ ರಾಷ್ಟ್ರಗಳೂ ನಿಟ್ಟುಸಿರು ಬಿಡುವಂತಾಗಿದೆ. ಯುದ್ಧ ಮುಕ್ತಾಯದ ಘೋಷಣೆ ಮಾಡುವುದಕ್ಕೂ ಮೊದಲು ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರಲ್‌ಗೆ 93 ಡಾಲರ್ ಇತ್ತು. ಅದೀಗ 80 ಡಾಲರ್‌ಗೆ ಇಳಿದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಇಳಿಯುವ ನಿರೀಕ್ಷೆ ಇದೆ. ಆದರೆ, ಯುಎಇ, ಕತಾರ್ ಸೇರಿದಂತೆ ತೈಲ, ಅನಿಲ ಉತ್ಪಾದಕ ರಾಷ್ಟ್ರಗಳ ಕಚ್ಚಾ ತೈಲ ಮೂಲಸೌಕರ್ಯಗಳು ದಾಳಿಯಿಂದಾಗಿ ಹಾನಿಗೀಡಾಗಿದ್ದು, ಉತ್ಪಾದನೆ ಸಹಜ ಸ್ಥಿತಿಗೆ ಮರಳಲು ಕೆಲವು ತಿಂಗಳುಗಳೇ ಬೇಕು ಎನ್ನಲಾಗುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಇದೇ 14ರಂದು ಇಂಗ್ಲೆಂಡ್‌ನ ಎಜ್‌ಬಾಸ್ಟನ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಮಹಿಳಾ ಕ್ರಿಕೆಟ್ ತಂಡಗಳ ನಡುವೆ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಪಾಕಿಸ್ತಾನ ತಂಡದ ನಾಯಕಿ ಫಾತಿಮಾ ಸನಾ ನಡುವೆ ವಾಗ್ವಾದ ನಡೆದಿದೆ ಎಂದು ಪ್ರತಿಪಾದಿಸುತ್ತಾ ದುರ್ಗೇಶ್ ಶುಕ್ಲಾ ಎಂಬವರು 'ಎಕ್ಸ್'ನಲ್ಲಿ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾರೆ. ಪಂದ್ಯ ನಡೆಯುತ್ತಿದ್ದಾಗ ಎರಡೂ ತಂಡಗಳ ಆಟಗಾರರು ಜಗಳ ಆಡುತ್ತಿರುವ ದೃಶ್ಯ ಅದರಲ್ಲಿದೆ. ಆದರೆ, ಇದು ಸುಳ್ಳು.

ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಪರಿಶೀಲಿಸಿದಾಗ ಹಲವರು ಇದೇ ಪ್ರತಿಪಾದನೆಯೊಂದಿಗೆ ವಿಡಿಯೊ ಹಂಚಿರುವುದು ಕಂಡುಬಂತು. ಇಂತಹ ಘಟನೆ ನಡೆದಿದೆಯೇ ಎಂಬುದನ್ನು ಪರಿಶೀಲಿಸಲು ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಲಾಯಿತು. ಆದರೆ ಈ ಘಟನೆಯನ್ನು ದೃಢಪಡಿಸುವಂತಹ ಯಾವುದೇ ಸುದ್ದಿಗಳು ಸಿಗಲಿಲ್ಲ. ಇಂತಹ ಘಟನೆ ನಡೆದಿದ್ದರೆ ಅದು ಖಂಡಿತವಾಗಿಯೂ ಮಾಧ್ಯಮಗಳಲ್ಲಿ ವರದಿಯಾಗುತ್ತಿತ್ತು. ಒಂದು ಕೀ ಫ್ರೇಮ್ ಅನ್ನು ಮತ್ತೆ ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಿದಾಗ 2026ರ ಮಾರ್ಚ್ 21ರಂದು ಸೋಷಿಯಲ್ ಬಂದಾ ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಕಟವಾದ ವಿಡಿಯೊ ಸಿಕ್ಕಿತು. ಅದು, ಈಗ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವೇ ಆಗಿತ್ತು. ಆ ಚಾನೆಲ್‌ನ ವಿವರಗಳನ್ನು ನೋಡಿದಾಗ, ಅದು ಎಐ ಮೂಲಕ ಸೃಷ್ಟಿಸಿದ ವಿಡಿಯೊ ಎಂಬುದು ಖಾತ್ರಿಯಾಯಿತು. ಎಐ ಪತ್ತೆ ಟೂಲ್ ಹೈವ್ ಮಾಡರೇಷನ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಡೀಪ್ ಫೇಕ್ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಅದು ಮಾಡು, ಇದು ಬೇಡ

ನುಡಿ ಬೆಳಗು

ವಾಸುದೇವ ನಾಡಿಗ್

ತಾಯಿಯ ಬಗ್ಗೆ ಬಹಳ ಬೇಸತ್ತಿದ್ದ ಮಗ. ಕೂತ್ರೆ ನಿಂತ್ರೆ ಒಂದಲ್ಲ ಒಂದು ಸಲಹೆ, ಟೀಕೆ. ಮಲಗುವ ಮುಂಚೆ ದೀಪಗಳನ್ನು ಆರಿಸು, ವೃಥಾ ವಿದ್ಯುತ್ ಪೋಲು ಮಾಡಬೇಡ; ಸ್ನಾನ ಮಾಡಿ ನಲ್ಲಿ ಸರಿಯಾಗಿ ನಿಲ್ಲಿಸು, ನೀರು ಪೋಲು ಮಾಡಬೇಡ; ಟಿ.ವಿ ನೋಡಿ ಆಫ್ ಮಾಡು, ನೀನು ಇರದೇ ಇದ್ದಾಗ ಫ್ಯಾನ್ ಸ್ವಿಚ್ ಆಫ್ ಮಾಡು, ಬೆಡ್ ರೂಮ್ ತುಂಬಾ ಪೇಪರ್ ಎಸೆಯಬೇಡ, ಆಚೆ ಹೋಗುವಾಗ ಬಾಗಿಲನ್ನು ಹಾಕಿಕೊಂಡು ಹೋಗು.. ಹೀಗೆ ಒಂದಿಲ್ಲೊಂದು ಬುದ್ಧಿಮಾತು. ಈ ಮಾತುಗಳೆಲ್ಲ ಅವನ ಪಾಲಿಗೆ ವ್ಯರ್ಥ ಗೊಣಗಾಟ ಎನಿಸುತ್ತಿತ್ತು. ತಾಯಿಯ ಅದದೇ ಮಾತಿನಿಂದ ಬೇಸತ್ತು ಯಾವಾಗ ದೂರ ಹೋಗಿ ಸ್ವತಂತ್ರವಾಗಿ ಬಾಳುವೆನೋ ಅಂತ ಅನಿಸಲೂ ಶುರುವಾಯಿತು.

ನೌಕರಿಗಾಗಿ ಅರ್ಜಿ ಹಾಕಿದ್ದರಿಂದ ಸಂದರ್ಶನದ ಕರೆಯೂ ಅದೇ ಯುವಕನಿಗೆ ಬಂದಿತ್ತು. ಅವನು ಹೊರಡುವಾಗಲೂ ಆ ತಾಯಿಯ ಸಲಹೆ; 'ಸಂದರ್ಶಕರು ಏನೇ ಪ್ರಶ್ನೆ ಕೇಳಲಿ, ಆತ್ಮವಿಶ್ವಾಸದಿಂದ ಉತ್ತರ ಕೊಡು, ಸಮಾಧಾನದಿಂದ ಮಾತಾಡು' ಎಂದು ಹೇಳಿದಳು.

ಸಂಸ್ಥೆಯ ಆವರಣದಲ್ಲಿ ಕಾಲಿಡುತ್ತಿದ್ದಂತೆ ಅಲ್ಲಿ ಜನರ ಸುಳಿವೇ ಇರಲಿಲ್ಲ. ಕಚೇರಿಯ ಮುಖ್ಯ ಬಾಗಿಲು ತೆರೆದೇ ಇತ್ತು. ಒಳಕ್ಕೆ ಪ್ರವೇಶಿಸಿದವನಿಗೆ ತಾಯಿಯ ಕೂಗು ಕೇಳಿಸಿದಂತಾಯ್ತು: 'ಮಗನೇ ಬಾಗಿಲು ಹಾಕಿಕೊಂಡು ಹೋಗು'. ಅವನು ಕೂಡಲೇ ಬಾಗಿಲು ಮುಚ್ಚಿ ಒಳಗೆ ನಡೆದ. ದೊಡ್ಡ ಆವರಣದಲ್ಲಿ ಕಾಲಿಟ್ಟ ಕೂಡಲೇ ಅನೇಕ ಹೂಗಿಡಗಳ ಸಮೂಹ. ನಳನಳಿಸುತ್ತಿದ್ದ ಹಸಿರು. ಆದರೆ, ಅಲ್ಲಿ ಬಿದ್ದಿದ್ದ ಪೈಪ್‌ನಿಂದ ನೀರು ವ್ಯರ್ಥವಾಗಿ ಮೇಲೆ ಚಿಮ್ಮುತ್ತಿತ್ತು. ನೀರು ನಿಲ್ಲಿಸು ಅಂತ ತಾಯಿ ಕೂಗಿದಂತಾಗಿ ಸೋರುತ್ತಿದ್ದ ಪೈಪನ್ನು ಸರಿಯಾಗಿ ಜೋಡಿಸಿ ನಾಲ್ಕಾರು ಒಣಗಿದ ಹೂಗಿಡಗಳಿಗೆ ನೀರುಣಿಸಿ ಪುನಃ ನಲ್ಲಿ ನಿಲ್ಲಿಸಿದ. ನೀರು ಪೋಲಾಗಲಿಲ್ಲ. ಹಗಲು ಹೊತ್ತಿನಲ್ಲಿ ಮೆಟ್ಟಿಲುಗಳ ಬದಿ ಉರಿಯುತ್ತಿದ್ದ ದೀಪಗಳನ್ನು ಆರಿಸಿದ. ವಿದ್ಯುತ್ ಪೋಲಾಗಲಿಲ್ಲ. ಮುಖ್ಯ ಸಭಾಂಗಣದೊಳಗೆ ಹೆಜ್ಜೆ ಇಡುವಾಗ ಫುಟ್ ಮ್ಯಾಟ್ ಅಡ್ಡಾದಿಡ್ಡಿ ಇತ್ತು. ಅದನ್ನು ಸರಿಪಡಿಸಿದ. ಪಕ್ಕದ ಡಸ್ಟ್ ಬಿನ್ ಆಚೆ ಕೆಲವು ಕಾಗದದ ಚೂರುಗಳನ್ನು ಎತ್ತಿ ಮತ್ತೆ ಡಸ್ಟ್ ಬಿನ್‌ಗೆ ಹಾಕಿ ಕೈತೊಳೆದುಕೊಂಡು ಇತರ ಅಭ್ಯರ್ಥಿಗಳ ಜೊತೆಗೆ ಸಾಲಿನಲ್ಲಿ ಕುಳಿತ.

ಸರದಿ ಬಂದಾಗ ಸಂದರ್ಶಕರು ಒಂದು ಪ್ರಶ್ನೆಯನ್ನೂ ಕೇಳದೆ ನೇಮಕಾತಿ ಆದೇಶವನ್ನು ಆ ಯುವಕನಿಗೆ ಕೊಟ್ಟಾಗ ತಬ್ಬಿಬ್ಬು. 'ನಿನಗೆ ಪ್ರಶ್ನೆ ಕೇಳುವ ಅಗತ್ಯ ಇಲ್ಲ. ನಿನ್ನ ನಡತೆ ಮತ್ತು ಸಂಸ್ಕಾರವನ್ನು ಸಿ.ಸಿ. ಟಿವಿಯ ಕ್ಯಾಮೆರಾ ಮೂಲಕ ಗಮನಿಸಲಾಗಿದೆ. ನಮಗೆ ಇಂತಹ ಹೊಣೆಗಾರಿಕೆ ಮತ್ತು ನಾಗರಿಕ ಪ್ರಜ್ಞೆ ಇರುವ ವ್ಯಕ್ತಿ ಬೇಕಿತ್ತು. ನೀನು ಇದಕ್ಕೆ ಅರ್ಹ' ಎಂದು ಹುದ್ದೆಗೆ ಆಹ್ವಾನ ನೀಡಿದರು.

ಮಾತು ಮಾತಿಗೆ ಉಪದೇಶ, ಸಲಹೆ, ಬುದ್ಧಿವಾದ ಹೇಳ್ತಾ ಇದ್ದ ತಾಯಿಯ ಮಾತಿಗೆ ಬೇಸರ ವ್ಯಕ್ತಪಡಿಸಿದ್ದ ಆ ಯುವಕನಿಗೆ ತನ್ನ ತಾಯಿಯ ಮಾತುಗಳೇ ಉದ್ಯೋಗವನ್ನು ಪಡೆಯಲು ಅನುವು ಮಾಡಿಕೊಟ್ಟವು. 'ಮಗನೇ' ಎಂಬ ತಾಯಿಯ ಮಾತುಗಳು ಮತ್ತೆ ಕೇಳಿಸಿದವು. ಅನೇಕ ಕಿವಿಮಾತುಗಳು ಯಶಸ್ಸಿನ ಮೆಟ್ಟಿಲುಗಳಾಗುವುದು ಹೀಗೆ.

ಗುಂಡಣ್ಣ

ಪದಬಂಧ 6436

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇಶದ ಒಂದು ವಿಭಾಗ (3)
4.ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ (4)
6.ಗೌರವ ಸೂಚಕವಾಗಿ ಕೈಮುಗಿದು ತಲೆಬಾಗುವುದು (4)
7.ರಜದಲ್ಲಿ ಖರೀದಿಸಿರುವ ಬೆಳ್ಳಿ (3)
10.ಬಿಡದಿ ಬಳಿಯಿರುವ ಹೆಂಡತಿ (3)
12.ಅನಗತ್ಯ ಖರ್ಚು ಕ್ಷೌರವೂ ಆದೀತು! (4)
15.ಲಯ ನಡುವಿದ್ದಾಗ ಶ್ರೀಗಂಧ ಕಾಣಿಸಿತಲ್ಲಾ (4)
16.ಪಿತ್ತಕೋಶ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಹೊಳೆಯ ದಡವಿದು (4)
3.ವನದ ಬಗ್ಗೆ ಕವಿ ರಚಿಸಿದ ಪದ್ಯ (3)
5.ಪುರ ಪ್ರವೇಶಿಸಿರುವಾಗ ಸಿಕ್ಕಿರುವ ಬಿಡುವು (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಮರದೊಳಗೆ ಚಲುವಾದುದು ಕಂಡಿದೆ(4)
11.ಎಲ್ಲದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
13.ಹೋಲಿಕೆ ಇಲ್ಲಿ ಉಲ್ಟಾ ಪಲ್ಟಾ ಆಗಿದೆ (3)
14.ಪ್ರಾಮಾಣಿಕತೆ ಇಲ್ಲಿ ಕಾಣುತ್ತಿದೆ (3)



6435ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಭೃಥಸ್ನಾನ 4.ಗುರಿಕಾರ
5.ಸನದು 8.ಖಾನಾವಳಿ
10.ಕರಿಮಣಿ
12.ಕರುಳು 14.ನಳಪಾಕ
16.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ:
1.ಅಗಸ 2.ನಗು
3.ಪರದೆ 6.ದುರಾಚಾರಿ
7.ರೇಖಾಗಣಿತ 9.ವರ್ಷಾಬ್ದಿಕ
11.ವಾನರಿ 13.ಳುರಕೆ 15.ಕವಿ

ಸುಡೊಕು 6819

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3					5		7
	2		6		7			
7		5		4			9	1
	4				1		7	
8				2			1	4
	9		7			6		
9				3		4		
					8		2	
2		4						3

6818 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಜೂನ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ತೃತೀಯಾ ಗಂ. 21-39 ನಕ್ಷತ್ರ : ಪುನರ್ವಸು ಗಂ. 13-37 ಯೋಗ : ಧ್ರುವ ಗಂ. 20-51 ಕರಣ : ತೈತಿಲ ಗಂ. 11-12, ಮಿಥುನ ಮಾಸದ 02 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 01 ಮೊಹರಂ, ದಿನ ವಿಶೇಷ : ರಂಭಾ ತದಿಗೆ, ಪ್ರತಾಪ ಜಯಂತಿ (ರಾಜಸ್ಥಾನ), ಹಿಜಿರ ವರ್ಷಾರಂಭ (1448), ಅದೃಷ್ಟ ಸಂಖ್ಯೆ : 2, 7

ಮೇಷ: ಯೋಜನೆಯ ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಅನಾಯಾಸವಾಗಿ ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯ ಕೂಡಿ ಬರಲಿದೆ.

ವೃಷಭ: ಆಲಸ್ಯ ಮನೋಭಾವ ಹೆಚ್ಚಾಗಿ ಉತ್ಸಾಹ ಕಳೆದುಕೊಳ್ಳಬಹುದು. ಹಿಂದಿನ ಕೆಲಸದಲ್ಲಿ ದೋಷಗಳನ್ನು ಈ ಬಾರಿ ಪುನರಾವರ್ತಿಸದೆ ಅಚ್ಚುಕಟ್ಟಾಗಿ ಮಾಡುವ ಬಗ್ಗೆ ಹೆಚ್ಚಿನ ಪ್ರಯತ್ನವಿರಲಿ.

ಮಿಥುನ: ಅಪರೂಪದ ಮತ್ತು ಸಂತೋಷಮಯ ಔತಣ ಕೂಟವೊಂದರಲ್ಲಿ ಭಾಗವಹಿಸಲಿದ್ದೀರಿ. ವಿದ್ಯಾರ್ಥಿಗಳು ಉದ್ಯೋಗದ, ಹಣದ ಆಸೆಯನ್ನು ಬಿಟ್ಟು ಓದು ಮುಂದುವರಿಸಿ.

ಕರ್ಕಾಟಕ: ಕೃಷಿ ಭೂಮಿ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭ. ನಿಮ್ಮ ದಾರಿಗೆ ಎದುರಾಗಿ ಉತ್ತಮ ಅವಕಾಶಗಳು ಹುಡುಕಿಕೊಂಡು ಬರಲಿವೆ. ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ.

ಸಿಂಹ: ಗಣಿತದ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುವ ಕನಸಿಗೆ ಪುಷ್ಟಿ ಸಿಗಲಿದೆ. ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ವೈಯಕ್ತಿಕ ವಿಚಾರಗಳತ್ತ ಗಮನಹರಿಸಿ.

ಕನ್ಯಾ: ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಂಡಿರುವ ಸಂಸ್ಥೆಗೆ ವ್ಯಾವಹಾರಿಕ ನಷ್ಟ ಸಂಭವಿಸಬಹುದು. ಅರಣ್ಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿರುವುದು. ತಂದೆಯ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು.

ತುಲಾ: ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಕೇವಲ ಸಮಯ ಹಾಳಾಗುವುದು ಎಂದು ತಿಳಿದಿರಲಿ. ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ.

ವೃಶ್ಚಿಕ: ವೈಯಕ್ತಿಕ ಗಳಿಕೆಗಿಂತ ಕಂಪನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ಲೋಹ ಮತ್ತು ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗುತ್ತದೆ. ಹೊಸ ಕೆಲಸಕ್ಕೆ ಪ್ರಯತ್ನಿಸಬಹುದು.

ಧನು: ಭವಿಷ್ಯದ ಯೋಜನೆಗಳಿಗೆ ಗಮನ ಕೊಡಬೇಕಾಗಿ ಬರುವುದು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯವಹಾರಗಳಲ್ಲಿ ಹೇಳುವ ಲಾಭ ಇಲ್ಲದಿದ್ದರೂ ಹೆದರುವ ಅವಶ್ಯಕತೆ ಇರುವುದಿಲ್ಲ.

ಮಕರ: ಮನಶ್ಶಾಂತಿಯನ್ನು ವೃದ್ಧಿಸಿಕೊಳ್ಳಲು ಈಗ ಮನಸ್ಸಿನಲ್ಲಿರುವ ಕೆಲವು ವಿಷಯಗಳನ್ನು ಹೊರಗೆ ಹಾಕುವುದರ ಸಲುವಾಗಿ ಧ್ಯಾನ ಅಭ್ಯಾಸ ಮಾಡಿಕೊಳ್ಳಿ. ಲಘು ಪ್ರಯಾಣ ಮಾಡಬೇಕಾಗುವುದು.

ಕುಂಭ: ಹೊಸ ವಿಷಯಗಳನ್ನು ಕಲಿತು ಅದನ್ನು ಅಳವಡಿಸಿಕೊಳ್ಳುವ ಜೀವನಶೈಲಿ ನಿಮ್ಮದಾಗುತ್ತದೆ. ಉತ್ತಮ ವಿಚಾರಗಳು ಒಬ್ಬರಿಂದ ಇನ್ನೊಬ್ಬರಿಗೆ ತಿಳಿದು ವಿವಾಹದ ವಿಚಾರದಲ್ಲಿ ಅನುಕೂಲವಾಗಲಿದೆ.

ಮೀನ: ಕುಟುಂಬದ ವ್ಯಕ್ತಿಗಳ ಜೊತೆ ವಿಶೇಷ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಪೂರಕ ಘಟನೆಗಳು ನಡೆಯಲಿವೆ. ಕತ್ತಲೆಯ ಬಗೆಗಿರುವ ಭಯವು ಇಂದು ಹೆಚ್ಚು ತೊಂದರೆಯನ್ನು ಕೊಡಬಹುದು.

ಮುಂಬೈ ಧಾರಣೆ (ಶೇಂಗಾ)	16-06-2026
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಪಾಮ್ ವಾರದ ಡೆಲಿವರಿ	1463 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,49,400 (1,50,400)
ಬೆಳ್ಳಿ ಕೆ.ಜಿಗೆ	2,49,000 (2,51,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ದಾವಣಗೆರೆ	₹9500-9500
ಪುತ್ತೂರು	₹5000-14500

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹500-1000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,853
ಇಂದಿನ ಅಂತ್ಯ:	23,989
ದಿನದ ಗರಿಷ್ಠ:	24,002
	135

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹700
12 ಕ್ಕೆ	₹94
ಮೈಸೂರು: 100 ಕ್ಕೆ	₹714

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹269
ಆರ್‌ಎಸ್‌ಎಸ್-5	₹263
ಗುಡ್ ಲಾಟ್	₹229

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-699
ದ್ವಿತಳಿ (ಬಿ.ವಿ)	₹420-825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1470 (1470)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1465 (1465)

ತೈಲ: ಯುದ್ಧಪೂರ್ವ ಸ್ಥಿತಿ ಸದ್ಯಕ್ಕಿಲ್ಲ

‘ಕಚ್ಚಾ ತೈಲ, ಎಲ್‌ಎನ್‌ಜಿ ಮಾರುಕಟ್ಟೆಯ ಸ್ಥಿತಿ ಸಹಜವಾಗಲು ಸಮಯ ಬೇಕು’

ಬಿಕ್ಕಟ್ಟಿನ ಸಂದರ್ಭದಲ್ಲಿ ರಷ್ಯಾದಿಂದ ಪೂರೈಕೆಯಾದ ಇಂಧನವು ಭಾರತದ ನೆರವಿಗೆ ಬಂತು. ಪಶ್ಚಿಮ ಏಷ್ಯಾದಿಂದ ಪೂರೈಕೆ ಮತ್ತೆ ಹೆಚ್ಚಬಹುದಾದರೂ, ಭಾರತದ ಪಾಲಿಗೆ ರಷ್ಯಾ ಪ್ರಮುಖ ಮೂಲವಾಗಿ ಇರಲಿದೆ

ಮೌಲಿಕ್ ಪಟೇಲ್, ಈಕ್ವಿರಸ್ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದಕ್ಕೆ ಸಹಿ ಬೀಳುವ ಸಾಧ್ಯತೆಗಳು ಇರುವ ಕಾರಣದಿಂದ ಕಚ್ಚಾ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಬೆಲೆಯು ಕಡಿಮೆ ಆಗುವ ನಿರೀಕ್ಷೆ ಇದೆ.

ಆದರೆ ಪೂರೈಕೆಯಲ್ಲಿ ಆಗಿರುವ ಸಮಸ್ಯೆಗಳು, ಮೂಲಸೌಕರ್ಯಕ್ಕೆ ಆಗಿರುವ ಹಾನಿಯ ಕಾರಣದಿಂದಾಗಿ ಮುಂದಿನ ದಿನಗಳಲ್ಲಿ ಇಂಧನ ಮಾರುಕಟ್ಟೆಯಲ್ಲಿ ಅಸ್ಥಿರತೆ ಮುಂದುವರಿಯಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

‘ಪೂರೈಕೆ ವ್ಯವಸ್ಥೆಯಲ್ಲಿ ದೀರ್ಘ ಅವಧಿಗೆ ಸಮಸ್ಯೆಗಳು ಸೃಷ್ಟಿಯಾಗುವ ಅಪಾಯವು ತಗ್ಗಿದೆ. ಆದರೆ ಕಚ್ಚಾ ತೈಲ ಹಾಗೂ ಎಲ್‌ಎನ್‌ಜಿ ಮಾರುಕಟ್ಟೆಯಲ್ಲಿ ಸಹಜ ಸ್ಥಿತಿ ಉಂಟಾಗಲು ತಿಂಗಳುಗಳೇ ಬೇಕಾಗಬಹುದು’ ಎಂದು ಕ್ರಿಸಿಲ್ ಇಂಟೆಲಿಜೆನ್ಸ್ ಸಂಸ್ಥೆಯ ನಿರ್ದೇಶಕ ಸೆಹುಲ್ ಭಟ್ ಹೇಳಿದ್ದಾರೆ.

‘ಶಾಂತಿ ಒಪ್ಪಂದದ ಅನುಷ್ಠಾನ ಸುತ್ತಲಿನ ಅನಿಶ್ಚಿತತೆಗಳು ಕೆಲವು ಕಾಲದವರೆಗೆ ಇಂಧನ ಮಾರುಕಟ್ಟೆಯಲ್ಲಿ ಅಸ್ಥಿರತೆ ಮೂಡಿಸಬಹುದು’ ಎಂದು ಅವರು ಅಂದಾಜು ಮಾಡಿದ್ದಾರೆ.

‘ಕಚ್ಚಾ ತೈಲದ ಬೆಲೆಯು ಯುದ್ಧಪೂರ್ವದ ಮಟ್ಟಕ್ಕೆ ಇಳಿಕೆ ಕಾಣಲು ಆರು ತಿಂಗಳು ಅಥವಾ ಒಂದು ವರ್ಷ ಬೇಕಾಗಬಹುದು. ಏಕೆಂದರೆ ಪಶ್ಚಿಮ ಏಷ್ಯಾದಲ್ಲಿ ನಿತ್ಯ 1 ಕೋಟಿಯಿಂದ 1.1 ಕೋಟಿ ಬ್ಯಾರಲ್‌ನಷ್ಟು ಕಚ್ಚಾ ತೈಲದ ಉತ್ಪಾದನೆ ಸ್ಥಗಿತಗೊಂಡಿದೆ. ಅಲ್ಲದೆ ಕೆಲವು ಮೂಲಸೌಕರ್ಯಗಳಿಗೆ ಧಕ್ಕೆ ಆಗಿದೆ’ ಎಂದು ಐಸಿಆರ್‌ಎ ಸಂಸ್ಥೆಯ ಕಾರ್ಪೊರೇಟ್ ರೇಟಿಂಗ್ಸ್ ವಿಭಾಗದ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ವಸಿಷ್ಠ ಹೇಳಿದ್ದಾರೆ.

ಇರಾನ್‌ನ ತೈಲದ ಮೇಲಿನ ನಿರ್ಬಂಧವನ್ನು ತೆರವು ಮಾಡಿದರೆ ಅದು ಭಾರತಕ್ಕೆ ಅನುಕೂಲ ಮಾಡಿಕೊಡಲಿದೆ ಎಂದು ಹೇಳಿದ್ದಾರೆ.

ಯುದ್ಧ ಆರಂಭಕ್ಕೂ ಮೊದಲು ಕಚ್ಚಾ ತೈಲದ ಬೆಲೆಯು ಬ್ಯಾರಲ್ ಒಂದಕ್ಕೆ 65 ಡಾಲರ್ ಆಸುಪಾಸಿನಲ್ಲಿ ಇತ್ತು. ಆದರೆ ಈ ಹಂತವನ್ನು ಅದು ಮತ್ತೆ ತಲುಪುವ ಸಾಧ್ಯತೆ ಇಲ್ಲ ಎಂದು ಈಕ್ವಿರಸ್ ಸೆಕ್ಯುರಿಟೀಸ್ ಸಂಸ್ಥೆ ಅಂದಾಜು ಮಾಡಿದೆ.

ಕಚ್ಚಾ ತೈಲದ ಬೆಲೆಯು ಅಲ್ಪಾವಧಿಯಲ್ಲಿ ಬ್ಯಾರಲ್ ಒಂದಕ್ಕೆ 75ರಿಂದ 80 ಡಾಲರ್ ಮಟ್ಟ ತಲುಪಬಹುದು ಎಂದು ಅದು ಹೇಳಿದೆ. ಹೊರ್ಮುಜ್ ಜಲಸಂಧಿಯು ಈ ವರ್ಷದಲ್ಲಿ ಪೂರ್ತಿಯಾಗಿ ಮುಕ್ತವಾದರೂ ತೈಲ ಬೆಲೆಯು 60 ಡಾಲರ್ ಮಟ್ಟವನ್ನು ತಲುಪುವ ಸಾಧ್ಯತೆ ಇಲ್ಲ ಎಂದಿದೆ.

ಕೊಲ್ಲಿ ದೇಶಗಳನ್ನು ಸಂಪರ್ಕಿಸುವ ಹಡಗು ಮಾರ್ಗಗಳು ಮತ್ತೆ ಮುಕ್ತವಾದಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಸುಧಾರಣೆ ಕಾಣಲಿದೆ, ಸಾಗಣೆ ವೆಚ್ಚ ಕಡಿಮೆ ಆಗಲಿದೆ. ಆದರೆ ಪರಿಸ್ಥಿತಿಯು ಸಹಜವಾಗಲು ಹೆಚ್ಚಿನ ಸಮಯ ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಸುದ್ದಿ 2 ನಿಮಿಷ

2031ರ ವೇಳೆಗೆ 110 ಕೋಟಿ 5ಜಿ ಬಳಕೆದಾರರು: ಎರಿಕ್ಸನ್

ನವದೆಹಲಿ (ಪಿಟಿಐ): 2031ರ ವೇಳೆಗೆ ದೇಶದಲ್ಲಿ 5ಜಿ ಬಳಕೆದಾರರ ಸಂಖ್ಯೆ 110 ಕೋಟಿ ದಾಟಬಹುದು ಎಂದು ದೂರಸಂಪರ್ಕ ಕ್ಷೇತ್ರದ ಎರಿಕ್ಸನ್ ಸಂಸ್ಥೆ ಸಿದ್ಧಪಡಿಸಿರುವ ವರದಿಯೊಂದು ತಿಳಿಸಿದೆ.

2025ರ ಅಂತ್ಯದ ವೇಳೆಗೆ ದೇಶದಲ್ಲಿ 5ಜಿ ಬಳಕೆದಾರರ ಸಂಖ್ಯೆ 43 ಕೋಟಿಯಷ್ಟಿತ್ತು. ಇದು ಒಟ್ಟು ಮೊಬೈಲ್ ಚಂದಾದಾರರ ಪೈಕಿ ಶೇ 35ರಷ್ಟಾಗಿತ್ತು ಎಂದು ತಿಳಿಸಿದೆ.

ಪ್ರಸ್ತುತ ದೇಶದಲ್ಲಿ ಮಾಸಿಕ ಮೊಬೈಲ್ ಡೇಟಾ ಬಳಕೆಯು 37 ಜಿ.ಬಿಯಷ್ಟಿದೆ. 2031ರ ವೇಳೆಗೆ ಇದು 70 ಜಿ.ಬಿಗೆ ತಲುಪುವ ನಿರೀಕ್ಷೆ ಇದೆ ಎಂದು ಹೇಳಿದೆ.

5ಜಿ ಸಾಧನಗಳು, ನೆಟ್‌ವರ್ಕ್ ವಿಸ್ತರಣೆಯಿಂದ ದೇಶದಲ್ಲಿ 5ಜಿ ಬಳಸುವವರ ಪ್ರಮಾಣ ಹೆಚ್ಚಿದೆ. 4ಜಿ ತಂತ್ರಜ್ಞಾನ ಬಳಸುವವರ ಸಂಖ್ಯೆ 57 ಕೋಟಿಯಷ್ಟಿದ್ದು, ಒಟ್ಟು ಚಂದಾದಾರರ ಪೈಕಿ ಶೇ 46ರಷ್ಟು ಪಾಲು ಹೊಂದಿದೆ. ಈ ಚಂದಾದಾರರು 5ಜಿಗೆ ಬದಲಾಗುವುದರಿಂದ 2031ರ ವೇಳೆಗೆ ಈ ಚಂದಾದಾರರ ಸಂಖ್ಯೆ 16 ಕೋಟಿಗೆ ಇಳಿಯಲಿದೆ ಎಂದು ತಿಳಿಸಿದೆ.

ಶಾಂತಿ ಒಪ್ಪಂದ: ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಒಪ್ಪಂದದಿಂದ ಕಚ್ಚಾ ತೈಲದ ದರ ಇಳಿಕೆಯಾಗಿದೆ. ಇದರಿಂದಾಗಿ ಜಾಗತಿಕ ಷೇರುಪೇಟೆಗಳಲ್ಲಿ ಹಾಗೂ ದೇಶದ ಷೇರುಪೇಟೆಯಲ್ಲಿ ಷೇರು ಖರೀದಿ ಹೆಚ್ಚಳವಾಗಿದ್ದರಿಂದ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 544 ಅಂಶ ಹೆಚ್ಚಳವಾಗಿ, 76,808ಕ್ಕೆ ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 135 ಅಂಶ ಏರಿಕೆಯಾಗಿ, 23,989ಕ್ಕೆ ಅಂತ್ಯಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 2ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರಲ್ ಬೆಲೆ 81.45 ಡಾಲರ್‌ಗೆ ಇಳಿದಿದೆ.

ಅಡಿಕೆ ಧಾರಣೆ

ಪುತ್ತೂರು		ರಾಶಿ	48089-54099	ಬಿಳಿಗೋಟು	23999-36099
ಕೋಕ	20000-33500	ಗೊರಬಲು	19001-43299	ಚಾಲಿ	44009-48815
ಹೊಸತು	30000-47000	**ಸಿದ್ದಾಪುರ**		ಕೆಂಪುಗೋಟು	24401-35299
ಹಳತು	49000-55000	ಬಿಳಿಗೋಟು	26199-35219	ರಾಶಿ	50000-53001
ಸಾಗರ		ಚಾಲಿ	39099-48139	**ಯಲ್ಲಾಪುರ**	
ಬಿಳಿಗೋಟು	32555-32555	ಕೋಕ	22699-33399	ಅಪಿ	54399-57179
ಚಾಲಿ	39498-40111	ಕೆಂಪುಗೋಟು	28869-36000	ಬಿಳಿಗೋಟು	16899-37411
ಕೆಂಪುಗೋಟು	34699-38599	ರಾಶಿ	46809-51599	ಚಾಲಿ	36199-48499
ರಾಶಿ	46889-48999	ತಟ್ಟಿಬೆಟ್ಟೆ	36000-46099	ಕೋಕ	16000-32699
ಸಿಪ್ಪೆಗೋಟು	10300-22109	**ಕುಮಟಾ**		ಕೆಂಪುಗೋಟು	22899-37299
ಶಿವಮೊಗ್ಗ		ಚಾಲಿ	41854-44246	ರಾಶಿ	46406-53819
ಸರಕು	57709-93996	**ಶಿರಸಿ**		ತಟ್ಟಿಬೆಟ್ಟೆ	37400-48769
ಬೆಟ್ಟೆ	55014-61389	ಬೆಟ್ಟೆ	32099-49099		

23 ಐಪಿಒ: ₹27 ಸಾವಿರ ಕೋಟಿ ಸಂಗ್ರಹ

ಕಳೆದ ವರ್ಷಕ್ಕೆ ಹೋಲಿಸಿದರೆ ಐಪಿಒ ಸಂಖ್ಯೆ ಭಾರಿ ಇಳಿಕೆ

ನವದೆಹಲಿ (ಪಿಟಿಐ): ‘ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಆರ್ಥಿಕ ಅನಿಶ್ಚಿತತೆಯ ನಡುವೆಯೂ, ಪ್ರಸಕ್ತ ವರ್ಷದ ಆರಂಭದಿಂದ ಇದುವರೆಗೆ ದೇಶದಲ್ಲಿ 23 ಕಂಪನಿಗಳು ಐಪಿಒ ಮೂಲಕ ₹27 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿವೆ’ ಎಂದು ಹಣಕಾಸು ಸೇವೆಗಳ ಸಂಸ್ಥೆ ಈಕ್ವಿರಸ್ ಕ್ಯಾಪಿಟಲ್ ಮಂಗಳವಾರ ತಿಳಿಸಿದೆ.

ಆದರೆ, ಕಳೆದ ಕ್ಯಾಲೆಂಡರ್ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಸಂಖ್ಯೆ ಕಡಿಮೆ ಇದೆ. ಕಳೆದ ಪೂರ್ಣ ವರ್ಷದಲ್ಲಿ 103 ಕಂಪನಿಗಳು ಐಪಿಒ ಮೂಲಕ ₹1.76 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದವು ಎಂದು ವರದಿ ತಿಳಿಸಿದೆ.

ಐಪಿಒ ವಿವರ

ವರ್ಷ	ಸಂಖ್ಯೆ	ಸಂಗ್ರಹಿಸಿದ ಬಂಡವಾಳ (₹ಕೋಟಿಗಳಲ್ಲಿ)
2023	57	49,436
2024	90	1.6 ಲಕ್ಷ
2025	103	1.76 ಲಕ್ಷ
2026 (ಜೂನ್ 16ರವರೆಗೆ)	23	27,000

ಜಾಗತಿಕ ಮಟ್ಟದಲ್ಲಿ ರಾಜಕೀಯ ಬಿಕ್ಕಟ್ಟು ಕಡಿಮೆ ಆಗುತ್ತಿದೆ. ಇದು ಐಪಿಒ ಪ್ರಕ್ರಿಯೆಗೆ ವೇಗ ನೀಡುತ್ತಿದೆ. ಟರ್ಟಲ್‌ಮೆಂಟ್ ಫಿನ್‌ಟೆಕ್ ಸಲ್ಯೂಷನ್ಸ್ ಮತ್ತು ಅದ್ವಿತ್ ಜ್ಯುವೆಲ್ಸ್ ಕ್ರಮವಾಗಿ ಇದೇ ತಿಂಗಳ 19 ಮತ್ತು 23ರಂದು ಐಪಿಒ ನಡೆಸಲಿವೆ. ವಾಟರ್‌ವೇಸ್ ಲೆಜರ್ ಟೂರಿಸಂ ಲಿಮಿಟೆಡ್, ದ ಆಪರೇಟರ್ ಆಫ್ ಕಾರ್ಡೆಲಿಯಾ ಕ್ರೂಸಸ್ ಐಪಿಒ ಸಹ ಇದೇ ತಿಂಗಳಿನಲ್ಲಿ ಬರುವ ನಿರೀಕ್ಷೆ ಇದೆ.

ರಾಷ್ಟ್ರೀಯ ಷೇರುಪೇಟೆಯು (ಎನ್‌ಎಸ್‌ಇ) ಐಪಿಒಗಾಗಿ ಸೆಬಿಗೆ ಈ ವಾರ ದಾಖಲೆಗಳನ್ನು ಸಲ್ಲಿಸುವ ನಿರೀಕ್ಷೆ ಇದೆ. ಕ್ವಿಕ್ ಕಾಮರ್ಸ್ ವಲಯದ ಜೆಪ್ಟೊ ಮತ್ತು ಎಸ್‌ಬಿಐ ಮ್ಯೂಚುವಲ್ ಫಂಡ್ ಮುಂದಿನ ತಿಂಗಳು ಐಪಿಒ ನಡೆಸಲು ಯೋಜಿಸಿವೆ. ಇವಲ್ಲದೆ, 236 ಕಂಪನಿಗಳು ಐಪಿಒಗಾಗಿ ಕರಡು ದಾಖಲೆಗಳನ್ನು ಸಲ್ಲಿಸಿವೆ ಎಂದು ತಿಳಿಸಿದೆ.

‘ಅವಕಾಶ ಸಿಗದಿದ್ದರೆ, ಬೇರೆಡೆ ಹೂಡಿಕೆ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ರಾಜ್ಯದಲ್ಲಿ ₹5,700 ಕೋಟಿ ವೆಚ್ಚದಲ್ಲಿ ವಿಮಾನ ಇಂಧನ ಉತ್ಪಾದನಾ ಘಟಕ ಮತ್ತು ಬಯೊ ಪ್ಲಾಸ್ಟಿಕ್ ಘಟಕಗಳ ಸ್ಥಾಪನೆಗೆ ಅನುಮತಿ ಕೋರಿ ನಿರಾಣಿ ಗ್ರೂಪ್ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಲಾಗಿದೆ. ಇಲ್ಲಿ ಅವಕಾಶ ನೀಡದಿದ್ದರೆ, ಬೇರೆ ರಾಜ್ಯಗಳಲ್ಲಿ ಹೂಡಿಕೆ ಅನಿವಾರ್ಯ ಆಗುತ್ತದೆ’ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

‘ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೇರೆ ದೇಶ, ಬೇರೆ ರಾಜ್ಯದ ಹೂಡಿಕೆದಾರರನ್ನು ಆಹ್ವಾನಿಸಲಾಗುತ್ತದೆ. ರಾಜ್ಯದವರೇ ಆಸಕ್ತಿ ತೋರಿದರೆ, ತಿರಸ್ಕರಿಸಲಾಗುತ್ತದೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಮತ್ತೊಮ್ಮೆ ಮನವಿ ಮಾಡುವೆ. ಅನುಮತಿ ನೀಡದಿದ್ದರೆ, ಬೇರೆ ರಾಜ್ಯಗಳಲ್ಲಿ ಹೂಡಿಕೆ ಅನಿವಾರ್ಯವಾಗುತ್ತದೆ

ಮುರುಗೇಶ ನಿರಾಣಿ, ಮಾಜಿ ಸಚಿವ

‘ಎರಡೂ ಕೃಷಿ ಆಧಾರಿತ ಘಟಕಗಳು. ₹3,200 ಕೋಟಿ ವೆಚ್ಚದಲ್ಲಿ ವಿಮಾನ ಇಂಧನ ಉತ್ಪಾದನಾ ಘಟಕ ಮತ್ತು ₹2,500 ಕೋಟಿ ವೆಚ್ಚದಲ್ಲಿ ಬಯೊ ಪ್ಲಾಸ್ಟಿಕ್ ಉತ್ಪಾದನಾ ಘಟಕ ಸ್ಥಾಪಿಸುವ ಉದ್ದೇಶವಿದೆ. ಇವುಗಳ ಸ್ಥಾಪನೆಗೆ ಭೂಮಿ, ವಿದ್ಯುತ್ ಕೇಳಿಲ್ಲ. ಸಾವಿರಾರು ಜನರಿಗೆ ಉದ್ಯೋಗ ಸಿಗುತ್ತದೆ. ಅರ್ಜಿ ತಿರಸ್ಕರಿಸಿದ್ದಕ್ಕೆ ಕಾರಣ ತಿಳಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಜಪಾನಿನ ಸುಮಿಟಮೊ ಕಂಪನಿ ಪಾಲುದಾರಿಕೆ ಇರಲಿದೆ. ಈ ಘಟಕಗಳ ಸ್ಥಾಪನೆಗೆ ಮಹಾರಾಷ್ಟ್ರದ ಮುಖ್ಯಮಂತ್ರಿ ಶೇ 50ರಷ್ಟು ಸಬ್ಸಿಡಿ ನೀಡುವುದಾಗಿ ಹೇಳಿದ್ದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು 400 ಎಕರೆ ಭೂಮಿ ರಿಯಾಯಿತಿ ದರದಲ್ಲಿ (ಎಕರೆಗೆ ₹10 ಲಕ್ಷ) ಕೊಡುವುದಾಗಿ ತಿಳಿಸಿದ್ದಾರೆ. ಬಿಹಾರದಲ್ಲಿ ನಮ್ಮ ಗ್ರೂಪ್‌ನ ಸಕ್ಕರೆ ಕಾರ್ಖಾನೆಯಿದ್ದು, ಅಲ್ಲಿಯೂ ಸ್ಥಾಪಿಸಬಹುದು’ ಎಂದು ಹೇಳಿದರು.

ಎಡ್ವರ್ಡ್ ವಾಯುನೆಲೆಯಿಂದ ಟೇಕಾಫ್ ಆದ ಬೆನ್ನಲ್ಲೇ ಅವಘಡ: 8 ಸಾವು

ಅಮೆರಿಕದ ಬಾಂಬರ್ ವಿಮಾನ ಪತನ

ಲಾಸ್ ಏಂಜಲೀಸ್ (ಎಪಿ): ಅಮೆರಿಕದ ವಾಯುಪಡೆಯ ಶಕ್ತಿಶಾಲಿ ಬಾಂಬರ್ ವಿಮಾನ ಬೋಯಿಂಗ್ ಬಿ-52, ದಕ್ಷಿಣ ಕ್ಯಾಲಿಫೋರ್ನಿಯಾದ ಮೊಜಾವೆ ಮರುಭೂಮಿಯಲ್ಲಿರುವ ಎಡ್ವರ್ಡ್ ವಾಯುನೆಲೆಯಿಂದ ಟೇಕಾಫ್ ಆದ ಕೆಲ ಕ್ಷಣಗಳಲ್ಲೇ ಪತನಗೊಂಡಿದ್ದು, ಸಿಬ್ಬಂದಿ ಸೇರಿ ವಿಮಾನದಲ್ಲಿದ್ದ ಎಲ್ಲ 8 ಮಂದಿ ಮೃತಪಟ್ಟಿದ್ದಾರೆ.

ವಿಮಾನವು ಸೋಮವಾರ ಬೆಳಿಗ್ಗೆ 11.20ರ ಸುಮಾರಿಗೆ ಪರೀಕ್ಷಾರ್ಥ ಹಾರಾಟದ ಕಾರ್ಯಾಚರಣೆ ಅಂಗವಾಗಿ ಟೇಕಾಫ್ ಆದ ಬೆನ್ನಲ್ಲೇ ದುರಂತ ಸಂಭವಿಸಿದೆ. ರನ್‌ವೇ ಸಮೀಪದ ಪ್ರದೇಶದಲ್ಲಿ ವಿಮಾನ ನೆಲಕ್ಕಪ್ಪಳಿಸಿರುವ ಮತ್ತು ಸ್ಥಳದಿಂದ ದಟ್ಟವಾದ ಕಪ್ಪು ಹೊಗೆ ಮೇಲೆದ್ದಿರುವ ವೈಮಾನಿಕ ದೃಶ್ಯಗಳಿರುವ ವಿಡಿಯೊ ತುಣುಕನ್ನು ಅಮೆರಿಕದ ವಾಯುಪಡೆ ಬಿಡುಗಡೆ ಮಾಡಿದೆ.

‘ವಿಮಾನದಲ್ಲಿ ಸರ್ಕಾರಿ ಗುತ್ತಿಗೆದಾರರು ಮತ್ತು ಸೇನಾ ಸಿಬ್ಬಂದಿ ಇದ್ದರು. ಪತನದ ದೃಶ್ಯಗಳನ್ನು ತಜ್ಞರು ಪರಿಶೀಲನೆಗೆ ಒಳಪಡಿಸಿದ್ದಾರೆ. ವಿಮಾನ ಪೂರ್ಣ ಹೊತ್ತಿ ಉರಿದಿದೆ. ದುರಂತದಲ್ಲಿ ಯಾರೂ ಬದುಕುಳಿದಿಲ್ಲ’ ಎಂದು ಎಡ್ವರ್ಡ್ ವಾಯುನೆಲೆಯ 412 ಪರೀಕ್ಷಾ ಘಟಕದ ಸಹ ಕಮಾಂಡರ್ ಕರ್ನಲ್ ಜೇಮ್ಸ್ ಹೇಯ್ಸ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ನಾವು ಎಂಟು ಮಂದಿ ಮಹಾನ್ ಅಮೆರಿಕನ್ನರನ್ನು ಕಳೆದುಕೊಂಡಿದ್ದೇವೆ. ಮೃತರ ಕುಟುಂಬ ಸದಸ್ಯರಿಗೆ ಮಾಹಿತಿ ನೀಡುವ ಕಾರ್ಯದಲ್ಲಿ ಅಧಿಕಾರಿಗಳು ತೊಡಗಿದ್ದಾರೆ. ಯಾವ ಕಾರಣದಿಂದ ದುರಂತ ಸಂಭವಿಸಿದೆ ಎನ್ನುವುದನ್ನು ತಕ್ಷಣಕ್ಕೆ ಹೇಳಲು ಆಗುವುದಿಲ್ಲ. ವಿಮಾನ ಪತನದ ತನಿಖೆ ಪೂರ್ಣಗೊಳ್ಳಲು ಕನಿಷ್ಠ 6 ತಿಂಗಳು ಬೇಕಾಗುತ್ತದೆ’ ಎಂದು ಜೇಮ್ಸ್ ಹೇಯ್ಸ್ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಅಮೆರಿಕದ ಎಡ್ವರ್ಡ್ ವಾಯುನೆಲೆಯಿಂದ ಟೇಕಾಫ್ ಆದ ಕೆಲ ಕ್ಷಣಗಳಲ್ಲೇ ಬಿ–52 ಬಾಂಬರ್ ವಿಮಾನ ಪತನಗೊಂಡಿದ್ದು, ರನ್‌ವೇ ಸಮೀಪದಲ್ಲಿ ದಟ್ಟ ಹೊಗೆ ಮೇಲೆದ್ದಿರುವ ದೃಶ್ಯ ಕಂಡುಬಂತು — ಎಪಿ/ಪಿಟಿಐ ಚಿತ್ರ

ಹೊಸ ‘ರೆಡಾರ್ ವ್ಯವಸ್ಥೆ’ ಅಳವಡಿಕೆ: ಎಡ್ವರ್ಡ್ ವಾಯುನೆಲೆಯು ಲಾಸ್ ಏಂಜಲೀಸ್‌ನಿಂದ ಉತ್ತರಕ್ಕೆ 161 ಕಿ.ಮೀ ದೂರದಲ್ಲಿದ್ದು, ಇದು ಅಮೆರಿಕದ ಯುದ್ಧ ವಿಮಾನಗಳ ಹಾರಾಟ ಪರೀಕ್ಷೆಯ ಮತ್ತು ಪ್ರಮುಖ ಅಭಿವೃದ್ಧಿ ಕೇಂದ್ರವಾಗಿದೆ. ಬಿ-52 ವಿಮಾನದಲ್ಲಿ ಬೋಯಿಂಗ್ ಕಂಪನಿಯು 2025ರಲ್ಲಿ ಹೊಸ ಮತ್ತು ಆಧುನಿಕ ರೆಡಾರ್ ವ್ಯವಸ್ಥೆ ಅಳವಡಿಸಿ ಅದನ್ನು ಎಡ್ವರ್ಡ್ ವಾಯುನೆಲೆಗೆ ವಾಪಸ್ ಕಳುಹಿಸಿತ್ತು. 2026ರಲ್ಲಿ ಇಡೀ ವರ್ಷ ಈ ವಿಮಾನದ ಪರೀಕ್ಷಾರ್ಥ ಹಾರಾಟ ಮತ್ತು ರೆಡಾರ್ ವ್ಯವಸ್ಥೆ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲನೆಗೆ ನಿರ್ಧರಿಸಲಾಗಿತ್ತು.

ವಿಯೆಟ್ನಾಂ, ಇರಾನ್ ಯುದ್ಧದಲ್ಲೂ ಬಳಕೆ

1955ರಲ್ಲಿ ಅಮೆರಿಕದ ವಾಯುಪಡೆಗೆ ಸೇರ್ಪಡೆಯಾದ ದೀರ್ಘ ಶ್ರೇಣಿಯ ಬೋಯಿಂಗ್ ಬಿ–52 ಸರಣಿಯ ಬಾಂಬರ್ ವಿಮಾನಗಳು, ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಮತ್ತು ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ಮತ್ತು ಶತ್ರು ನೆಲದಲ್ಲಿ ನಿಖರವಾದ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ವಿಯೆಟ್ನಾಂನಿಂದ ಇರಾನ್‌ವರೆಗೆ ಇತ್ತೀಚಿಗೆ ಅಮೆರಿಕದ ನಡೆಸಿದ ಎಲ್ಲ ಸೇನಾ ಸಂಘರ್ಷಗಳಲ್ಲಿ ಬಿ–52 ಬಾಂಬರ್ ಬಳಕೆ ಆಗಿದೆ. ಸೋಮವಾರ ಪತನಗೊಂಡ ಬಾಂಬರ್ ವಿಮಾನವು ಇರಾನ್ ಯುದ್ಧದಲ್ಲಿ ಬಳಕೆ ಆಗಿತ್ತೇ ಎನ್ನುವುದು ಸ್ಪಷ್ಟಗೊಂಡಿಲ್ಲ.

ಬಾಂಬರ್ ವಿಮಾನ ದುರಂತದ ಬಗ್ಗೆ ನಿಖರ ಕಾರಣ ಉಲ್ಲೇಖಿಸದಿದ್ದರೂ, ‘ಬಿ–52 ವಿಮಾನದಲ್ಲಿ ರೆಡಾರ್ ಆಧುನೀಕರಣ ವ್ಯವಸ್ಥೆ (ಆರ್‌ಎಂಪಿ) ಅಳವಡಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ನಿಯಮಿತ ಪರೀಕ್ಷಾರ್ಥ ಹಾರಾಟ ನಡೆಯುತ್ತಿತ್ತು’ ಎಂದು ಕಮಾಂಡರ್ ಕರ್ನಲ್ ಜೇಮ್ಸ್ ಹೇಯ್ಸ್ ಹೇಳಿದ್ದಾರೆ.

ಮಳೆ ಕೊರತೆ: ತಮಿಳುನಾಡಿಗೆ ಇಲ್ಲ ನೀರು

ನೀರಾವರಿ ನಿಗಮದ ಸಭೆಯಲ್ಲಿ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ



ರಾಮಲಿಂಗಾರೆಡ್ಡಿ

ಬೆಂಗಳೂರು: ಕಾವೇರಿ ಜಲಾನಯನ ಪ್ರದೇಶದಲ್ಲಿ ಮೇ ಮತ್ತು ಜೂನ್‌ನಲ್ಲಿ ವಾಡಿಕೆಯಂತೆ ಮಳೆಯಾಗದೆ ಜಲಾಶಯಗಳಿಗೆ ಒಳ ಹರಿವು ಕಡಿಮೆಯಾಗಿದ್ದು, ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಾಗಿಲ್ಲ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕಾವೇರಿ ಹಾಗೂ ಕರ್ನಾಟಕ ನೀರಾವರಿ ನಿಗಮದ ಸಭೆಯಲ್ಲಿ ಮಾತನಾಡಿದ ಅವರು, ‘ಕಾವೇರಿ ಜಲ ವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಸುಪ್ರೀಂ ಕೋರ್ಟ್ ಮಾರ್ಪಾಡು ಮಾಡಿದೆ. ಆದೇಶದಂತೆ, ಕರ್ನಾಟಕ–ತಮಿಳುನಾಡು ಗಡಿ ಭಾಗದ ಬಿಳಿಗುಂಡ್ಲುವಿನಿಂದ ಜೂನ್‌ನಲ್ಲಿ 9.19 ಟಿಎಂಸಿ ಅಡಿ ಹರಿಸಬೇಕಿದೆ. ಆದರೆ, ಈವರೆಗೆ 1.778 ಟಿಎಂಸಿ ಅಡಿಯಷ್ಟೇ ಹರಿಸಲಾಗಿದೆ. ಜಲಾಶಯದಲ್ಲಿ ಇರುವ ಸ್ವಲ್ಪ ನೀರನ್ನು ಕುಡಿಯುವ ಉದ್ದೇಶಕ್ಕೆ ಬಳಸಿಕೊಳ್ಳಬೇಕು’ ಎಂದು ಸೂಚಿಸಿದರು.

‘ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗೆ ಬಳಸಿಕೊಳ್ಳುವ ಭೂಮಿಯ ಬದಲಿಗೆ ಅರಣ್ಯ ಇಲಾಖೆಗೆ ಬೇರೆ ಭೂಮಿ ನೀಡಲು ಕ್ರಮ ಕೈಗೊಳ್ಳಬೇಕು. ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಮಾತುಕತೆ ನಡೆಸಬೇಕು. ಡಿಪಿಆರ್‌ಗೆ ಕೇಂದ್ರ ಜಲ ಆಯೋಗದ ಸಲ್ಲಿಸಿದ ಆಕ್ಷೇಪಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿ, ಅನುಮೋದನೆ ಪಡೆಯಬೇಕು’ ಎಂದರು.

ಭೂಸ್ವಾಧೀನ ಸೇರಿದಂತೆ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಬೇಕು. ಲೋಕ್ ಅದಾಲತ್‌ಗಳನ್ನು ಬಳಸಿಕೊಳ್ಳಬೇಕು. ಕೆರೆ ತುಂಬಿಸುವ, ಕುಡಿಯುವ ನೀರಿನ ಯೋಜನೆಗಳಿಗೆ, ಕಾಲುವೆಗಳ ಆಧುನೀಕರಣಕ್ಕೆ ಆದ್ಯತೆ ನೀಡಬೇಕು. ರಾಜ್ಯ ಜಲನೀತಿ–2022, ಕರ್ನಾಟಕ ನೀರಾವರಿ ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿದರು.

25ಕ್ಕೆ ತುಂಗಭದ್ರಾ ಗೇಟ್ ಉದ್ಘಾಟನೆ

ತುಂಗಭದ್ರಾ ಅಣೆಕಟ್ಟೆಗೆ ಹೊಸದಾಗಿ ಅಳವಡಿಸಿರುವ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮವನ್ನು ಜೂನ್ 25ರಂದು ಹಮ್ಮಿಕೊಳ್ಳಲಾಗುವುದು ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಕಾರ್ಯಕ್ರಮದ ಬಗ್ಗೆ ನೀರಾವರಿ ನಿಗಮದ ಸಭೆಯಲ್ಲಿ ಚರ್ಚಿಸಲಾಯಿತು. ಜೂನ್ 18ರಂದು ಜಲಾಶಯಕ್ಕೆ ಭೇಟಿ ನೀಡಿ, ಪೂರ್ವಸಿದ್ಧತೆಗಳನ್ನು ಪರಿಶೀಲಿಸಲಾಗುವುದು. ಕೇಂದ್ರ ಜಲಶಕ್ತಿ ಸಚಿವರು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳು ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಶೇ 50ಕ್ಕಿಂತ ಹೆಚ್ಚು ಹುದ್ದೆ ಖಾಲಿ

ಕರ್ನಾಟಕ ನೀರಾವರಿ ನಿಗಮದಲ್ಲಿ ಶೇ 50ರಷ್ಟು ಹಾಗೂ ಕಾವೇರಿ ನಿಗಮದಲ್ಲಿ ಶೇ 57.3ರಷ್ಟು ಹುದ್ದೆಗಳು ಖಾಲಿ ಇದ್ದು, ಭರ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ರಾಮಲಿಂಗಾರೆಡ್ಡಿ ಸೂಚಿಸಿದರು.

ಅಧಿಕಾರಿಗಳು ಮತ್ತು ಸಿಬ್ಬಂದಿ ಕೊರತೆಯ ಕಾರಣ ತ್ವರಿತ ಕೆಲಸಗಳಿಗೆ ಅಡ್ಡಿಯಾಗಿದೆ. ಪ್ರಮುಖವಾಗಿ ಸಹಾಯಕ ಎಂಜಿನಿಯರ್‌ಗಳ ನೇಮಕಾತಿಗೆ ಆದ್ಯತೆ ನೀಡಬೇಕು. ಕೆಪಿಎಸ್‌ಸಿ ಅಥವಾ ಕೆಇಎಗೆ ಪ್ರಸ್ತಾವ ಸಲ್ಲಿಸಬೇಕು. ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಪ್ರತಿ ವರ್ಷ ಶೇ 2ರಷ್ಟನ್ನು ಭರ್ತಿ ಮಾಡಬೇಕು ಎಂದರು.

ವೀರಶೈವ ಮಹಾಸಭಾಕ್ಕೆ ಗಣೇಶ್ ನೇಮಕ

ಪ್ರಜಾವಾಣಿ ವಾರ್ತೆ

ಎಸ್‌.ಎಸ್‌. ಗಣೇಶ್

ಬೆಂಗಳೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಎಸ್. ಗಣೇಶ್ ಅವರನ್ನು ನೇಮಿಸಲಾಗಿದೆ.

ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಶಾಮನೂರು ಶಿವಶಂಕರಪ್ಪ ಅವರು ನಿಧನರಾದ ಬಳಿಕ, ಈ ಸ್ಥಾನವನ್ನು ಈಗಿನ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಅವರು ನಿರ್ವಹಿಸುತ್ತಿದ್ದರು. ಶಿವಶಂಕರಪ್ಪ ಜನ್ಮದಿನದಂದೇ ಪುತ್ರನಿಗೆ ಹುದ್ದೆ ನೀಡಿ ಮಹಾಸಭಾದ ಅಧ್ಯಕ್ಷ ಈಶ್ವರ ಖಂಡ್ರೆ ಆದೇಶ ಹೊರಡಿಸಿದ್ದಾರೆ.

ಭಾರತಕ್ಕೆ ಕಾಯಂ ಸದಸ್ಯತ್ವ: ಸ್ಲೊವಾಕಿಯಾ ಬೆಂಬಲ

ಬ್ರಾಟಿಸ್ಲಾವಾ (ಪಿಟಿಐ): ಸುಧಾರಣೆಗೊಳ್ಳಲಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಪಡೆಯುವ ಭಾರತದ ಪ್ರಯತ್ನವನ್ನು ಸ್ಲೊವಾಕಿಯಾ ಬೆಂಬಲಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸ್ಲೊವಾಕಿಯಾಕ್ಕೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಪ್ರಧಾನಿ ರಾಬರ್ಟ್ ಫಿಕೊ ಅವರ ಜೊತೆ ಈ ಬಗ್ಗೆ ಮಾತುಕತೆ ನಡೆಸಿದ್ದಾರೆ. ಎರಡೂ ದೇಶಗಳು ತಮ್ಮ ಸಮಗ್ರ ಪಾಲುದಾರಿಕೆಯನ್ನು ಹೆಚ್ಚಿಸುವ ಕುರಿತು ಚರ್ಚೆ ನಡೆಸಲಾಗಿದೆ ಎಂದು ಜಂಟಿ ಹೇಳಿಕೆ ತಿಳಿಸಿದೆ.

ಕಾಯಂ ಸದಸ್ಯತ್ವ ಪಡೆಯುವ ಭಾರತದ ಪ್ರಯತ್ನಕ್ಕೆ ಸ್ಲೊವಾಕಿಯಾ ನೀಡುತ್ತಿರುವ ಬೆಂಬಲವನ್ನು ಮೋದಿ ಶ್ಲಾಘಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Multiple Vacancy

ಕಂಕನಾಡಿ, ಮಂಗಳೂರು ಸೈಬರ್ ಸೆಂಟರಿಗೆ ಕಂಪ್ಯೂಟರ್ ನುರಿತವರು ಬೇಕಾಗಿದ್ದರೆ. ಸಮಯ: 8:30AM To 6:30PM ಸಂಬಳ: 18,000/ 9845166472

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

General

SALE: PRIME location 8700 sq ft vacant Industrial Land opposite Mangalore port. 9945469859

ಪ್ರವಾಸ

Travel Agencies

11 ದಿನಗಳ ಸಿಂಗಾಪುರ ಮಲೇಷಿಯಾ ಹೈಲ್ಯಾಂಡ್ ಪ್ರವಾಸ 22/6/26, 7 ದಿನಗಳ ಭೂತಾನ್ ಪ್ರವಾಸ 17/6/26 6 ದಿನಗಳ ಮಲೇಷಿಯಾ 4/8/26 ಸುವರ್ಣಯಾತ್ರ 9019462508 9480843945

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉಕ್ರೇನ್–ರಷ್ಯಾ ಯುದ್ಧ ಅಂತ್ಯಕ್ಕೆ ಟ್ರಂಪ್ ಮೇಲೆ ಒತ್ತಡ

ಇವಿಯಾನ್ ಲಿ ಬಾನ್ (ಎಪಿ): ಅಮೆರಿಕ–ಇರಾನ್ ಯುದ್ಧ ಅಂತ್ಯವಾಗುವ ಸಾಧ್ಯತೆಗಳು ದಟ್ಟವಾಗುತ್ತಿರುವ ಹೊತ್ತಿನಲ್ಲಿಯೇ ನಾಲ್ಕು ವರ್ಷಕ್ಕೂ ಹೆಚ್ಚಿನ ಸಮಯದಿಂದ ನಡೆಯುತ್ತಿರುವ ಉಕ್ರೇನ್–ರಷ್ಯಾ ಯುದ್ಧ ಅಂತ್ಯಗೊಳಿಸುವ ಸಂಬಂಧ ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಜಿ7 ದೇಶಗಳ ಶೃಂಗಸಭೆಯಲ್ಲಿ ಮಂಗಳವಾರ ಚರ್ಚೆ ನಡೆಯಿತು. ರಷ್ಯಾದ ಮೇಲೆ ಇನ್ನಷ್ಟು ನಿರ್ಬಂಧ ಹೇರುವ ಬಗ್ಗೆಯೂ ಚರ್ಚೆಯಾಯಿತು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಐರೋಪ್ಯ ಒಕ್ಕೂಟದ ನಾಯಕರು ಸಭೆಗೆ ಆತ್ಮೀಯವಾಗಿ ಬರಮಾಡಿಕೊಂಡರು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಸಭೆಯಲ್ಲಿ ಪಾಲ್ಗೊಂಡರು.

ರಷ್ಯಾದೊಂದಿಗೆ ಶಾಂತಿ ಮಾತುಕತೆ ಸಾಧ್ಯವಾಗಿಸಲು ಝೆಲೆನ್‌ಸ್ಕಿ ಹಾಗೂ ಐರೋಪ್ಯ ದೇಶಗಳ ನಾಯಕರು ಟ್ರಂಪ್ ಅವರನ್ನು ಸಂತೋಷಪಡಿಸಲು ಮುಂದಾದರು. ಟ್ರಂಪ್ ಅವರು ಇತ್ತೀಚೆಗೆ ಹುಟ್ಟು ಹಬ್ಬವನ್ನು ಆಚರಿಸಿಕೊಂಡಿದ್ದರು. ಈ ಕಾರಣ ಅವರಿಗೆ ಜರ್ಮನಿಯ ಛಾನ್ಸಲರ್ ಫ್ರಿಡ್‌ರಿಚ್ ಮೆರ್ಝ್ ಅವರು ‘ಟ್ರಂಪ್ 47’ ಎಂಬ ಜರ್ಸಿಯನ್ನು ಉಡುಗೊರೆ ನೀಡಿದರು.

‘ಇರಾನ್ ಜೊತೆಗಿನ ಯುದ್ಧ ಮುಗಿದಿದೆ. ಈಗ ನನ್ನ ಪೂರ್ಣ ಗಮನವು ಉಕ್ರೇನ್–ರಷ್ಯಾ ಯುದ್ಧ ಅಂತ್ಯಗೊಳಿಸುವತ್ತ ಇರಲಿದೆ. ನನ್ನ ಕೈಯಲ್ಲಿ ಸಾಧ್ಯವಾಗುವ ಎಲ್ಲವನ್ನೂ ಮಾಡುತ್ತೇನೆ. ರಷ್ಯಾ ಈಗ ಒಪ್ಪಂದಕ್ಕೆ ಬರಲೇಬೇಕು’ ಎಂದು ಸಭೆಯಲ್ಲಿ ಟ್ರಂಪ್ ಹೇಳಿದರು. ಭಾನುವಾರವಷ್ಟೆ ಟ್ರಂಪ್ ಅವರು ಝೆಲೆನ್‌ಸ್ಕಿ ಮತ್ತು ರಷ್ಯಾ ಅಧ್ಯಕ್ಷ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ಇದೇ ವೇಳೆ ಝೆಲೆನ್‌ಸ್ಕಿ ಅವರೊಂದಿಗೆ ಮಂಗಳವಾರವೂ ಅವರು ಪ್ರತ್ಯೇಕ ಮಾತುಕತೆ ನಡೆಸಿದರು.

ಇಲ್ಲಿಯವರೆಗೆ ಅಮೆರಿಕವು ರಷ್ಯಾದ ಪರವಾಗಿಯೇ ಇತ್ತು. ಈಗ ಸೇನಾ ಸಾಮರ್ಥ್ಯದ ವಿಚಾರದಲ್ಲಿ ಉಕ್ರೇನ್ ಹೆಚ್ಚು ಶಕ್ತಿಯುತವಾಗಿದೆ. ಆದ್ದರಿಂದ, ಅಮೆರಿಕವು ಉಕ್ರೇನ್ ಪರ ನಿಲ್ಲಬೇಕು ಎನ್ನುವುದು ಐರೋಪ್ಯ ನಾಯಕರ ಒತ್ತಾಯ.

‘ನೋಡಿ, ನನಗೆ ಈ ಯುದ್ಧದ ಕುರಿತು ಯಾವುದೇ ಅಭಿಪ್ರಾಯ ಇಲ್ಲ. ನಮ್ಮ ಮೇಲೆ ಇದು ಪ್ರಭಾವವನ್ನೂ ಬೀರುವುದಿಲ್ಲ. ನಾವು ಸಾವಿರಾರು ಕಿ.ಮೀ ದೂರದಲ್ಲಿದ್ದೇವೆ’ ಎಂಬುದಾಗಿ ಟ್ರಂಪ್ ಹೇಳಿದ್ದಾರೆ’ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ನಿರ್ಬಂಧ ಹೆಚ್ಚಿಸಬೇಕು: ರಷ್ಯಾದ ಇಂಧನ ಪೂರೈಕೆ, ಸೇನಾ ಪರಿಕರ ಮಾರಾಟ ಸಂಬಂಧ ನಿರ್ಬಂಧ ಹೇರುವ ಬಗ್ಗೆ ಚರ್ಚೆ ನಡೆಯಿತು. ಹೆಚ್ಚಿನ ನಿರ್ಬಂಧ ಹೇರಿ ರಷ್ಯಾವು ಶಾಂತಿ ಮಾತುಕತೆಗೆ ಬರುವಂತೆ ಮಾಡುವ ಉದ್ದೇಶ ಜಿ7 ದೇಶಗಳ ನಾಯಕರದ್ದು. ಆದರೆ, ಐರೋಪ್ಯ ನಾಯಕರು ಬಯಸಿದಂತೆ ರಷ್ಯಾದ ಮೇಲೆ ನಿರ್ಬಂಧ ಹೇರಲು ಟ್ರಂಪ್ ಅವರು ಒಪ್ಪಿಕೊಂಡಿಲ್ಲ ಎಂದು ಇಬ್ಬರು ರಾಯಭಾರಿಗಳು ಮಾಹಿತಿ ನೀಡಿದರು.

‘ಉಕ್ರೇನ್ ಪರವಾಗಿ ಗಾಳಿ ಬೀಸುತ್ತಿದೆ. ರಷ್ಯಾ ಶಕ್ತಿಹೀನವಾಗಿದೆ ಎಂಬುದು ಬಹಿರಂಗವಾಗಿಯೇ ತಿಳಿಯುತ್ತಿದೆ’ ಎಂದು ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ಹೊರ್ಮುಜ್ ಜಲಸಂಧಿಯಲ್ಲಿ ತೈಲ ಪೂರೈಕೆ ಸಾಧ್ಯವಾಗುತ್ತಿದೆ. ಆದ್ದರಿಂದ ರಷ್ಯಾದ ತೈಲ ಖರೀದಿಗೆ ನಾವು ಶೀಘ್ರದಲ್ಲಿಯೇ ಮತ್ತೊಮ್ಮೆ ನಿರ್ಬಂಧ ಹೇರಲಿದ್ದೇವೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಲೆಬನಾನ್ ಸಂಘರ್ಷ ಶಮನವೂ ಶಾಂತಿ ಒಪ್ಪಂದದ ಭಾಗ: ಇರಾನ್

‘ಇಸ್ರೇಲ್ ಸೇನೆ ಲೆಬನಾನ್ ತೊರೆಯಲಿ’

ದುಬೈ (ಎಪಿ/ ಎಎಫ್‌ಪಿ): ‘ಇಸ್ರೇಲ್ ಸೇನೆಯು ಲೆಬನಾನ್‌ನಿಂದ ಹಿಂದೆ ಸರಿಯಬೇಕು ಎಂಬ ಅಂಶವೂ ಅಮೆರಿಕದ ಜತೆಗಿನ ಶಾಂತಿ ಒಪ್ಪಂದದ ಭಾಗವಾಗಿರಲಿದೆ’ ಎಂದು ಇರಾನ್ ಮಂಗಳವಾರ ಹೇಳಿದೆ.

ಆದರೆ, ಲೆಬನಾನ್‌ನಿಂದ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವುದಿಲ್ಲ ಎಂದು ಇಸ್ರೇಲ್ ಸ್ಪಷ್ಟಪಡಿಸಿರುವುದು ಶಾಂತಿ ಒಪ್ಪಂದದ ಅಂಶಗಳ ಕುರಿತು ಪ್ರಶ್ನೆಗಳು ಏಳುವಂತೆ ಮಾಡಿದೆ.

ಇರಾನ್ ವಿರುದ್ಧದ ಯುದ್ಧ ಕೊನೆಗೊಳಿಸುವ ಶಾಂತಿ ಒಪ್ಪಂದದ ಅಂಶಗಳನ್ನು ಅಂತಿಮಗೊಳಿಸಲಾಗಿದ್ದು, ಜೂನ್ 19ರಂದು ಸಹಿ ಹಾಕಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಘೋಷಿಸಿದ್ದರು.

‘ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸುವುದು ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸುತ್ತದೆ. ಲೆಬನಾನ್‌ನಲ್ಲಿ ಯುದ್ಧ ಅಂತ್ಯಗೊಳ್ಳುವುದು ಕೂಡಾ ಅಮೆರಿಕ–ಇರಾನ್ ಶಾಂತಿ ಒಪ್ಪಂದದ ಭಾಗವಾಗಿದೆ’ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಟೆಹರಾನ್‌ನಲ್ಲಿ ವಿದೇಶಿ ರಾಜತಾಂತ್ರಿಕರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಈಗಿನ ಯುದ್ಧದ ಸಂದರ್ಭದಲ್ಲಿ ಲೆಬನಾನ್‌ನಲ್ಲಿ ಅಕ್ರಮಿಸಿಕೊಂಡಿರುವ ಪ್ರದೇಶಗಳಿಂದ ಇಸ್ರೇಲ್ ಸೇನೆ ಸಂಪೂರ್ಣವಾಗಿ ಹಿಂದೆ ಸರಿಯಬೇಕು. ಇಲ್ಲದಿದ್ದರೆ ಯುದ್ಧ ಕೊನೆಗೊಂಡಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ’ ಎಂದಿದ್ದಾರೆ.

ಇಸ್ರೇಲ್ ಪಡೆಗಳು ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸಬೇಕೆಂಬ ಅಂಶವು ಶಾಂತಿ ಒಪ್ಪಂದದ ಭಾಗವಾಗಿದೆಯೇ ಎಂಬ ಬಗ್ಗೆ ಅಮೆರಿಕ ಇದುವರೆಗೆ ಏನನ್ನೂ ಹೇಳಿಲ್ಲ.

‘ನಾವು ಅಮೆರಿಕ–ಇರಾನ್ ನಡುವಿನ ಒಪ್ಪಂದದ ಭಾಗವಾಗಿಲ್ಲ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೋಮವಾರ ಹೇಳಿದ್ದರು.

ಬರ್ಗನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಸಹಿ (ಜ್ಯೂರಿಚ್ ವರದಿ): ಅಮೆರಿಕ ಮತ್ತು ಇರಾನ್‌ನ ನಿಯೋಗವು ಮಧ್ಯ ಸ್ವಿಟ್ಜರ್ಲೆಂಡ್‌ನ ನಿಡ್ವಾಲ್ಡೆನ್‌ನಲ್ಲಿರುವ ಬರ್ಗನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಸ್ವಿಟ್ಜರ್ಲೆಂಡ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಟ್ರಂಪ್ ಅವರು ಇರಾನ್ ಜತೆಗಿನ ಶಾಂತಿ ಒಪ್ಪಂದದ ವಿವರಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು ಹಾಗೂ ಸಂಸತ್ತಿಗೆ ಮಾಹಿತಿ ನೀಡಬೇಕು

ಚಕ್ ಶೂಮರ್, ಡೆಮಾಕ್ರಟಿಕ್ ಪಕ್ಷದ ನಾಯಕ

ಇರಾನ್‌ನಲ್ಲಿ ಹೂಡಿಕೆ ಇಲ್ಲ: ಟ್ರಂಪ್

ಇವಿಯಾನ್ (ಫ್ರಾನ್ಸ್): ಶಾಂತಿ ಒಪ್ಪಂದದ ಬಳಿಕ ಅಮೆರಿಕವು ಇರಾನ್‌ನಲ್ಲಿ ಯಾವುದೇ ರೀತಿಯ ಹೂಡಿಕೆಗೆ ಮುಂದಾಗುವುದಿಲ್ಲ ಎಂದು ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ.

ಜಿ7 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಫ್ರಾನ್ಸ್‌ಗೆ ಬಂದಿರುವ ಅವರು ಕತಾರ್ ದೊರೆ ಜತೆ ಮಾತನಾಡುವಾಗ ಈ ವಿಷಯ ತಿಳಿಸಿದ್ದಾರೆ. ‘ಇರಾನ್‌ನಲ್ಲಿ ಹೂಡಿಕೆ ಮಾಡುವ ಅನಿವಾರ್ಯತೆ ನಮಗೆ ಒದಗಿ ಬಂದಿಲ್ಲ. ನಮ್ಮ ಯಾವುದೇ ಹಣ ಅಲ್ಲಿ ಹೂಡಿಕೆ ಮಾಡುತ್ತಿಲ್ಲ’ ಎಂದಿದ್ದಾರೆ. ‘ಇರಾನ್ ಅಣ್ವಸ್ತ್ರ ಹೊಂದಬಾರದು ಎಂಬುದು ಶಾಂತಿ ಒಪ್ಪಂದದ ಪ್ರಮುಖ ಉದ್ದೇಶ’ ಎಂದಿದ್ದಾರೆ.

‘ಅಂತಿಮ ಒಪ್ಪಂದ: ಈ ವಾರ ಮಾತುಕತೆ’

‘ಇರಾನ್‌ನ ಅಣು ಯೋಜನೆಗಳು ಮತ್ತು ನಿರ್ಬಂಧಗಳನ್ನು ತೆರವುಗೊಳಿಸುವ ಕುರಿತಂತೆ ಅಮೆರಿಕದೊಂದಿಗಿನ ಮಾತುಕತೆ ಈ ವಾರದ ಕೊನೆಯಲ್ಲಿ ಆರಂಭ ವಾಗುವ ಸಾಧ್ಯತೆಯಿದೆ’ ಎಂದು ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ. ‘ಯುದ್ಧ ಕೊನೆಗೊಳಿಸಲು ಶುಕ್ರವಾರ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ನಂತರದ 60 ದಿನಗಳಲ್ಲಿ ಅಂತಿಮ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ನಡೆಯಲಿದೆ’ ಎಂದಿದ್ದಾರೆ.

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ವೋಟ್ ಮಾಡಿ

4ನೇ ಆವೃತ್ತಿ
ಜೂನ್ 19ಕ್ಕೆ

ಇವರೇ ನಮ್ಮ ಜ್ಯೂರಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. ಈಗಾಗಲೇ 23 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಆಯ್ಕೆ ಹಿಂದೆ ನಮ್ಮ ತೀರ್ಪುಗಾರರ ತಂಡದ ಶ್ರಮವಿದೆ. ಏಳು ಜನ ಮುಖ್ಯ ತೀರ್ಪುಗಾರರು, 21 ಜನ ತಾಂತ್ರಿಕ ತೀರ್ಪುಗಾರರು ಸ್ಪರ್ಧೆಗೆ ಬಂದ ಎಲ್ಲ ಸಿನಿಮಾಗಳನ್ನು ನೋಡಿ ನಾಮನಿರ್ದೇಶನವನ್ನು ಅಂತಿಮಗೊಳಿಸಿದ್ದಾರೆ. ಅವರ ಕಿರುಪರಿಚಯ ಇಲ್ಲಿದೆ.
‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಜನ ಮೆಚ್ಚಿದ ವಿಭಾಗದಲ್ಲಿ ಜೂನ್ 17ರವರೆಗೆ ವೋಟ್ ಹಾಕಲು ಅವಕಾಶವಿದೆ. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಮತ ಚಲಾಯಿಸಬಹುದು. ಇಲ್ಲವಾದರೆ ಪ್ರಜಾವಾಣಿ ವೆಬ್‌ಸೈಟ್ (https://pvca.prajavani.net/cinesamman/season4) ಪ್ರವೇಶಿಸಿ ಮತ ಹಾಕಬಹುದು.
ಜೂನ್ 19ರಂದು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜೇತರ ಘೋಷಣೆಯಾಗಲಿದೆ.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಮುಖ್ಯ ತೀರ್ಪುಗಾರರು



ಟಿ.ಎಸ್.ನಾಗಾಭರಣ, ನಿರ್ದೇಶಕ | ವಿ.ಮನೋಹರ್, ಸಂಗೀತ ನಿರ್ದೇಶಕ | ಸುರೇಶ್ ಅರಸ್, ಸಂಕಲನಕಾರ | ಪಿ.ಶೇಷಾದ್ರಿ, ನಿರ್ದೇಶಕ | ಸುಮನ್ ಕಿತ್ತೂರು, ನಿರ್ದೇಶಕಿ | ಅನು ಪ್ರಭಾಕರ್, ನಟಿ | ಪೂಜಾ ಗಾಂಧಿ, ನಟಿ

ತಾಂತ್ರಿಕ ತೀರ್ಪುಗಾರರು

ಶಶಿಧರ ಅಡಪ, ಕಲಾ ನಿರ್ದೇಶಕ | ಗಂಗಾಧರ ಮೊದಲಿಯಾರ್, ಸಿನಿಮಾ ವಿಮರ್ಶಕ | ಸತ್ಯ ಹೆಗಡೆ, ಛಾಯಾಚಿತ್ರಗ್ರಾಹಕ | ಎಂ.ಎನ್.ಸ್ವಾಮಿ, ಸಂಕಲನಕಾರ | ಬಿ.ಎನ್.ಸುಬ್ರಹ್ಮಣ್ಯ, ಸಿನಿಮಾ ವಿಮರ್ಶಕ | ಶಿವಧ್ವಜ್ ಶೆಟ್ಟಿ, ನಟ, ನಿರ್ದೇಶಕ | ಸ್ಟೀಫನ್ ರಾಜ್, ಸಂಗೀತ ನಿರ್ದೇಶಕ | ಪ್ರತಿಭಾ ನಂದಕುಮಾರ್, ಸಿನಿಮಾ ವಿಮರ್ಶಕಿ | ಸಂಧ್ಯಾರಾಣಿ, ಚಿತ್ರಕಥೆಗಾರ್ತಿ | ಚಂಪಾ ಶೆಟ್ಟಿ, ನಟಿ, ನಿರ್ದೇಶಕಿ | ಪ್ರೀತಿ ನಾಗರಾಜ್, ಸಿನಿಮಾ ವಿಮರ್ಶಕಿ

ಜಯತೀರ್ಥ, ನಿರ್ದೇಶಕ | ಹೃದಯ ಶಿವ, ಗೀತರಚನೆಕಾರ | ಮುರುಗಾನಂದ್, ನೃತ್ಯ ನಿರ್ದೇಶಕ | ಜಾನ್ಸನ್ ದುರೈ, ಧ್ವನಿಮುದ್ರಣ ತಜ್ಞ | ಕಬಡ್ಡಿ ಬಾಬು, ನಿರ್ದೇಶಕ | ಹರೀಶ್ ಮಲ್ಯ, ಚಿತ್ರ ವಿಮರ್ಶಕ | ಪಿ.ಡಿ.ಸತೀಶ್ ಚಂದ್ರ, ನಟ, ರಂಗ ನಿರ್ದೇಶಕ | ಬಿ.ಎಸ್.ಕೆಂಪರಾಜು, ಸಂಕಲನಕಾರ | ಕೆ.ಎಂ.ಚೈತನ್ಯ, ನಿರ್ದೇಶಕ | ಚೇತನ್ ನಾಡಿಗೇರ್, ಸಿನಿಮಾ ವಿಮರ್ಶಕ

Fashion Partner: TRENDS | Mobility Partner: Akshaya Motors | Banking Partner: ಕೆನರಾ ಬ್ಯಾಂಕ್ Canara Bank, Together We Can | Wardrobe Partner: MALLESHWARAM Sudarshan Silks | Mobile Partner: HUMAN MOBILE DEVICES HMD | Knowledge Partners: GM UNIVERSITY DAVANAGERE, INSIGHTSIAS, GITAM | Travel Partner: ಅಡಿಗಾಸ್ ಯಾತ್ರಾ

Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್ | ಆಡ್‌ಕರ್ ನಂಬಿಕೆ. ನಿರಂತರ. | MSIL Chits | The Janatha Co-operative Bank Ltd., Malleswaram, Bangalore | KAYAM TABLET | Bindu | NBCC A Navratna CPSE
Audit Partner: EY | Television Partner: Z ಕನ್ನಡ

ಚಿಟಿಕೆ ಸುದ್ದಿ

ಎಂಜಿನ್‌ನಲ್ಲಿ ಸಮಸ್ಯೆ: ಕಣ್ಣೂರಿಗೆ ಮರಳಿದ ವಿಮಾನ

ಕಣ್ಣೂರು(ಪಿಟಿಐ): ಕೇರಳದ ಕಣ್ಣೂರಿನಿಂದ ಜೆದ್ದಾಗೆ ಮಂಗಳವಾರ ಹೊರಟಿದ್ದ ಏರ್ ಇಂಡಿಯಾ ವಿಮಾನದಲ್ಲಿ ಎರಡು ಗಂಟೆಗಳ ಹಾರಾಟದ ಬಳಿಕ ಎಂಜಿನ್‌ನಲ್ಲಿ ಸಮಸ್ಯೆ ಕಂಡುಬಂದ ಕಾರಣ ವಿಮಾನ ಕಣ್ಣೂರಿಗೆ ಮರಳಿತು.

180 ಪ್ರಯಾಣಿಕರಿದ್ದ ವಿಮಾನವು ಮುಂಜಾನೆ 7ಗಂಟೆ 40 ನಿಮಿಷಕ್ಕೆ ಹೊರಟಿತ್ತು. ಬಳಿಕ ಅದರಲ್ಲಿ ಎಂಜಿನ್ ಸಮಸ್ಯೆಯನ್ನು ಸೂಚಿಸುವ ಎಚ್ಚರಿಕೆಯ ದೀಪ ಉರಿದ ಕಾರಣ ಹಿಂತಿರುಗುವ ನಿರ್ಧಾರ ಕೈಗೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

ವಿಮಾನ ಸುರಕ್ಷಿತವಾಗಿ ಮರಳಿದ್ದು, ಪ್ರಯಾಣಿಕರೂ ಸುರಕ್ಷಿತರಾಗಿದ್ದಾರೆ. ವಿಮಾನದ ಇಂಧನ ಫಿಲ್ಟರ್‌ನಲ್ಲಿ ಸಮಸ್ಯೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): ‘ಮೇ 24ರಂದು ನಡೆದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಮಾಹಿತಿ ಸುಳ್ಳು’ ಎಂದು ಕೇಂದ್ರ ಸರ್ಕಾರ ಹೇಳಿದೆ.

‘ಯುಪಿಎಸ್‌ಸಿ 2026 ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ’ ಎಂದು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹರಿದಾಡುತ್ತಿದೆ. ಇದು ಸುಳ್ಳು’ ಎಂದು ಪ್ರೆಸ್ ಇನ್ಫರ್ಮೇಷನ್ ಬ್ಯೂರೊದ (ಪಿಐಬಿ) ಫ್ಯಾಕ್ಟ್‌ಚೆಕ್ ಘಟಕ ಹೇಳಿದೆ.

ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಎನ್‌ಎಸ್‌ಯುಐ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿತ್ತು.

ಶಾಸಕ ರಾಜೀನಾಮೆ

ಚೆನ್ನೈ (ಪಿಟಿಐ): ಮಾಜಿ ಸಚಿವ, ಎಐಎಡಿಎಂಕೆ ಭಿನ್ನಮತೀಯ ನಾಯಕ ಸಿ.ವಿಜಯಭಾಸ್ಕರ್ ಅವರು ಶಾಸಕ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

ತಮಿಳುನಾಡಿನ ಪುದುಕೊಟ್ಟೈ ಜಿಲ್ಲೆಯ ವಿರಾಲಿಮಲೈ ಕ್ಷೇತ್ರದ ಶಾಸಕರಾಗಿದ್ದ ಅವರು, ಮೇ 13ರಂದು ನಡೆದ ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದ ಪರ ಮತ ಚಲಾಯಿಸಿದ್ದರು.

ಹಣ ನಾಪತ್ತೆ: ಮತ್ತೆರಡು ದೂರು ದಾಖಲು

ರಾಮಮಂದಿರ ಟ್ರಸ್ಟ್ ಪದಾಧಿಕಾರಿಗಳ ವಜಾ, ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯ ರಾಮ ಮಂದಿರದ ‘ಕಾಣಿಕೆ ಹಣ ನಾಪತ್ತೆ’ ಪ್ರಕರಣಕ್ಕೆ ಸಂಬಂಧಿಸಿ ರಾಮ ಮಂದಿರ ಟ್ರಸ್ಟ್ ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಕೋರಿ, ರಾಮ ಜನ್ಮ ಭೂಮಿ ಪೊಲೀಸ್ ಠಾಣೆಯಲ್ಲಿ ಹೊಸದಾಗಿ ಎರಡು ದೂರು ದಾಖಲಾಗಿವೆ.

ರಾಮ ಮಂದಿರ ಚಳವಳಿಯಲ್ಲಿ ಬಿಜೆಪಿ ಮುಖಂಡ ಎಲ್.ಕೆ ಅಡ್ವಾಣಿ ಅವರೊಂದಿಗೆ ಕರಸೇವಕರಾಗಿ ಭಾಗಿಯಾಗಿದ್ದ, ‘ಧರ್ಮ ಸೇನಾ’ ಸಮಿತಿಯ ಅಧ್ಯಕ್ಷ ಸಂತೋಷ್ ದುಬೆ ಎಂಬುವರು ಟ್ರಸ್ಟ್ ಪದಾಧಿಕಾರಿಗಳ

ವಿರುದ್ಧ ದೂರು ನೀಡಿದ್ದಾರೆ. ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳಲು ನಿರಾಕರಿಸಿದರೆ ಕೋರ್ಟ್ ಮೊರೆ ಹೋಗುವುದಾಗಿ ಎಚ್ಚರಿಸಿದ್ದಾರೆ.

‘ಟ್ರಸ್ಟ್ ಪದಾಧಿಕಾರಿಗಳನ್ನು ಹುದ್ದೆಯಿಂದ ವಜಾಗೊಳಿಸಿ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಕೋರಿ ಯುವ ಕಾಂಗ್ರೆಸ್ ಘಟಕದ ಉಪಾಧ್ಯಕ್ಷ ಶರದ್ ಶುಕ್ಲಾ ಇನ್ನೊಂದು ದೂರು ದಾಖಲಿಸಿದ್ದಾರೆ.

‘ಕಾಣಿಕೆ ಹಣ ನಾಪತ್ತೆ ಪ್ರಕರಣವನ್ನು ಸಾಮೂಹಿಕ ಲೂಟಿ’ ಎಂದಿರುವ ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್, ‘ಆರ್‌ಎಸ್‌ಎಸ್ ಹಿನ್ನೆಲೆಯವರನ್ನು ರಾಮ ಮಂದಿರ ಟ್ರಸ್ಟ್‌ನ ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಲಾಗಿದೆ. ಈ ಪ್ರಕರಣದ ಕುರಿತು ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಹಣ ನಾಪತ್ತೆ ಪ್ರಕರಣ’ಕ್ಕೆ ಸಂಬಂಧಿಸಿದಂತೆ, ಮಂದಿರದಲ್ಲಿ ಕಾಣಿಕೆ ಮೊತ್ತ ಎಣಿಕೆ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ರಾಮಶಂಕರ್ ಯಾದವ್, ಲವಕುಶ ಮಿಶ್ರಾ, ಅನುಕಲ್ಪ ಮಿಶ್ರಾ ಸೇರಿ ಐವರು ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಅಯೋಧ್ಯೆಯ ಲವಕುಶ ಮಿಶ್ರಾ ನಿವಾಸದಲ್ಲಿ ಪೊಲೀಸರು ಈಚೆಗೆ ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ₹12 ಲಕ್ಷ ನಗದು ಪತ್ತೆಯಾಗಿತ್ತು. ‘ಕಾಣಿಕೆ ಹಣ ದುರುಪಯೋಗದಲ್ಲಿ ಭಾಗಿಯಾದವರು ಯಾರು ಎನ್ನುವುದು ಎಸ್‌ಐಟಿ ತನಿಖೆಯಿಂದ ಹೊರಬೀಳಲಿದೆ’ ಎಂದು ರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಹೇಳಿದ್ದಾರೆ.

ಎಸ್‌ಐಟಿಯಿಂದ 10 ಮಂದಿ ವಿಚಾರಣೆ

ಲಖನೌ (ಪಿಟಿಐ): ಹಣ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ತಂಡ ಮಂಗಳವಾರ ರಾಮ ಮಂದಿರ ಆಡಳಿತ ಮಂಡಳಿಯ 10ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಿತು.

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಅಧಿಕಾರಿ ಗೋಪಾಲ ರಾವ್ ಸೇರಿ, ಮಂದಿರದ ಕಾಣಿಕೆ ಹಣದ ಜತೆಗೆ ನೇರ ಸಂಬಂಧ ಹೊಂದಿರುವ ವ್ಯಕ್ತಿಗಳನ್ನು ಸತತ 8 ಗಂಟೆ, ಮಂದಿರದ ಆವರಣದಲ್ಲೇ ವಿಚಾರಣೆಗೆ ಒಳಪಡಿಸಿತು.

ಲಖನೌ ಪ್ರಾದೇಶಿಕ ಆಯುಕ್ತ ವಿಜಯ್ ವಿಶ್ವಾಸ್ ಪಂತ್, ಐಜಿಪಿ ಕಿರಣ್ ಎಸ್ ಮತ್ತು ಹಣಕಾಸು ಇಲಾಖೆಯ ವಿಶೇಷ ಕಾರ್ಯದರ್ಶಿ ನೀಲ್ ರತನ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದ್ದು, ವಾರದೊಳಗೆ ಮಧ್ಯಂತರ ವರದಿ, 15ದಿನಗಳಲ್ಲಿ ಅಂತಿಮ ವರದಿ ಸಲ್ಲಿಸಲು ಸೂಚಿಸಲಾಗಿದೆ.

‘ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ, ನನ್ನ ವಿರುದ್ಧದ ಆರೋಪ ನಿರಾಧಾರ’ ಎಂದು ಕಾಣಿಕೆ ಹಣ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದ ರಾಮಶಂಕರ್ ಯಾದವ್ ಸುದ್ದಿಗಾರರಿಗೆ ತಿಳಿಸಿದರು.

ಛತ್ತೀಸಗಢ: ಶಾಲೆಗಳಲ್ಲಿ ಇನ್ನು ಗಾಯತ್ರಿ ಮಂತ್ರ ಪಠಣ ಕಡ್ಡಾಯ

ರಾಯಪುರ(ಪಿಟಿಐ): ಛತ್ತೀಸಗಢದ ಶಾಲೆಗಳಲ್ಲಿ ಇನ್ನು ಮುಂದೆ ನಿತ್ಯವೂ ರಾಷ್ಟ್ರಗೀತೆ, ಹಾಡುವ ಜೊತೆಗೆ ಗಾಯತ್ರಿ ಮಂತ್ರ ಹಾಗೂ ಹಿಂದೂ ಧರ್ಮದ ಪ್ರಾರ್ಥನೆಗಳ ಪಠಣ ಕಡ್ಡಾಯವಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಈ ಪಠಣ ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಆದೇಶಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳು ದೇಶಭಕ್ತಿ ಮೈಗೂಡಿಸಿಕೊಳ್ಳುವಂತೆ ಮಾಡುವುದು, ಅವರ ಬೌದ್ಧಿಕ ಬೆಳವಣಿಗೆ ಹಾಗೂ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳು ಕುರಿತು ಅವರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪ್ರತಿದಿನ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಮೌಲ್ಯಾಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂಬ ನಿರ್ದೇಶನ ನೀಡಲಾಗಿದೆ’ ಎಂದೂ ತಿಳಿಸಿದ್ದಾರೆ.

ರಾಜ್ಯದಲ್ಲಿ ಹೊಸ ಶೈಕ್ಷಣಿಕ ವರ್ಷ ಮಂಗಳವಾರ ಆರಂಭವಾಗಿದೆ. ಜೂನ್ 12ರಂದು ಈ ಕುರಿತು ಆದೇಶ ಹೊರಡಿಸಲಾಗಿದೆ.

ಸರ್ಕಾರದ ಈ ನಿರ್ಧಾರಕ್ಕೆ ವಿಪಕ್ಷ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

‘ಶಾಲೆಗಳಲ್ಲಿ ಇತರ ಧರ್ಮ ಗಳ ವಿದ್ಯಾರ್ಥಿಗಳು ಕೂಡ ಓದುತ್ತಿರುವಾಗ, ಹಿಂದೂ ಧರ್ಮದ ಪ್ರಾರ್ಥನೆ ಮತ್ತು ಗಾಯತ್ರಿ ಮಂತ್ರ ಪಠಣವನ್ನು ಕಡ್ಡಾಯಗೊಳಿಸುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದೆ.

‘ಬಿಜೆಪಿ ನೇತೃತ್ವದ ಸರ್ಕಾರವು ಶಾಲೆಗಳಲ್ಲಿ ಆರ್‌ಎಸ್‌ಎಸ್ ಕಾರ್ಯಸೂಚಿ ಹೇರುವುದಕ್ಕೆ ಯತ್ನಿಸುತ್ತಿದೆ’ ಎಂದಿರುವ ಕಾಂಗ್ರೆಸ್, ಈ ಆದೇಶವನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿದೆ.

‘ಚುನಾವಣೆ: ಸ್ಪರ್ಧೆ ಇರಾದೆ ಇಲ್ಲ’

ನಾಗ್ಪುರ (ಪಿಟಿಐ): ‘ಚುನಾವಣೆಗಳಲ್ಲಿ ಸ್ಪರ್ಧಿಸುವ ಇರಾದೆ ನಮಗಿಲ್ಲ. ನಾವೇಕೆ ಚುನಾವಣೆಗಳಲ್ಲಿ ಸ್ಪರ್ಧಿಸಬೇಕು? ಅಂದರೆ, ಚುನಾವಣೆಗಳಲ್ಲಿ ಸ್ಪರ್ಧಿಸಿದರೆ ಮಾತ್ರವೇ ಹಕ್ಕುಗಳಿಗಾಗಿ ಹೋರಾಡಬಹುದೇ? ಇದು ಹೇಗೆ ಸರಿಯಾಗುತ್ತದೆ?’ ಎಂದು ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಮಂಗಳವಾರ ಪ್ರತಿಕ್ರಿಯಿಸಿದರು.

ಅಭಿಜೀತ್ ದೀಪ್ಕೆ

ನಾಗ್ಪುರದಲ್ಲಿ ನಡೆಯಲಿರುವ ಪ್ರತಿಭಟನೆ ಕುರಿತು ಮಾಧ್ಯಮ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಪ್ರಧಾನಿ ಮೋದಿ ಅವರು ಯುವಕರನ್ನು ಉದ್ದೇಶಿಸಿ ಮಾತನಾಡಿ, ಪ್ರಶ್ನೆ ಪತ್ರಿಕೆ ಸೋರಿಕೆ ಇನ್ನೆಂದೂ ಆಗಲ್ಲ ಎಂದು ಹೇಳಿಕೆ ನೀಡಬೇಕಾಗಿತ್ತೇ ಎಂಬ ಪ್ರಶ್ನೆಗೆ ಉತ್ತರಿಸಿ, ‘ಪ್ರಶ್ನೆ ಪತ್ರಿಕೆ ಸೋರಿಕೆ ಬಳಿಕ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಪೋಷಕರಲ್ಲಿ ಮೋದಿ ಮೊದಲಿಗೆ ಕ್ಷಮೆ ಕೇಳಬೇಕು’ ಎಂದರು.

‘ಎಷ್ಟು ದಿನ ನೀವು (ಪ್ರಧಾನಿ ಮೋದಿ) ಪರೀಕ್ಷಾಪೆ ಚರ್ಚಾದಲ್ಲಿ ಮಾತನಾಡುತ್ತಿದ್ದೀರಿ? ವಿದ್ಯಾರ್ಥಿಗಳ ಮನದ ಮಾತು ಕೇಳಿಸಿಕೊಳ್ಳಿ’ ಎಂದರು.

ಶಸ್ತ್ರಾಸ್ತ್ರ ಸಾಗಣೆ: ಏಳು ಜನರ ಬಂಧನ

ನವದೆಹಲಿ (ಪಿಟಿಐ):ರಾಷ್ಟ್ರ ರಾಜಧಾನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಭಯೋತ್ಪಾದಕ ಮತ್ತು ಸಂಘಟಿತ ಅಪರಾಧ ಜಾಲವನ್ನು ಭೇದಿಸಿರುವ ದೆಹಲಿ ಪೊಲೀಸರು, ಶಸ್ತ್ರಾಸ್ತ್ರ ಮತ್ತು ಮಾದಕವಸ್ತುಗಳ ಕಳ್ಳಸಾಗಣೆ ಮಾಡುತ್ತಿದ್ದ ಏಳು ಜನರನ್ನು ಬಂಧಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಐದು ಪಿಸ್ತೂಲ್‌ಗಳು, 41 ಜೀವಂತ ಕಾರ್ಟ್ರಿಡ್ಜ್‌ಗಳು, ಏಳು ಮೊಬೈಲ್ ಮತ್ತು ಒಂದು ಎಸ್‌ಯುವಿ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಕ್ಷಮೆ: 10 ಅರ್ಜಿ ಸಲ್ಲಿಸಿದ್ದ ಸಾವರ್ಕರ್’

ಪ್ರಜಾವಾಣಿ ವಾರ್ತೆ

ಮುಂಬೈ: ‘ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿಂದುತ್ವವಾದಿ ವಿ.ಡಿ.ಸಾವರ್ಕರ್ ಅವರು ಕ್ಷಮಾದಾನ ಕೋರಿ ಆಗಿನ ಬ್ರಿಟಿಷ್ ಸರ್ಕಾರಕ್ಕೆ 10 ಅರ್ಜಿಗಳನ್ನು ಸಲ್ಲಿಸಿದ್ದರು’ ಎಂದು ಸಾವರ್ಕರ್ ಮೊಮ್ಮಗ ಸಾತ್ಯಕಿ ಪುಣೆ ನ್ಯಾಯಾಲಯವೊಂದಕ್ಕೆ ತಿಳಿಸಿದ್ದಾರೆ.

ಸಂಸದರು ಮತ್ತು ಶಾಸಕರ ವಿಶೇಷ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಅಮೋಲ್ ಶಿಂದೆ ಅವರ ಮುಂದೆ ಹಾಜರಾಗಿದ್ದ ಅವರು, ಪಾಟಿ ಸವಾಲು ವೇಳೆ ಈ ಹೇಳಿಕೆ ನೀಡಿದ್ದಾರೆ.

ಸಾತ್ಯಕಿ ಅವರ ಈ ಹೇಳಿಕೆಯು, ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧದ ಸೈದ್ಧಾಂತಿಕ ಹೋರಾಟಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಹೊಸ ಅಸ್ತ್ರವು ಸಿಕ್ಕಂತಾಗಿದೆ.

‘ಸೆರೆವಾಸದಲ್ಲಿದ್ದ ಸಂದರ್ಭದಲ್ಲಿ ವಿ.ಡಿ.ಸಾವರ್ಕರ್ ಅವರು ಕ್ಷಮಾದಾನ ಕೋರಿ ಬ್ರಿಟಿಷರಿಗೆ ಅರ್ಜಿ ಸಲ್ಲಿಸಿದ್ದರು’ ಎಂದು ಪದೇಪದೇ ಟೀಕೆ ಮಾಡಿದ್ದ ಲೋಕಸಭೆ ವಿಪಕ್ಷ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಿರುದ್ಧ ಸಾತ್ಯಕಿ ಅವರು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.



ಸಾತ್ಯಕಿ

‘ಸಾವರ್ಕರ್ ಮಾತ್ರವಲ್ಲ, ಭಗತ್ ಸಿಂಗ್, ರಾಜಗುರು, ಬಟುಕೇಶ್ವರ್ ದತ್ತ, ಅಷ್ಫಾಕುಲ್ಲಾ ಖಾನ್ ಸೇರಿದಂತೆ ಅನೇಕ ಕ್ರಾಂತಿಕಾರಿಗಳು ಆಗ ಇಂತಹ ಅರ್ಜಿ ಸಲ್ಲಿಸಿದ್ದರು’ ಎಂದೂ ಹೇಳಿದ್ದಾರೆ.

‘ಕ್ಷಮಾದಾನ ಕೋರಿ ಅರ್ಜಿ ಸಲ್ಲಿಕೆಯು-ಬ್ರಿಟಿಷರ ಆಳ್ವಿಕೆಯ ವೇಳೆ ಮಾನ್ಯವಾಗಿದ್ದ ಕಾನೂನು ಪ್ರಕ್ರಿಯೆಯಾಗಿತ್ತು. ತಮಗೆ ವಿಧಿಸಿದ್ದ ಶಿಕ್ಷೆಯನ್ನು ಕಡಿಮೆ ಮಾಡಿಕೊಳ್ಳಲು ಇಲ್ಲವೇ ಅವಧಿಪೂರ್ವ ಬಿಡುಗಡೆ ಬಯಸಿ ಕೈದಿಗಳು ಕಾಯ್ದೆಯಲ್ಲಿ ಇಂತಹ ಅವಕಾಶ ಬಳಸಿಕೊಳ್ಳುತ್ತಿದ್ದರು’ ಎಂದೂ ಹೇಳಿದ್ದಾರೆ.

‘ಕ್ಷಮಾದಾನ ಕೋರಿ ಅರ್ಜಿ ಸಲ್ಲಿಸುವುದು ಅಪವಾದವಾಗಿರಲಿಲ್ಲ ಹಾಗೂ ಕಾನೂನುಬಾಹಿರವೂ ಆಗಿರಲಿಲ್ಲ’ ಎಂದು ನ್ಯಾಯಾಧೀಶರಿಗೆ ತಿಳಿಸಿದ ಅವರು,‘ಸಾವರ್ಕರ್ ಅವರು ತಮ್ಮ ಅರ್ಜಿಗಳಲ್ಲಿ ಬಳಸಿದ್ದ ಭಾಷೆಯು ಬ್ರಿಟಿಷ್ ಸರ್ಕಾರ ಕುರಿತು ಅವರಲ್ಲಿದ್ದ ವಿಧೇಯತೆಯನ್ನು ತೋರುತ್ತಿತ್ತು’ ಎಂಬುದನ್ನು ತಳ್ಳಿಹಾಕಿದರು.

ಪಶ್ಚಿಮಬಂಗಾಳ ವಿಪಕ್ಷ ನಾಯಕನ ಆಯ್ಕೆ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ

‘2 ಪ್ರಸ್ತಾವ ಇದ್ದಾಗ ಸ್ಪೀಕರ್ ಕರ್ತವ್ಯವೇನು?’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧಪಕ್ಷದ ನಾಯಕನ ಆಯ್ಕೆಗಾಗಿ ಒಂದೇ ಪಕ್ಷದಿಂದ ಎರಡು ಪ್ರಸ್ತಾವಗಳು ಸಲ್ಲಿಕೆಯಾಗಿದ್ದಾಗ ಸ್ಪೀಕರ್ ಕೈಗೊಳ್ಳಬೇಕಾಗಿದ್ದ ಕ್ರಮಗಳೇನು ಎಂದು ಕಲ್ಕತ್ತ ಹೈಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

ತನ್ನ ಹೆಸರನ್ನು ತಿರಸ್ಕರಿಸಿರುವುದನ್ನು ಮತ್ತು ಇನ್ನೊಂದು ಬಣದ ಶಾಸಕ ರುತಬ್ರತಾ ಬ್ಯಾನರ್ಜಿ ಅವರನ್ನು ವಿರೋಧಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿರುವುದನ್ನು ಪ್ರಶ್ನಿಸಿ ಟಿಎಂಸಿ ಶಾಸಕ ಶೋಭನ್‌ದೇಬ್ ಚಟ್ಟೋಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಯಿತು.

‘ಅತೀ ಹೆಚ್ಚು ಸದಸ್ಯರಿರುವ ವಿರೋಧ ಪಕ್ಷದ ನಿರ್ಣಯದ ಆಧಾರದಲ್ಲಿ ಸ್ಪೀಕರ್ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ ಇಂಥ ಪ್ರಸ್ತಾವಗಳಿಂದ ಉಂಟಾಗುವ ವಿವಾದ ಗಳನ್ನು ಕಾನೂನಿನ ಮೂಲಕ ಪರಿಹರಿಸಬೇಕಾಗುತ್ತದೆ’ ಎಂದು ನ್ಯಾಯಮೂರ್ತಿ ಕೃಷ್ಣ ರಾವ್ ಹೇಳಿದರು.

‘ಒಂದೇ ಪಕ್ಷದಿಂದ ಎರಡು ಪ್ರಸ್ತಾವಗಳು ಸಲ್ಲಿಕೆಯಾದಾಗ ಸ್ಪೀಕರ್ ಅವರ ಕರ್ತವ್ಯವೇನು? ಅವರು ಸ್ವಯಂ ಪ್ರೇರಿತವಾಗಿ ನಿರ್ಧಾರ ಕೈಗೊಳ್ಳಬಹುದೇ ಅಥವಾ ಎರಡು ಬಣಗಳು ವಾದ ಮಂಡಿಸಲು ಅವಕಾಶ ನೀಡಬೇಕೇ’ ಎಂದು ನ್ಯಾಯಾಲಯ ಪ್ರಶ್ನಿಸಿತು.

‘ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರುತಬ್ರತಾ ಬ್ಯಾನರ್ಜಿ ಹೆಸರನ್ನು ಯಾರು ಪ್ರಸ್ತಾಪಿಸಿದರು. ಪ್ರಸ್ತಾವ ಸಲ್ಲಿಸಲು ರಾಜಕೀಯ ಪಕ್ಷ ಬೇಕಲ್ಲವೇ?’ ಎಂದಿತು.

‘ಸದನದ ಮುಂದೆ ಪ್ರಸ್ತಾಪಿಸದೆ ಮತ್ತು ಬಹುಮತ ಸಾಬೀತಿಗೆ ಅವಕಾಶ ನೀಡದೆ ಸ್ಪೀಕರ್ ಹೇಗೆ ನಿರ್ಣಯ ಕೈಗೊಳ್ಳುತ್ತಾರೆ’ ಎಂದು ನ್ಯಾಯಪೀಠ ಪ್ರಶ್ನಿಸಿ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ಹೈಕೋರ್ಟ್ ಮೆಟ್ಟಿಲೇರಿದ ಮಮತಾ

ಕೋಲ್ಕತ್ತ (ಪಿಟಿಐ): ಭವಾನಿಪುರ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಅವರು ಕಲ್ಕತ್ತ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಸುವೇಂದು ಅಧಿಕಾರಿ ವಿರುದ್ಧ ಮಮತಾ ಅವರು 15,105 ಮತಗಳ ಅಂತರದಿಂದ ಸೋಲು ಅನುಭವಿಸಿದ್ದರು. ಮತ ಎಣಿಕೆ ಇದೇ ಮೇ 4ರಂದು ನಡೆದಿತ್ತು.

2021ರ ವಿಧಾನಸಭಾ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಸುವೇಂದು ವಿರುದ್ಧ ಸೋತಿದ್ದ ಮಮತಾ, ಆಗಲೂ ಫಲಿತಾಂಶವನ್ನು ಪ್ರಶ್ನಿಸಿ ಚುನಾವಣಾ ಅರ್ಜಿಯನ್ನು ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ಈಗಲೂ ಕಲ್ಕತ್ತ ಹೈಕೋರ್ಟ್‌ನಲ್ಲಿ ಬಾಕಿ ಉಳಿದಿದೆ.

‘ಬಣಗಳ ವಾದ ಆಲಿಸಲು ನಿರ್ಧಾರ’

ಓಂ ಬಿರ್ಲಾ

ಲೋಕಸಭೆಯಲ್ಲಿ ಟಿಎಂಸಿಯ ಬಂಡಾಯ ಬಣಕ್ಕೆ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸುವ ಕುರಿತು ಎರಡು ಬಣದ ವಾದಗಳನ್ನು ಆಲಿಸಿದ ಬಳಿಕವೇ ಸ್ಪೀಕರ್ ಓಂ ಬಿರ್ಲಾ ಅವರು ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತ ಮಾತುಕತೆಗೆ ಬರುವಂತೆ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸೋಮವಾರ ತುರ್ತಾಗಿ ಸೂಚಿಸಿದ್ದರು. ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ವಿಚಾರಣೆಗೆ ಹಾಜರಾಗಬೇಕಿದ್ದ ಕಾರಣ ಅಭಿಷೇಕ್ ಅವರು ಸ್ಪೀಕರ್ ಅವರನ್ನು ಭೇಟಿ ಮಾಡಿಲ್ಲ. ಪ್ರತ್ಯೇಕ ಗುಂಪಿನ ಮಾನ್ಯತೆ ನೀಡುವ ಕುರಿತು ಬಿರ್ಲಾ ಅವರು ಕಾನೂನು ಸಲಹೆ ಪಡೆದು, ಮುಂಗಾರು ಅಧಿವೇಶನದ ಮುನ್ನ ನಿರ್ಧರಿಸುವರು ಎಂದು ಮೂಲಗಳು ಈ ಹಿಂದೆ ತಿಳಿಸಿದ್ದವು.

‘ಎನ್‌ಸಿಪಿಐಗೆ ಹೊಸ ಅಧ್ಯಕ್ಷರ ಆಯ್ಕೆ’

ನ್ಯಾಷನಲ್ ಸಿಟಿಜನ್ ಪಾರ್ಟಿ ಆಫ್ ಇಂಡಿಯಾದ(ಎನ್‌ಸಿಪಿಐ) ಹೊಸ ಅಧ್ಯಕ್ಷರಾಗಿ ಜ್ಯೋತಿಪ್ರಕಾಶ್ ಚಟರ್ಜಿ ಅವರು ಆಯ್ಕೆಯಾಗಿದ್ದಾರೆ ಎಂದು ಟಿಎಂಸಿ ಬಂಡಾಯ ಬಣದ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಅವರು ಮಂಗಳವಾರ ತಿಳಿಸಿದ್ದಾರೆ.

ಆರೋಪ: ಮಮತಾ ಬ್ಯಾನರ್ಜಿ ಸರ್ಕಾರವು ಪಶ್ಚಿಮ ಬಂಗಾಳದಲ್ಲಿ ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳಸಾಗಾಣೆ ತಡೆಗೆ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಟಿಎಂಸಿಯ ಬಂಡಾಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಅವರು ಸಂಸದೀಯ ಸಮಿತಿಗೆ ತಿಳಿಸಿದ್ದಾರೆ.

ಗೃಹ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿಯ ಸಭೆಯಲ್ಲಿ ಈ ಬಗ್ಗೆ ಮಾತನಾಡಿರುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಹಿರಿಯ ನಾಯಕಿ ಸೌಗತ ರಾಯ್ ಅವರು, ‘ನಾಲ್ಕು ಬಾರಿ ಸಂಸದರಾಗಿದ್ದವರಿಗೆ ಸಂಸದೀಯ ಪ್ರಕ್ರಿಯೆ ಬಗ್ಗೆ ಅರಿವಿಲ್ಲದಿರುವುದು ಆಶ್ಚರ್ಯ ಉಂಟು ಮಾಡಿದೆ’ ಎಂದರು.

ಇರಾನ್-ನ್ಯೂಜಿಲೆಂಡ್ ಪಂದ್ಯ ಸಮಬಲ

'ದಾಖಲೆ'ಯ ಅವಳಿ ಗೋಲು ಬಾರಿಸಿದ ಎಲಿಜಾ ಜಸ್ಟ್

ಇಂಗಲ್‌ವುಡ್ (ಅಮೆರಿಕ), (ಎಪಿ): ಎಲಿಜಾ ಜಸ್ಟ್ ಅವರು ವಿಶ್ವಕಪ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡದ ಪರ ಎರಡು ಗೋಲು ಹೊಡೆದ ಮೊದಲ ಆಟಗಾರ ಎನಿಸಿದರು. ಆದರೆ ಇದರಿಂದ ನ್ಯೂಜಿಲೆಂಡ್‌ಗೆ ವಿಶ್ವಕಪ್‌ನಲ್ಲಿ ಮೊದಲ ಗೆಲುವು ದಾಖಲಿಸಲಾಗಲಿಲ್ಲ. ತಂಡವು ಇರಾನ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಸೋಮವಾರ ರಾತ್ರಿ ಲಾಸ್ ಏಂಜಲೀಸ್‌ನ ಸೋಫಿ ಕ್ರೀಡಾಂಗಣ ದಲ್ಲಿ ನಡೆದ ಜಿ ಗುಂಪಿನ ಪಂದ್ಯದಲ್ಲಿ 'ಆಲ್‌ವೈಟ್ಸ್' ತಂಡ 2–2 ಗೋಲುಗಳಿಂದ ಡ್ರಾ ಮಾಡಿಕೊಂಡಿತು. ಇದು ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ತಂಡಕ್ಕೆ ಸತತ ನಾಲ್ಕನೇ ಡ್ರಾ. 2010ರ ಆವೃತ್ತಿಯಲ್ಲಿ ಕೊನೆಯ ಬಾರಿ ಆಡಿದಾಗ ನ್ಯೂಜಿಲೆಂಡ್ ತನ್ನ ಗುಂಪಿನ ಮೂರೂ ಪಂದ್ಯಗಳನ್ನು ಡ್ರಾ ಮಾಡಿಕೊಂಡಿತ್ತು.

ಇರಾನ್	ನ್ಯೂಜಿಲೆಂಡ್
2	2

26 ವರ್ಷ ವಯಸ್ಸಿನ ಜಸ್ಟ್ ಅವರಿಂದಾಗಿ ಆಲ್‌ವೈಟ್ಸ್ ತಂಡ 1–0, ನಂತರ 2–1 ಮುನ್ನಡೆಯಲ್ಲಿತ್ತು. ಆದರೆ ರಮಿನ್ ರೆಝಾಯಿಯನ್ ಮತ್ತು ಮೊಹಮ್ಮದ್ ಮೊಹೆಬ್ಬಿ ಗಳಿಸಿದ ಗೋಲಿನಿಂದ ಇರಾನ್ ಆ ಹಿನ್ನಡೆ ಅಳಿಸಿ ಹಾಕುವಲ್ಲಿ ಯಶಸ್ವಿ ಆಯಿತು. ಇರಾನ್ ಈ ಪಂದ್ಯ ಗೆಲ್ಲುವ ನೆಚ್ಚಿನ ತಂಡವಾಗಿತ್ತು.

ಎರಡನೇ ಗೋಲಿನ ನಂತರ ಜಸ್ಟ್ ಅವರು ಪ್ರೇಕ್ಷಕರತ್ತ ಮುತ್ತುಗಳನ್ನು ತೇಲಿಬಿಟ್ಟರು. ನ್ಯೂಜಿಲೆಂಡ್‌ನ ಪ್ರಮುಖ ಆಟಗಾರ ಕ್ರಿಸ್ ವುಡ್ ಅವರು ತಂಡದ ಎರಡೂ ಗೋಲುಗಳಿಗೆ ಉತ್ತಮ ಪಾಸ್‌ಗಳಿಂದ ನೆರವಾಗಿದ್ದರು.

ಈ ವಿಶ್ವಕಪ್‌ಗೆ ಮೊದಲು ನ್ಯೂಜಿಲೆಂಡ್ ಕೇವಲ ಎರಡು ಬಾರಿ ವಿಶ್ವಕಪ್‌ನಲ್ಲಿ ಆಡಿತ್ತು. 1982 (ಸ್ಪೇನ್‌ನಲ್ಲಿ) ಮತ್ತು 2010ರ (ದಕ್ಷಿಣ ಆಫ್ರಿಕಾ) ವಿಶ್ವಕಪ್ ನಲ್ಲಿ ಆಡಿದ್ದರೂ, ಗುಂಪು ಹಂತ ದಾಟಿರಲಿಲ್ಲ. ರಗ್ಬಿಯಲ್ಲಿ 'ಪವರ್ ಹೌಸ್' ಎನಿಸಿರುವ ನ್ಯೂಜಿಲೆಂಡ್ ಈ ಟೂರ್ನಿಗೆ ಅತಿ ಕಡಿಮೆ ಅಂದರೆ 85ನೇ ರ್‍ಯಾಂಕ್‌ನ ಕ್ವಾಲಿಫಯರ್ ಆಗಿ ಪ್ರವೇಶ ಪಡೆದಿತ್ತು.

ಆಲ್‌ವೈಟ್ಸ್ ತಂಡ ತನ್ನ ಮುಂದಿನ ಪಂದ್ಯವನ್ನು ಈಜಿಪ್ಟ್ ವಿರುದ್ಧ ಭಾನುವಾರ ಬ್ರಿಟಿಷ್ ಕೊಲಂಬಿಯಾದ ವ್ಯಾಂಕೂವರ್‌ನಲ್ಲಿ (ಕೆನಡಾ) ಆಡಲಿದೆ.

ಅವಳಿ ಗೋಲು ಗಳಿಸಿದ ನ್ಯೂಜಿಲೆಂಡ್ ತಂಡದ ಎಲಿಜಾ ಜಸ್ಟ್ (ಎಡ) ಎಎಫ್‌ಪಿ ಚಿತ್ರ

ಪಂದ್ಯಗಳು

ಆಸ್ಟ್ರಿಯಾ	V/s	ಜೋರ್ಡನ್
ಬುಧವಾರ ಬೆಳಿಗ್ಗೆ 9.30		
ಪೋರ್ಚುಗಲ್	V/s	ಕಾಂಗೊ ರಿಪಬ್ಲಿಕ್
ಬುಧವಾರ ರಾತ್ರಿ 10.30		
ಇಂಗ್ಲೆಂಡ್	V/s	ಕ್ರೊಯೇಷಿಯಾ
ಬುಧವಾರ ರಾತ್ರಿ 1.30		
ಘಾನಾ	V/s	ಪನಾಮ
ಗುರುವಾರ ನಸುಕಿನ ಜಾವ 4.30		

ಲೈವ್: ಯುನೈಟ್ 8 ಸ್ಪೋರ್ಟ್ಸ್, ಜೀ5 ಆ್ಯಪ್

ಸರ್‌ಪ್ರೀತ್ ಸಿಂಗ್ ಪದಾರ್ಪಣೆ

ನವದೆಹಲಿ (ಪಿಟಿಐ): ನ್ಯೂಜಿಲೆಂಡ್‌ನ ಪ್ರಮುಖ ಮಿಡ್‌ಫೀಲ್ಡರ್, ಭಾರತ ಮೂಲದ ಸರ್‌ಪ್ರೀತ್ ಸಿಂಗ್ ಅವರು ಸೋಮವಾರ ಇರಾನ್ ವಿರುದ್ಧ ಪಂದ್ಯದಲ್ಲಿ ಪದಾರ್ಪಣೆ ಮಾಡಿದರು.

ಆಕ್ಲೆಂಡ್‌ನಲ್ಲಿ ಪಂಜಾಬಿ ಪೋಷಕರಿಗೆ ಜನಿಸಿದ ಸರ್‌ಪ್ರೀತ್, ಇರಾನ್ ಗೋಲಿನತ್ತ ಕೆಲವು ಗೋಲು ಯತ್ನಗಳನ್ನೂ ನಡೆಸಿದರು. ಕೋಚ್ ಡ್ಯಾರೆನ್ ಬೆಝೆಲಿ ಅವರು ಆಡುವ 11ರ ಬಳಗದಲ್ಲಿ ಸ್ಥಾನ ನೀಡಿದ್ದರು. 27 ವರ್ಷ ವಯಸ್ಸಿನ ಸರ್‌ಪ್ರೀತ್ 2018ರಲ್ಲಿ 23 ವರ್ಷದೊಳಗಿನವರ ತಂಡದ ಜೊತೆ ಭಾರತಕ್ಕೆ ಬಂದಿದ್ದರು. ಮುಂಬೈ ನಲ್ಲಿ ಇಂಟರ್ ಕಾಂಟಿನೆಂಟಲ್ ಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ತಂಡಕ್ಕೆ ಆಡಿದ್ದರು.

ಇರಾನ್: ನಸುಕಿನಲ್ಲೇ ಕುತೂಹಲ

ಟೆಹರಾನ್ (ಎಎಫ್‌ಪಿ): ಸೋಮವಾರ ಫಿಫಾ ವಿಶ್ವಕಪ್ ಪಂದ್ಯದಲ್ಲಿ ಇರಾನ್‌ನ ರಾಷ್ಟ್ರ ಗೀತೆ ಮೊಳಗುವಾಗ ಗಂಭೀರ ಮೌನ ಆವರಿಸಿತು. ಗೋಲುಗಳ ನಂತರ ಸಂಭ್ರಮದ ವಾತಾವರಣವೂ ನೆಲೆಸಿತು.

ಅಮೆರಿಕದ ನೆಲದಲ್ಲಿ ಇರಾನ್ ತಂಡ ಕಣಕ್ಕಿಳಿಯುವಾಗ ಇಲ್ಲಿ ಬೆಳಗಿನ ಜಾವ 4.30. ಬಹುತೇಕ ಇರಾನಿಯನ್ನರು ನಿದ್ದೆಯಲ್ಲಿದ್ದರು. ಆದರೆ ಪಂದ್ಯದ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದ್ದ ಕೆಫೆಗಳಲ್ಲಿ ಅಭಿಮಾನಿಗಳು ಕುತೂಹಲದಿಂದ ಪಂದ್ಯ ವೀಕ್ಷಿಸಿದರು.

'ಅತ್ಯಂತ ಶೋಷಿತ ತಂಡ'

ಲಾಸ್ ಏಂಜಲೀಸ್ (ಎಎಫ್‌ಪಿ): ಇಡೀ ವಿಶ್ವಕಪ್‌ನಲ್ಲಿ ಅತ್ಯಂತ ಶೋಷಿತ ತಂಡ ಎಂದರೆ ಇರಾನ್ ಎಂದು ತಂಡದ ಕೋಚ್ ಅಮೀರ್ ಘಲೆನೋಯಿ ಹೇಳಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಪಂದ್ಯ ಸೋಮವಾರ ರಾತ್ರಿ ಮುಗಿದ ತಕ್ಷಣ ಇರಾನ್ ತಂಡಕ್ಕೆ ಮೆಕ್ಸಿಕೊಕ್ಕೆ ಮರಳುವಂತೆ ಸೂಚಿಸಲಾಯಿತು. ಮೆಕ್ಸಿಕೊ ಗಡಿ ವ್ಯಾಪ್ತಿಯಲ್ಲಿರುವ ಟಿಯವಾನಾ ನಗರದಲ್ಲಿ ಇರಾನ್ ತಂಡದ ನೆಲೆಯಿದೆ.

'ನಮ್ಮ ಆಗಮನವನ್ನು ವಿಳಂಬಗೊಳಿಸಲಾಯಿತು. ಈಗ ಪಂದ್ಯ ಮುಗಿದ ತಕ್ಷಣ ಸ್ವಲ್ಪವೂ ಸುಧಾರಿಸಿಕೊಳ್ಳಲು ಅವಕಾಶ ನೀಡಿದೇ ವಾಪಸು ಹೋಗಲು ಸೂಚಿಸಲಾಗಿದೆ' ಎಂದರು.

ಕ್ರಿಸ್ಟಿಯಾನೊ ರೊನಾಲ್ಡೊ

ರೊನಾಲ್ಡೊ ಪಡೆಗೆ ಶುಭಾರಂಭದ ಛಲ

ಹೌಸ್ಟನ್: ಚೊಚ್ಚಲ ವಿಶ್ವಕಪ್ ಜಯಿಸುವ ಕನಸಿನಲ್ಲಿರುವ ಪೋರ್ಚುಗಲ್ ತಂಡವು ಬುಧವಾರ ಕಾಂಗೊ ರಿಪಬ್ಲಿಕ್ ವಿರುದ್ಧ ಅಭಿಯಾನ ಆರಂಭಿಸಲಿದೆ. ಕೆ ಗುಂಪಿನ ಈ ಪಂದ್ಯವನ್ನು ಗೆದ್ದು ಶುಭಾರಂಭ ಮಾಡುವ ವಿಶ್ವಾಸದಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ಪಡೆ ಇದೆ.

41 ವರ್ಷ ವಯಸ್ಸಿನ 'ಸೂಪರ್ ಸ್ಟಾರ್' ರೊನಾಲ್ಡೊ ಅವರಿಗೆ ಇದು ಆರನೇ ವಿಶ್ವಕಪ್ ಟೂರ್ನಿಯಾಗಿದೆ. ಬಹುತೇಕ ಕೊನೆಯ ಬಾರಿಗೆ ವಿಶ್ವಕಪ್ ನಲ್ಲಿ ಆಡುತ್ತಿರುವ ಅವರು ಈ ಸಲ ತಮ್ಮ ದೇಶಕ್ಕೆ ವಿಶ್ವ ಕಿರೀಟ ಗೆದ್ದು ಕೊಡುವ ಛಲದಲ್ಲಿದ್ದಾರೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 5ನೇ ಸ್ಥಾನದಲ್ಲಿರುವ ಪೋರ್ಚುಗಲ್ ತಂಡಕ್ಕೆ ಇದು 9ನೇ ವಿಶ್ವಕಪ್ ಟೂರ್ನಿಯಾಗಿದೆ. 1966ರಲ್ಲಿ ಮೂರನೇ ಮತ್ತು 2006ರಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. 2022ರಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ 0–1ರಿಂದ ಮೊರಾಕ್ಕೊ ವಿರುದ್ಧ ಸೋತಿತ್ತು.

ಕಾಂಗೊ ರಿಪಬ್ಲಿಕ್ ತಂಡವು 52 ವರ್ಷಗಳ ನಂತರ ವಿಶ್ವಕಪ್‌ನಲ್ಲಿ ಕಣಕ್ಕಿಳಿಯುತ್ತಿದೆ. ಆಫ್ರಿಕಾ ರಾಷ್ಟ್ರಗಳಲ್ಲಿ ಎಬೋಲಾ ಸಾಂಕ್ರಾಮಿಕ ಕಾಯಿಲೆ ಹಬ್ಬಿರುವ ಕಾರಣ, ಬೆಲ್ಜಿಯಂ ಮತ್ತು ಸ್ಪೇನ್‌ನಲ್ಲಿ 21 ದಿನಗಳ ಕಡ್ಡಾಯ ಶಿಬಿರ ಮುಗಿಸಿದ ನಂತರವಷ್ಟೇ ಕಾಂಗೊ ಆಟಗಾರರಿಗೆ ಅಮೆರಿಕಕ್ಕೆ ಪ್ರವೇಶ ನೀಡಲಾಗಿದೆ. ಇದು, ತಂಡದ ಅಭ್ಯಾಸದ ಮೇಲೆಯೂ ಪ್ರಭಾವ ಬೀರಿದೆ ಎನ್ನಲಾಗಿದೆ.

ಕಾಂಗೊ ತಂಡವು ಡೆನ್ಮಾರ್ಕ್ ಜೊತೆಗಿನ ಸ್ನೇಹಪರ ಪಂದ್ಯದಲ್ಲಿ ಗೋಲು ರಹಿತ ಡ್ರಾ ಸಾಧಿಸಿದ್ದರೆ, ಚಿಲಿ ಎದುರು 1–2ರಿಂದ ಪರಾಭವಗೊಂಡಿದೆ. ಆದರೂ, ಪ್ರಬಲ ಪೋರ್ಚುಗಲ್‌ಗೆ ದಿಟ್ಟ ಸವಾಲು ನೀಡುವ ವಿಶ್ವಾಸದಲ್ಲಿದೆ.

ಕಾಂಗೊ ತಂಡವು ಇಂಟರ್‌ಕಾಂಟಿನೆಂಟಲ್ ಪ್ಲೇಆಫ್ ಟೂರ್ನಿಯಲ್ಲಿ 1–0ಯಿಂದ ಜಮೈಕಾ ತಂಡವನ್ನು ಸೋಲಿಸಿ, ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದೆ.

ಸೌದಿ ಅರೇಬಿಯಾ ತಂಡದ ಜೊತೆಗೆ 'ಡ್ರಾ'

ಉರುಗ್ವೆ ಸೋಲು ತಪ್ಪಿಸಿದ ಮ್ಯಾಕ್ಸಿ

ಉರುಗ್ವೆ	ಸೌದಿ ಅರೇಬಿಯಾ
2	2

ಮಿಯಾಮಿ ಗಾರ್ಡನ್ಸ್, ಅಮೆರಿಕ (ಎಪಿ): ಮ್ಯಾಕ್ಸಿ ಅರೌಜೊ ಗಳಿಸಿದ ಗೋಲು ಉರುಗ್ವೆ ತಂಡವನ್ನು ಸೌದಿ ಅರೇಬಿಯಾ ಎದುರು ಸೋಲುವುದರಿಂದ ತಪ್ಪಿಸಿತು. ಸೋಮವಾರ ಉಭಯ ತಂಡಗಳ ಪಂದ್ಯವು ಡ್ರಾದಲ್ಲಿ ಮುಕ್ತಾಯಗೊಂಡಿತು. ಉರುಗ್ವೆಯ ಅಭಿಮಾನಿಗಳು ಸಮಾಧಾನದ ನಿಟ್ಟುಸಿರುಬಿಟ್ಟರು.

ಫಿಫಾ ವಿಶ್ವಕಪ್ ಟೂರ್ನಿಯ ಪಂದ್ಯವು 1–1ರಿಂದ ಡ್ರಾ ಆಯಿತು.

'ಪ್ರಾಮಾಣಿಕವಾಗಿ ಹೇಳುತ್ತೇನೆ. ಪಂದ್ಯವನ್ನು ಕೈಚೆಲ್ಲಿದ್ದೆವು. ಮೊದಲಾರ್ಧ ದಲ್ಲಿಯಂತೂ ನಮ್ಮ ಕೈಬಿಟ್ಟಿತ್ತು. ಆದರೆ ನಾವು ತರಬೇತಿ ಪಡೆದ ರೀತಿಯಲ್ಲಿ ಕೊನೆಯವರೆಗೂ ಹೋರಾಟ ಮಾಡುವುದನ್ನು ಅರಿತಿದ್ದೆವೆ' ಎಂದು ಉರುಗ್ವೆಯ ಮಿಡ್‌ಫೀಲ್ಡರ್ ಫೆಡೆರಿಕೊ ವಾಲ್ವರ್ಡ್ ಹೇಳಿದರು.

ಪಂದ್ಯದ ಮೊದಲ 40 ನಿಮಿಷಗಳಲ್ಲಿ ಉಭಯ ತಂಡಗಳ ಹಣಾಹಣಿ ತುರುಸಿನಿಂದ ಕೂಡಿತ್ತು. ಯಾರಿಗೂ ಗೋಲು ಹೊಡೆಯುವ ಅವಕಾಶವಾಗಲಿಲ್ಲ. ಉರುಗ್ವೆಯ ಆಟಗಾರರು ಹೆಚ್ಚು ಹೊತ್ತು ಚೆಂಡಿನ ಮೇಲೆ ನಿಯಂತ್ರಣ ಹೊಂದಿದ್ದರು. ನಿಖರ ಪಾಸ್‌ಗಳಲ್ಲಿಯೂ ಅವರದ್ದೇ ಪಾರಮ್ಯವಿತ್ತು.

ಆದರೆ 41ನೇ ನಿಮಿಷದಲ್ಲಿ ಸೌದಿಯ ಅಬ್ದುಲೆಹ್ ಅಲ್ ಅಮಿರಿ ರಿಬೌಂಡ್ ಮೂಲಕ ಗಳಿಸಿದ ಗೋಲು ಉರುಗ್ವೆ ಅಭಿಮಾನಿಗಳನ್ನು ಮಂಕಾಗಿಸಿತು. ನಂತರದ 39 ನಿಮಿಷಗಳಲ್ಲಿ ಸೌದಿಯ ಗೋಲ್‌ಕೀಪರ್ ಮೊಹಮ್ಮದ್ ಅಲ್ ಒವೈಸಿ ಅವರು ಬಂಡೆಗಲ್ಲಿನಂತೆ ನಿಂತಿದ್ದರು. ಉರುಗ್ವೆಯ ಎಲ್ಲ ದಾಳಿಗಳಿಗೂ ಎದೆಗೊಟ್ಟಿದ್ದರು. ಆದರೆ 80ನೇ ನಿಮಿಷದಲ್ಲಿ ಮ್ಯಾಕ್ಸಿ ಮ್ಯಾಜಿಕ್ ಮಾಡಿದರು. ಒವೈಸಿಯನ್ನು ತಪ್ಪಿಸಿ ಚೆಂಡನ್ನು ಗೋಲುಬಲೆಯೊಳಗೆ ಸೇರಿಸಿದರು.

ಡ್ರಾ ಪಂದ್ಯದಲ್ಲಿ ಬೆಲ್ಜಿಯಂ, ಈಜಿಪ್ಟ್

ಬೆಲ್ಜಿಯಂ	ಈಜಿಪ್ಟ್
1	1

ಸಿಯಾಟಲ್, ಅಮೆರಿಕ (ಎಪಿ): ಅನುಭವಿ ಆಟಗಾರರು ಇರುವ ಬೆಲ್ಜಿಯಂ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಸಪ್ಪೆಯ ಆರಂಭ ಮಾಡಿತು. ಸೋಮವಾರ ಮುಂಜಾನೆ ನಡೆದ ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಈಜಿಪ್ಟ್ ತಂಡಗಳು 1–1ರ ಡ್ರಾ ಮಾಡಿಕೊಂಡವು.

ಜಿ ಗುಂಪಿನ ಪಂದ್ಯದ 66ನೇ ನಿಮಿಷದಲ್ಲಿ ಮೈದಾನ ಪ್ರವೇಶಿಸಿದ ರೊಮೆಲು ಲೂಕಾಕು ಅವರು ಈಜಿಪ್ಟ್ ವಿರುದ್ಧ ಗೋಲು ಗಳಿಸುವ ಅವಕಾಶವೊಂದನ್ನು ಸೃಷ್ಟಿಸಿದರು. ಆದರೆ ಇದನ್ನು ತಪ್ಪಿಸಲು ಯತ್ನಿಸಿದ ಈಜಿಪ್ಟ್ ತಂಡದ ಮೊಹಮ್ಮದ್ ಹ್ಯಾನಿ 'ಉಡುಗೊರೆ' ಗೋಲು ನೀಡಿದರು. ಇದರಿಂದಾಗಿ ಬೆಲ್ಜಿಯಂಗೆ ಅನುಕೂಲವಾಯಿತು.

ಪಂದ್ಯದ 20ನೇ ನಿಮಿಷದಲ್ಲಿ ಇಮಾಮ್ ಅಶೋರ್ ಗಳಿಸಿದ್ದ ಗೋಲಿನಿಂದಾಗಿ ಈಜಿಪ್ಟ್ ತಂಡವು ಮುನ್ನಡೆ ಸಾಧಿಸಿತ್ತು. ಆದರೆ ಅದೇ ತಂಡದ ಮೊಹಮ್ಮದ್ ಅವರಿಂದಾಗಿ ತಂಡದ ಜಯ ಕೈತಪ್ಪಿತು. ಆದರೆ ಬಲಿಷ್ಠ ಬೆಲ್ಜಿಯಂ ತಂಡವು ಇಲ್ಲಿ ಒಂದೂ ಗೋಲು ಗಳಿಸಲಿಲ್ಲ. ಫಿಫಾ ರ್‍ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಬೆಲ್ಜಿಯಂಗೆ ಇದು ಶುಭಾರಂಭವಂತೂ ಅಲ್ಲ.

ಕಿರಿಯರ ಚೆಸ್: ಶ್ರೇಯಸ್, ದ್ವಿಜಾಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶ್ರೇಯಸ್ ದಾಸ್ ಮತ್ತು ಬೆಂಗಳೂರು ನಗರ ಜಿಲ್ಲೆಯ ದ್ವಿಜಾ ಆನಂದ್ ಅವರು ನಗರದಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ 9 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಓಪನ್ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಸೌಂದರ್ಯ ಸೆಂಟ್ರಲ್ ಸ್ಕೂಲ್‌ನಲ್ಲಿ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ಶ್ರೇಯಸ್ ಅಜೇಯನಾಗಿ 9 ಸುತ್ತುಗಳಿಂದ 8.5 ಅಂಕಗಳನ್ನು ಕಲೆಹಾಕಿದ. ಮೈಸೂರಿನ ಕೌಸ್ತುಭ್ ತೇಜಕುಮಾರ್ ಎಂಟು ಅಂಕ ಗಳಿಸಿ ರನ್ನರ್ ಅಪ್ ಎನಿಸಿದರೆ, ಉದಯ್ ಮಹೇಶ್ವರಿ ಮತ್ತು ನಿಮಲನ್ ಧರಣಿಪತಿ ಕ್ರಮವಾಗಿ 3 ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ದ್ವಿಜಾ ಆನಂದ್ 9 ಸುತ್ತುಗಳಿಂದ 7.5 ಅಂಕ ಗಳಿಸಿ ಅಗ್ರಸ್ಥಾನ ಪಡೆದಳು. ದಿಶಾನಿ ಎಸ್, ಹೇಮಶ್ರೀ ಚಲ್ಲಗುಲ್ಲ, ದಿಯಾ ಕುನಾಲ್ ಪರೇಖ್, ಅಮಿರಾ ಅರೋರಾ ಅವರು ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು. ಮೊದಲ ಎರಡು ಸ್ಥಾನ ಪಡೆದವರು ರಾಂಚಿಯಲ್ಲಿ ನಡೆಯಲಿರುವ ರಾಷ್ಟ್ರೀಯ 9 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ಬ್ಯಾಟಿಂಗ್ ಸುಧಾರಣೆಯತ್ತ ಗಮನ

ಟಿ20 ಕ್ರಿಕೆಟ್ ವಿಶ್ವಕಪ್: ದೀಪ್ತಿ, ಸ್ಮೃತಿ ಮೇಲೆ ಕಣ್ಣು; ನೆದರ್ಲೆಂಡ್ಸ್ ಸವಾಲು ಇಂದು

ಲೀಡ್ಸ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಬುಧವಾರ ನೆದರ್ಲೆಂಡ್ಸ್ ಬಳಗವನ್ನು ಎದುರಿಸಲಿದೆ. ತನ್ನ ಬ್ಯಾಟಿಂಗ್ ವಿಭಾಗದಲ್ಲಿ ಸುಧಾರಣೆ ಮಾಡಿಕೊಳ್ಳುವತ್ತ ಹರ್ಮನ್‌ಪ್ರೀತ್ ಕೌರ್ ಬಳಗವು ಚಿತ್ತ ನೆಟ್ಟಿದೆ.

ಅಗ್ರಕ್ರಮಾಂಕದಲ್ಲಿ ಸ್ಮೃತಿ ಮಂದಾನ ಮತ್ತು ಮಧ್ಯಮ ಕ್ರಮಾಂಕದಲ್ಲಿ ರಿಚಾ ಘೋಷ್ ಅವರು ಉತ್ತಮ ಲಯದಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಎದುರು ತಂಡವು ಹೋರಾಟದ ಮೊತ್ತ ಗಳಿಸಲು ಇವರಿಬ್ಬರ ಬ್ಯಾಟಿಂಗ್ ಕಾರಣವಾಗಿತ್ತು.

ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್, ಭಾರತಿ ಫೂಲ್ಮಾಲಿ ಮತ್ತು ಜೆಮಿಮಾ ರಾಡ್ರಿಗಸ್ ಅವರು ತಮ್ಮ ಅನುಭವಕ್ಕೆ ತಕ್ಕ ಆಟ ಆಡುವ ಅವಶ್ಯಕತೆ ಇದೆ.

ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ದೀಪ್ತಿ ಶರ್ಮಾ ಅವರು 5 ವಿಕೆಟ್ ಗೊಂಚಲು ಗಳಿಸುವ ಮೂಲಕ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿದ್ದಾರೆ. ಶ್ರೀಚರಣಿ ತಮ್ಮ ಸ್ಪಿನ್ ಕೈಚಳಕವನ್ನು ಮುಂದುವರಿಸುವ ಹುಮ್ಮಸ್ಸಿನಲ್ಲಿದ್ದಾರೆ. ಕನ್ನಡತಿ ಶ್ರೇಯಾಂಕಾ ಪಾಟೀಲ ಅವರು ತಮ್ಮ ದಾಳಿಯನ್ನು ಮತ್ತಷ್ಟು ಚುರುಕುಗೊಳಿಸುವ ವಿಶ್ವಾಸ ದಲ್ಲಿದ್ದಾರೆ. ಮಧ್ಯಮವೇಗದ ಜೋಡಿ ಅರುಂಧತಿ ರೆಡ್ಡಿ ಮತ್ತು ಕ್ರಾಂತಿ ಗೌಡ್ ಅವರು ತಮ್ಮ ಛಾಪು ಮೂಡಿಸಬೇಕಿದೆ.

ಬೆಬೆಟ್ ಡಿ ಲೀಡ್ ಅವರ ನಾಯಕತ್ವದ ನೆದರ್ಲೆಂಡ್ಸ್ ತಂಡವು ಭಾರತಕ್ಕೆ ಕಠಿಣ ಸವಾಲೊಡ್ಡುವ ಸಾಧ್ಯತೆ ಕಡಿಮೆ. ಆದ್ದರಿಂದ ಹರ್ಮನ್ ಬಳಗಕ್ಕೆ ಸುಲಭದ ಜಯ ಒಲಿಯುವ ಸಾಧ್ಯತೆಗಳೂ ಇವೆ.

ಭಾರತ ತಂಡದ ದೀಪ್ತಿ ಶರ್ಮಾ ಮತ್ತು ಸ್ಮೃತಿ ಮಂದಾನ ಪಿಟಿಐ ಚಿತ್ರ

ಹರ್ಮನ್‌ಪ್ರೀತ್

ಇಂದಿನ ಪಂದ್ಯ

ಆಸ್ಟ್ರೇಲಿಯಾ	V/s	ಬಾಂಗ್ಲಾದೇಶ
ತಾಣ: ಹೆಡಿಂಗ್ಲೆ, ಆರಂಭ: ಮಧ್ಯಾಹ್ನ 3		
ಭಾರತ	V/s	ನೆದರ್ಲೆಂಡ್ಸ್
ತಾಣ: ಹೆಡಿಂಗ್ಲೆ, ಆರಂಭ: ಸಂಜೆ 7		
ದಕ್ಷಿಣ ಆಫ್ರಿಕಾ	V/s	ಪಾಕಿಸ್ತಾನ
ತಾಣ: ಎಜ್‌ಬಾಸ್ಟನ್, ಆರಂಭ: ರಾತ್ರಿ 11		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

'ಟೈಮ್ಸ್' ಪ್ರಭಾವಿಗಳ ಪಟ್ಟಿಯಲ್ಲಿ ಸ್ಮೃತಿ

ನ್ಯೂಯಾರ್ಕ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಸ್ಮೃತಿ ಮಂದಾನ ಅವರು 'ಟೈಮ್' ನಿಯತಕಾಲಿಕೆಯು ಪ್ರಕಟಿಸಿರುವ ಈ ವರ್ಷದಲ್ಲಿ ವಿಶ್ವದ 100 ಅತಿ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಈ ಪಟ್ಟಿಯಲ್ಲಿರುವ ಏಕೈಕ ಭಾರತೀಯ ವ್ಯಕ್ತಿ ಕೂಡ ಅವರಾಗಿದ್ದಾರೆ.

2026ರಲ್ಲಿ ಕ್ರೀಡಾ ವಿಭಾಗದಲ್ಲಿ ಅಥ್ಲೀಟ್‌ಗಳು, ತರಬೇತುದಾರರು, ವಕೀಲರು ಮತ್ತು ಹೂಡಿಕೆದಾರರನ್ನು ಗುರುತಿಸಿದೆ. ಫುಟ್‌ಬಾಲ್ ದಿಗ್ಗಜರಾದ ಲಯೊನೆಲ್ ಮೆಸ್ಸಿ, ಕ್ರಿಸ್ಟಿಯಾನೊ ರೊನಾಲ್ಡೊ, ಅಮೆರಿಕದ ಬ್ಯಾಸ್ಕೆಟ್‌ಬಾಲ್ ಆಟಗಾರ ಲಿಬ್ರಾನ್ ಜೇಮ್ಸ್, ಚೀನಾ–ಅಮೆರಿಕನ್ ಸ್ಕೀಯರ್ ಇಲೀನ್ ಗು, ಟೆನಿಸ್ ತಾರೆ ಕಾರ್ಲೋಸ್ ಅಲ್ಕರಾಜ್, ಬ್ಯಾಸ್ಕೆಟ್‌ಬಾಲ್ ತಾರೆ ವಿಕ್ಟರ್ ವೆಂಬಾನ್ಯಾಮಾ, ಗಾಲ್ಫ್ ದಿಗ್ಗಜ ರೋರಿ ಮೆಕ್ಲೋರಿ, ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ನಾಯಕ ತೆಂಬಾ ಬವುಮಾ, ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಅವರು ಈ ಪಟ್ಟಿಯಲ್ಲಿರುವ ಪ್ರಮುಖರು.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಕ್ರಿಕೆಟ್: ನೀಲಾಕ್ಷಿಕಾ ಆಟಕ್ಕೆ ಒಲಿದ ಜಯ

ಸೌತಾಂಪ್ಟನ್ (ಪಿಟಿಐ): ನೀಲಾಕ್ಷಿಕಾ ಸಿಲ್ವಾ ಅವರ ಅಜೇಯ ಅರ್ಧಶತಕದ ಬಲದಿಂದ ಶ್ರೀಲಂಕಾ ತಂಡವು ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಎದುರು ಗೆದ್ದಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಅಮೆಲಿಯಾ (45; 36ಎ, 4X5) ಮತ್ತು ಜಾರ್ಜಿಯಾ ಪ್ಲಿಮ್ಮರ್ (18 ರನ್) ಅವರೊಂದಿಗೆ 49 ರನ್ ಸೇರಿಸಿದರು. ಜಾರ್ಜಿಯಾ ಅವರು ಔಟಾದ ನಂತರ ಅಮೆಲಿಯಾ ಮತ್ತು ಸೋಫಿ (45; 30ಎ, 4X4, 6X1) ಜೊತೆಯಾಟದಲ್ಲಿ 43 ರನ್ ಸೇರಿಸಿದರು. ಇದರಿಂದಾಗಿ ಕಿವೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 150 ರನ್ ಗಳಿಸಿತು.

ಅದಕ್ಕುತ್ತರವಾಗಿ ಶ್ರೀಲಂಕಾ ತಂಡವು 19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 153 ರನ್ ಗಳಿಸಿ ಜಯಿಸಿತು. ಇದಕ್ಕೆ ಆರನೇ ಕ್ರಮಾಂಕದ ನೀಲಾಕ್ಷಿಕಾ (ಔಟಾಗದೇ 54; 37ಎ, 4X5, 6X1) ಮತ್ತು ಕೌಶಾನಿ ನುತ್ಯಾಂಗನಾ (24; 14ಎ, 4X3) ಅವರು ಕಾರಣರಾದರು. ಲಂಕಾ ತಂಡವು 105 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ನೀಲಾಕ್ಷಿಕಾ ಮತ್ತು ಕೌಶಾನಿ ಅಮೋಘ ಆಟವಾಡಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 6ಕ್ಕೆ150 (ಜಾರ್ಜಿಯಾ ಪ್ಲಿಮ್ಮರ್ 18, ಅಮೆರಲಿಯಾ ಕೆರ್ 45, ಸೋಫಿ ಡಿವೈನ್ 45, ಮ್ಯಾಡಿ ಗ್ರೀನ್ ಔಟಾಗದೇ 18, ಕವೀಶಾ ದಿಲ್ಹರಿ 35ಕ್ಕೆ2) ಶ್ರೀಲಂಕಾ: 19.4 ಓವರ್‌ಗಳಲ್ಲಿ 5ಕ್ಕೆ153 (ಚಮರಿ ಅಟಪಟ್ಟು 27, ವಿಶ್ಮಿ ಗುಣರತ್ನೆ 17, ನೀಲಾಕ್ಷಿಕಾ ಸಿಲ್ವಾ ಔಟಾಗದೇ 54, ಕೌಶಾನಿ ನುತ್ಯಾಂಗನಾ ಔಟಾಗದೇ24, ನೆನ್ಸಿ ಪಟೇಲ್ 23ಕ್ಕೆ2): ಫಲಿತಾಂಶ:ಶ್ರೀಲಂಕಾ ತಂಡಕ್ಕೆ 5 ವಿಕೆಟ್ ಜಯ.

ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್

ರಾಜ್ಯ ಮಹಿಳಾ ರಿಲೇ ತಂಡ ದಾಖಲೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಕರ್ನಾಟಕದ ಮಹಿಳೆಯರ 4x100 ಮೀ. ಫ್ರೀಸ್ಟೈಲ್ ರಿಲೇ ತಂಡ, ಮಂಗಳವಾರ ಇಲ್ಲಿ ಆರಂಭವಾದ 79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ನಲ್ಲಿ ನೂತನ ಕೂಟ ದಾಖಲೆ ಸ್ಥಾಪಿಸಿತು. ಕರ್ನಾಟಕದ ಆಕಾಶ್ ಮಣಿ ಮತ್ತು ಲಿನೇಶಾ ಎ.ಕೆ. ಅವರೂ ಚಿನ್ನದ ಪದಕ ಗೆದ್ದು ಗಮನ ಸೆಳೆದರು.

ವೀರ್ ಸಾವರಕರ್ ಕ್ರೀಡಾ ಸಂಕೀರ್ಣದ ಈಜುಕೊಳದಲ್ಲಿ ನಡೆಯುತ್ತಿರುವ ಆರು ದಿನಗಳ ಕೂಟದಲ್ಲಿ ಕರ್ನಾಟಕ ಮೂರು ಚಿನ್ನಗಳ ಜೊತೆ ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡು ಶುಭಾರಂಭ ಮಾಡಿತು. ಒಟ್ಟು ನಾಲ್ಕು ಕೂಟ ದಾಖಲೆಗಳೂ ಮೂಡಿಬಂದವು.

ನೀನಾ ವೆಂಕಟೇಶ್, ತನಿಶಿ ಗುಪ್ತಾ, ರುಜುಲಾ ಎಸ್. ಮತ್ತು ದಿನಿಧಿ ದೇಸಿಂಗು ಅವರನ್ನು ಒಳಗೊಂಡ 4x100 ಮೀ. ರಿಲೇ ತಂಡವು 3 ನಿ.53.45 ಸೆ.ಗಳಲ್ಲಿ ನಿಗದಿ ದೂರವನ್ನು ಕ್ರಮಿಸಿ ರೈಲ್ವೆ ಕ್ರೀಡಾ ಮಂಡಳಿ ಮಂಗಳೂರಿನಲ್ಲಿ ಸ್ಥಾಪಿಸಿದ್ದ ದಾಖಲೆ (2024ರಲ್ಲಿ 4:01.83) ಮುಳುಗಿಸಿತು. ಬಂಗಾಳ (4:01.99) ಮತ್ತು ರೈಲ್ವೆ ತಂಡ (4:02.58) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದವು.

ಮೊದಲ ದಿನದ ಆಕರ್ಷಣೆಯಾಗಿದ್ದ ಪುರುಷರ 100 ಮೀ. ಫ್ರೀಸ್ಟೈಲ್ ರಿಲೇಯಲ್ಲಿ ಆಕಾಶ್ ಮಣಿ 50.40 ಸೆ.ಗಳಲ್ಲಿ ಮೊದಲಿಗರಾಗಿ ಗುರಿಮುಟ್ಟಿದರು. ಅವರಿಗೆ ತಮಿಳುನಾಡಿನ ಬೆನೆಡಿಕ್ಷನ್ ರೋಹಿತ್ (50.79) ಮತ್ತು ಮಹಾರಾಷ್ಟ್ರದ ಹೀರ್ ಗೀತೇಶ್ ಶಾ (51.06) ಅವರಿಂದ ಹೆಚ್ಚಿನ ಪೈಪೋಟಿ ಎದುರಾಗಲಿಲ್ಲ.

ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಲಿನೇಶಾ ಎ.ಕೆ. (33.51 ಸೆ.) ಅಗ್ರಸ್ಥಾನ ಪಡೆದರು. ಅವರಿಗೆ ತೀವ್ರ ಸ್ಪರ್ಧೆ ನೀಡಿದ ತೆಲಂಗಾಣದ ಮಿತ್ತಪಲ್ಲಿ ಋತ್ವಿಕಾ (33.63) ಮತ್ತು ಕರ್ನಾಟಕದ ಲಕ್ಷ್ಯಾ (33.84) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಪುರುಷರ 200 ಮೀ. ಮೆಡ್ಲೆ ಸ್ಪರ್ಧೆಯನ್ನು ಸರ್ವಿಸಸ್‌ನ ವಿನಾಯಕ ವಿಜಯ್ 2ನಿ.04.13 ಸೆ.ಗಳಲ್ಲಿ ಕ್ರಮಿಸಿ, ಕರ್ನಾಟಕದ ಶಾನ್ ಗಂಗೂಲಿ ಹೆಸರಿನಲ್ಲಿದ್ದ ದಾಖಲೆ (2025ರಲ್ಲಿ 2:04.34) ಮುರಿದರು. ಶಾನ್ ಇಲ್ಲಿ ಎರಡನೇ ಸ್ಥಾನಕ್ಕೆ (2:05.32) ಸರಿದರು.

1,500 ಮೀ. ಫ್ರೀಸ್ಟೈಲ್ ರಿಲೇಯಲ್ಲಿ ಶ್ರೀಚರಣಿ ತುಮು (17:49.09) ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಈ ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಅದಿತಿ ಸತೀಶ್ ಹೆಗ್ಡೆ 17ನಿ.20.82 ಸೆ.ಗಳೊಡನೆ ನೂತನ ದಾಖಲೆ ಸ್ಥಾಪಿಸಿದರು. ಹಳೆಯ ದಾಖಲೆ (17:35.07 ಸೆ.) ಭವ್ಯಾ ಸಚದೇವ ಹೆಸರಿನಲ್ಲಿತ್ತು. ತೆಲಂಗಾಣದ ವೃತ್ತಿ ಅಗರವಾಲ್ (17:22.17) ಎರಡನೇ ಸ್ಥಾನ ಗಳಿಸಿದರು.

ಮಹಿಳೆಯರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ರೈಲ್ವೇಸ್‌ನ ಅಸ್ತಾ ಚೌಧರಿ 2ನಿ.18.37 ಸೆ.ಗಳೊಡನೆ 17 ವರ್ಷ ಹಳೆಯ ದಾಖಲೆ ಮುರಿದರು. ಕರ್ನಾಟಕದ ಅರ್ಹತಾ ಮಾಘವಿ ತಿರುವನಂತಪುರದಲ್ಲಿ 2009ರಲ್ಲಿ 2:19.59 ಅವಧಿಯಲ್ಲಿ ಈ ಹಿಂದಿನ ದಾಖಲೆ ಸ್ಥಾಪಿಸಿದ್ದರು.

4x100 ಮೀ. ಫ್ರೀಸ್ಟೈಲ್ ರಿಲೇಯಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡ: (ಎಡದಿಂದ) ದಿನಿಧಿ ದೇಸಿಂಗು, ರುಜುಲಾ ಎಸ್, ತನಿಷಿ ಗುಪ್ತಾ ಮತ್ತು ನೀನಾ ವೆಂಕಟೇಶ್

ಲಿನೇಶಾ ಎ.ಕೆ.

ಸರಣಿ ಕೈವಶದತ್ತ ಭಾರತ ತಂಡದ ಚಿತ್ತ

ಎರಡನೇ ಏಕದಿನ ಕ್ರಿಕೆಟ್ ಪಂದ್ಯ: ಗುರ್ಬಾಜ್ ಮೇಲೆ ಅಫ್ಗನ್ ತಂಡಕ್ಕೆ ವಿಶ್ವಾಸ

ಲಖನೌ (ಪಿಟಿಐ): ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಬುಧವಾರ ನಡೆಯಲಿರುವ ಅಫ್ಗಾನಿಸ್ತಾನ ಎದುರಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು ಕಣಕ್ಕಿಳಿಸುವ ಸಾಧ್ಯತೆ ಇದೆ.

ಮೂರು ಪಂದ್ಯಗಳ ಈ ಸರಣಿಯಲ್ಲಿ ಭಾರತ ತಂಡವು 1–0ಯಿಂದ ಮುಂದಿದೆ. ಎರಡನೇ ಪಂದ್ಯದಲ್ಲಿ ಗೆದ್ದರೆ ಸರಣಿ ಕೈವಶವಾಗುತ್ತದೆ. ಅಫ್ಗನ್ ತಂಡದ ಎದುರು ಎಲ್ಲ ರೀತಿಯಿಂದಲೂ ಬಲಿಷ್ಠವಾಗಿರುವ ಆತಿಥೇಯರು ತಂಡ ಸಂಯೋಜನೆಯಲ್ಲಿ ಕೆಲವು ಪ್ರಯೋಗಗಳನ್ನು ಮಾಡುವತ್ತ ಚಿತ್ತ ನೆಟ್ಟಿದ್ದಾರೆ. ಮುಂದಿನ ವರ್ಷ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೂ ಮುನ್ನ ಸುಮಾರು ಒಂದು ಡಜನ್ ಪಂದ್ಯಗಳಲ್ಲಿ ಆಡುವ ಅವಕಾಶ ಇದೆ. ಅದರಲ್ಲಿ ಅಫ್ಗನ್ ವಿರುದ್ಧದ ಪಂದ್ಯಗಳೂ ಸೇರಿವೆ.

ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ 'ಸ್ಥಳೀಯ ಹೀರೊ' ಕುಲದೀಪ್ ಅವರು ಕಣಕ್ಕಿಳಿಯುವ ನಿರೀಕ್ಷೆ ಇದೆ. ಪಂದ್ಯದ ಮಧ್ಯಮ ಹಂತದ ಓವರ್‌ಗಳಲ್ಲಿ ವಿಕೆಟ್ ಗಳಿಸುವ ಸಮರ್ಥ ಬೌಲರ್ ಆಗಿದ್ದಾರೆ. ಅವರ ಆಟದಿಂದ ತಂಡಕ್ಕೆ ಹೆಚ್ಚು ಅನುಕೂಲವಾಗುತ್ತದೆ.

'ವಿಶ್ವಕಪ್ ಟೂರ್ನಿಗಿಂತ ಮುನ್ನ ಪೂರ್ವಾಭ್ಯಾಸಕ್ಕಾಗಿ ಹೆಚ್ಚು ಪಂದ್ಯಗಳು ಸಿಗುತ್ತಿಲ್ಲ. ಆದ್ದರಿಂದ ಸಿಗುವ ಅವಕಾಶಗಳಲ್ಲಿಯೇ ಸಂಯೋಜನೆಯ ಪ್ರಯೋಗ ಮಾಡಬೇಕಿದೆ' ಎಂದು ಭಾರತ ತಂಡದ ನಾಯಕ ಶುಭಮನ್ ಗಿಲ್ ಹೇಳಿದ್ದಾರೆ.

ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ ಆಲ್‌ರೌಂಡರ್‌ಗಳನ್ನು ಕಣಕ್ಕಿಳಿಯುವ ಆಸಕ್ತಿ ಹೆಚ್ಚು. ಆದ್ದರಿಂದ ಸ್ಪಿನ್ –ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಹೆಚ್ಚು ಅವಕಾಶಗಳು ಸಿಗಬಹುದು. ಮೊದಲ ಪಂದ್ಯದಲ್ಲಿ 3 ವಿಕೆಟ್ ಗಳಿಸಿದ ಹರ್ಷ ದುಬೆ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು.

ಪ್ರಥಮ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಗುರ್ನೂರ್ ಬ್ರಾರ್ ಮಿಂಚಿದ್ದರು. ಆದರೆ ಅರ್ಷದೀಪ್ ಸಿಂಗ್ ಅವರು ತಮ್ಮ ದಾಳಿಯನ್ನು ಇನ್ನಷ್ಟು ಮೊನಚುಗೊಳಿಸಬೇಕು.

ವಿರಾಟ್ ಕೊಹ್ಲಿ ಅವರ ಬದಲು ಸ್ಥಾನ ಪಡೆದಿರುವ ಯಶಸ್ವಿ ಜೈಸ್ವಾಲ್ ಅವರೂ ಕಣಕ್ಕಿಳಿಯಲು ಕಾಯುತ್ತಿದ್ದಾರೆ. ರೋಹಿತ್ ಶರ್ಮಾ ಹಾಗೂ ಶ್ರೇಯಸ್ ಅಯ್ಯರ್ ಅವರು ಲಯಕ್ಕೆ ಮರಳಬೇಕು. ಶುಭಮನ್ ಗಿಲ್, ಇಶಾನ್ ಕಿಶನ್ ಮತ್ತು ಕೆ.ಎಲ್. ರಾಹುಲ್ ಅವರು ಉತ್ತಮ ಫಾರ್ಮ್‌ನಲ್ಲಿರುವುದರಿಂದ ಬ್ಯಾಟಿಂಗ್ ಬಲಿಷ್ಠವಾಗಿದೆ.

ಆದರೆ ಅಫ್ಗನ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಅನುಭವದ ಕೊರತೆ ಇದ್ದರೂ, ದಿಟ್ಟತನ ಮತ್ತು ಆತ್ಮವಿಶ್ವಾಸ ಬಹಳಷ್ಟಿದೆ. ಭಾರತದ ಬೌಲಿಂಗ್ ಪಡೆಯ ಎದುರು ರೆಹಮಾನುಲ್ಲಾ ಗುರ್ಬಾಜ್ ಅವರು ಧರ್ಮಶಾಲಾದಲ್ಲಿ ಹೊಡೆದಿದ್ದ ಶತಕವೇ ಇದಕ್ಕೆ ಸಾಕ್ಷಿ. ಅವರದ್ದು ಏಕಾಂಗಿ ಹೋರಾಟ. ಮಧ್ಯಮ ಕ್ರಮಾಂಕದಲ್ಲಿ ಹಷ್ಮತ್‌ವುಲ್ಲಾ ಶಹೀದಿ ಮತ್ತು ಅಜ್ಮತ್‌ವುಲ್ಲಾ ಒಮರ್‌ಝೈ ಅವರೂ ತಂಡಕ್ಕೆ ಉತ್ತಮ ಕಾಣಿಕೆ ನೀಡಬಲ್ಲರು. 2023ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಅಫ್ಗನ್ ತಂಡವು ಅಮೋಘವಾಗಿ ಆಡಿತ್ತು. ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ರಶೀದ್ ಖಾನ್ ಹಾಗೂ ಅಲ್ಲಾಹ ಘಜನಫರ್ ಅವರ ಪಾತ್ರ ಮುಖ್ಯವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಭಾರತ ತಂಡದ ನಾಯಕ ಶುಭಮನ್ ಗಿಲ್, ಇಶಾನ್ ಕಿಶನ್ ಮತ್ತು ಕುಲದೀಪ್ ಯಾದವ್

ನೇಷನ್ಸ್ ಕಪ್ ಹಾಕಿ: ಭಾರತಕ್ಕೆ ಮಣಿದ ಜಪಾನ್

ಆಕ್ಲೆಂಡ್ (ಪಿಟಿಐ): ಭಾರತ ಮಹಿಳಾ ತಂಡ, ಮಂಗಳವಾರ ನಡೆದ ತೀವ್ರ ಹೋರಾಟದ ಪಂದ್ಯದಲ್ಲಿ 2–1 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ಗೆ ಅರ್ಹತೆಪಡೆಯಿತು.

ನಾಯಕಿ ಸಲೀಮಾ ಟೆಟೆ ಮತ್ತು ಲಾಲ್ರೆಮ್‌ಸಿಯಾಮಿ ಅವರು ಗೋಲುಗಳನ್ನು ಗಳಿಸಿದರು. ಈ ಟೂರ್ನಿಯ ವಿಜೇತರು ಮುಂದಿನ ವರ್ಷದ ಪ್ರೊ ಲೀಗ್ ಟೂರ್ನಿಯಲ್ಲಿ ಆಡುವ ಅರ್ಹತೆ ಸಂಪಾದಿಸಲಿದ್ದಾರೆ.

ಮೂರನೇ ಕ್ವಾರ್ಟರ್‌ನಲ್ಲಿ (30 ರಿಂದ 45ನೇ ನಿಮಿಷ) ಭಾರತ ನಿರಂತರ ದಾಳಿಗಳ ಮೂಲಕ ಸಾಕಷ್ಟು ಒತ್ತಡ ಹೇರಿದ ಬಳಿಕ ಸಲೀಮಾ ಮೂಲಕ ಮುನ್ನಡೆ ಗಳಿಸಿತು. ಆದರೆ ಎರಡನೇ ನಿಮಿಷಗಳಲ್ಲಿ ಜಪಾನ್ ತಂಡವು ಐ ಹಿರಾಮಿತ್ಸು ಅವರ ಮೂಲಕ ಸ್ಕೋರ್ 1–1 ಸಮಮಾಡಿಕೊಂಡಿತು.

ಆದರೆ ಲಾಲ್ರೆಮ್ ಸಿಯಾಮಿ (49ನೇ ನಿ) ಗಳಿಸಿದ ಗೋಲು ಭಾರತದ ಪಾಲಿಗೆ ನಿರ್ಣಾಯಕವಾಯಿತು. ಅವರಿಗೆ ಸುಶೀಲಾ ಚುನು ಪುಖ್ರಂಬಂ ಅವರು ವೃತ್ತದ ತುದಿಯಿಂದ ನೀಡಿದ ಕರಾರುವಾಕ್ ಪಾಸ್ ಗೋಲಿಗೆ ನೆರವಾಯಿತು. ಇದರ ಬಳಿಕ ಭಾರತದ ರಕ್ಷಣೆ ಆಟಗಾರರು ಜಪಾನ್ ತಂಡಕ್ಕೆ ಗೋಲು ನಿರಾಕರಿಸಿದರು.

ಈ ಪಂದ್ಯವು ಮಿಡ್‌ಫೀಲ್ಡರ್ ಜ್ಯೋತಿ ಪಾಲಿಗೆ ನೂರನೇ ಅಂತರರಾಷ್ಟ್ರೀಯ ಪಂದ್ಯವಾಯಿತು.

ಭಾರತ ತಂಡವು, ಎ ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಗುರುವಾರ ಉರುಗ್ವೆ ತಂಡವನ್ನು ಎದುರಿಸಲಿದೆ. ಗುಂಪಿನಿಂದ ಸೆಮಿಫೈನಲ್ ತಲುಪುವ ಇನ್ನೊಂದು ತಂಡದ ನಿರ್ಧಾರಕ್ಕೆ ಜಪಾನ್ ಮತ್ತು ಅಮೆರಿಕ ನಡುವಣ ಸೆಣಸಾಟ ನಡೆಯಲಿದೆ.

ಸಲೀಮಾ ಟೆಟೆ